

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine


Vol -65 Issue-11 November 2024 Pages: 40 Annual Subscription: ₹ 100/-

ಸಂಪುಟ: 65 ಸಂಚಿಕೆ: 11 ನವೆಂಬರ್ 2024 ಪುಟಗಳು: 40 ವಾರ್ಷಿಕ ಚಂದ ರೂ. 100/-


## ಹೃತ್ಪೂರ್ವಕ ಅಭಿನಂದನೆಗಳು





ಹಿರಿಯ ಸಾಹಿತಿಗಳು, ಜಾನಪದ ವಿದ್ವಾಂಸರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ
ಆಜೀವ ಧರ್ಮದರ್ಶಿಗಳು, ಪ್ರಕಟಣಾ ಸಮಿತಿ ಅಧ್ಯಕ್ಷರು ಹಾಗೂ ನಮ್ಮೆಲ್ಲರ ಮಾರ್ಗದರ್ಶಕರಾಗಿರುವ

**ನಾಡೋಜ ಡಾ. ಗೊ.ರು. ಚನ್ನಬಸಪ್ಪ** ಅವರು

2024ನೇ ಡಿಸೆಂಬರ್ 20, 21 ಮತ್ತು 22ರಂದು ಸಕ್ಕರೆ ನಾಡು ಮಂಡ್ಯದಲ್ಲಿ ಜರುಗಲಿರುವ
87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಸರ್ವಾಧ್ಯಕ್ಷರಾದ ಗೌರವಾನ್ವಿತರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ



ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಶತಮಾನೋತ್ಸವ ವರ್ಷದ ಉದ್ಘಾಟನೆ ಹಾಗೂ ಜಿಲ್ಲಾ ತರಬೇತಿ ಕೇಂದ್ರದ ನೂತನ ಸಭಾಭವನದ ಸಾಂಕೇತಿಕ ಉದ್ಘಾಟನಾ ಕಾರ್ಯಕ್ರಮವು 19 ನವೆಂಬರ್ 2024ರಂದು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳದಲ್ಲಿ ಜರುಗಿತು, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಕಾರ್ಯಕ್ರಮವನ್ನು ದೀಪಬೆಳಗಿಸಿ ಉದ್ಘಾಟಿಸಿ ಶತಮಾನೋತ್ಸವ ಕಾರ್ಯಕ್ರಮದ ಲಾಂಚನವನ್ನು ಬಿಡುಗಡೆಗೊಳಿಸಿದರು. ಡಾ. ಎಂ. ಮೋಹನ್ ಆಳ್ವ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎನ್. ಮಹೇಶ್, ಅಧ್ಯಕ್ಷರು, ರಾಜ್ಯ ಪರಿಸರ ತಜ್ಞರ ಮೌಲ್ಯಮಾಪನಾ ಸಮಿತಿ ಹಾಗು ರಾಜ್ಯ ಸಂಸ್ಥೆ ಉಪಾಧ್ಯಕ್ಷರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾಜಿ ವಿಧಾನ ಪರಿಷತ್ ಸದಸ್ಯರು, ಎಂ.ಆರ್.ಪಿ.ಎಲ್. ಗ್ರೂಪ್‌ನ ಮ್ಯಾನೇಜರ್, ಶ್ರೀ ಕೃಷ್ಣಹೆಗ್ಡೆ, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಕರ್ನಾಲ್ ವಿರಾಜ್ ಕಾಮತ್, ಗ್ರೂಪ್ ಕಮಾಂಡರ್, ಎನ್.ಸಿ.ಸಿ ಗ್ರೂಪ್ ಹೆಡ್ ಕ್ವಾರ್ಟಸ್, ಡಾ|| ಕೆ.ವಿ. ರಾವ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ನಿರ್ದೇಶಕರು ಪಿಲಿಕುಳ ಪ್ರದೇಶಿಕ ವಿಜ್ಞಾನ ಕೇಂದ್ರ, ಶ್ರೀ ಕೆ. ಸುಕುಮಾರ್, ಲೀಡರ್ ಟ್ರೈನರ್, ಶ್ರೀ ಮಂಜುನಾಥ ಭಂಡಾರಿ, ಶ್ರೀ ಮುಸ್ತಾಫ, ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಶ್ರೀ ಬೇಬಿ ಮಾಥ್ಯು, ಶ್ರೀಮತಿ ರಾಣಿ ಮಾಚಯ್ಯ, ಶ್ರೀ ಎಂ. ಪ್ರಭಾಕರಭಟ್ ಇವರುಗಳು ಉಪಸ್ಥಿತರಿದ್ದರು.



ನವೆಂಬರ್ 07 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಪನಾ ಮತ್ತು ಧ್ವಜಾ ದಿನಾಚರಣೆಯ ಅಮೃತ ಮಹೋತ್ಸವದ ಪ್ರಯುಕ್ತ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಧ್ವಜ ಚೀಟಿಗಳನ್ನು ಬಿಡುಗಡಗೊಳಿಸಿ ಶುಭಕೋರಿದರು. ಕಾರ್ಯಕ್ರಮದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಶ್ರೀ ಎಂ.ಎ. ಖಾಲಿದ್, ಶ್ರೀಮತಿ ರಾಧಾ ವೆಂಕಟೇಶ್, ಶ್ರೀ ಎಂ.ಎಸ್. ಸತೀಶ್, ಶ್ರೀ ಕೆ.ಹೆಚ್. ಜಯರಾಮಯ್ಯ ಉಪಸ್ಥಿತರಿದ್ದರು.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್‍ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 65 Issue: 11 November 2024

## ಒಳಪುಟಗಳಲ್ಲಿ...

| | |
|---|---|
| ರಾಜ್ಯ ಮುಖ್ಯ ಆಯುಕ್ತರ ನುಡಿ | ...04 |
| ಸಂಪಾದಕೀಯ | ...05 |
| ನಾಡೋಜ ಡಾ. ಗೊ.ರು. ಚನ್ನಬಸಪ್ಪ | ...06 |
| ಡಿಸೆಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು | ...08 |
| ರಾಜ್ಯ ಸಂಸ್ಥೆಯ ನೇತೃತ್ವದಲ್ಲಿ ನಿರ್ವಹಿಸಲ್ಪಟ್ಟ ನವೆಂಬರ್ 2024ರ ಕಾರ್ಯಚಟುವಟಿಕೆಗಳು | ...09 |
| ಹಾಸನದ ಹಾಸನಾಂಬಾ ದೇವಸ್ಥಾನದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಶಿಬಿರ | ...13 |
| ರಾಜ್ಯ ಮಟ್ಟದ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಸಿರಿಧಾನ್ಯ ಮಾಹಿತಿ ಶಿಬಿರ | ...15 |
| ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರಗಳ ವಿವರಗಳು | ...17 |
| ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ರೋವರ್ಸ್ ರೇಂಜರ್ಸ್‌ಗಳ ಪರೀಕ್ಷಾ ಶಿಬಿರಗಳ ವಿವರಗಳು | ...18 |
| ಜಿಲ್ಲಾ ವಾರ್ತೆಗಳು | ...20 |
| ಹಾಸನದ ಬಾಯ್ ಸ್ಕೌಟ್‌ಗಳು ಯಗಚಿ ನದಿಗೆ ಹೋಗಿ ಬಂದದ್ದು | ...36 |
| ಪ್ರಕೃತಿ ಒಡ್ಡುವ ಸವಾಲುಗಳು-3 ಶಿಬಿರಾರ್ಥಿಗಳ ಆಪ್ತಮಿತ್ರ, ಮಲಗುವ ಚೀಲ | ...37 |
| ಶ್ರದ್ಧಾಂಜಲಿ | ...38 |

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್-ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು

080-2226 0017, 2226 7470 | www.bsgkarnataka.org | The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್-ಗೈಡ್ ಬಂಧುಗಳಿಗೆ ಶುಭಾಶಯಗಳು**

ನವೆಂಬರ್ 7 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನಾಚರಣೆ. ಈ ಬಾರಿಯ ಸಂಸ್ಥಾಪನಾ ದಿನಾಚರಣೆ ಸುವರ್ಣ ಮಹೋತ್ಸವವಾದ್ದರಿಂದ, ವಿಶೇಷ ಮಹತ್ವವನ್ನು ಹೊಂದಿದೆ. ಈ ಮಹತ್ವದ ಮೈಲಿಗಲ್ಲನ್ನು ಗೌರವಿಸಲು, ಈ ವರ್ಷಪೂರ್ತಿ ದೇಶಾದ್ಯಂತ ಸ್ಕೌಟಿಂಗ್-ಗೈಡಿಂಗ್‌ನ ವೈಶಿಷ್ಟಪೂರ್ಣ ಪರಂಪರೆಯನ್ನು ಬಿಂಬಿಸುವ ಕಾರ್ಯಕ್ರಮಗಳ ಸರಣಿಯನ್ನು ರಾಷ್ಟ್ರಸಂಸ್ಥೆ ಯೋಜಿಸಿದೆ. ಚಳವಳಿಯನ್ನು ಇನ್ನಷ್ಟು ಜನಪ್ರಿಯಗೊಳಿಸಲು ಇದು ಸಹಕಾರಿಯಾಗಲಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹಲವಾರು ವಿಶಿಷ್ಟ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಮೂಲಕ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ರಾಜ್ಯದ ವಿವಿಧ ಕಡೆಗಳಲ್ಲಿ ಹಲವು ಕಾರ್ಯಕ್ರಮಗಳ ಆಚರಣೆಗಳಾಗಿದ್ದರೂ, ನಮ್ಮ ಕೆಲವು ಜಿಲ್ಲಾ ಮತ್ತು ಸ್ಥಳೀಯ ಘಟಕಗಳಲ್ಲಿ ಅಂದು ಇನ್ನಷ್ಟು ಸ್ಪಂದನೆ ಮತ್ತು ತೀವ್ರತೆಯಿಂದ ಆಚರಿಸಬೇಕೆಂದು ಸೂಚಿಸುತ್ತೇನೆ.

ರಾಜ್ಯ ಸಂಸ್ಥೆಯಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಂಸ್ಥೆಗಳ ಸಹಯೋಗದೊಂದಿಗೆ, ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲಾಗಿದೆ. ಭಾರತದ ಮೊದಲ ಸ್ಕೌಟ್ ಟ್ರೂಪ್‌ನ ಜನ್ಮಸ್ಥಳವಾಗಿರುವ ಬೆಂಗಳೂರಿನ ಪ್ರತಿಷ್ಠಿತ ಬಿಷಪ್ ಕಾಟನ್ ಶಾಲೆಯಲ್ಲಿ ಸಂಸ್ಥಾಪನಾ ದಿನಾಚರಣೆಯ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದು ಔಚಿತ್ಯಪೂರ್ಣವಾಗಿತ್ತು. ಇದು ನಮ್ಮ ರಾಜ್ಯಕ್ಕೆ ಹೆಮ್ಮೆ ಮತ್ತು ಗೌರವದ ವಿಷಯವಾಗಿತ್ತು. ಈ ಎರಡು ಜಿಲ್ಲಾ ಸಂಸ್ಥೆಗಳ ಎಲ್ಲಾ ಪದಾಧಿಕಾರಿಗಳಿಗೆ, ದಳ ನಾಯಕರುಗಳಿಗೆ ಮತ್ತು ಮಕ್ಕಳಿಗೆ ನಾನು ಅಭಿನಂದಿಸುತ್ತೇನೆ. ಇದು ಸುವರ್ಣ ಮಹೋತ್ಸವ ವರ್ಷವಾದ್ದರಿಂದ, ಸಂಸ್ಥೆಯ ಇತಿಹಾಸ, ಪರಂಪರೆ ಮತ್ತು ಸಾಧನೆಗಳ ಪ್ರತಿಫಲವನ್ನು ಸಮರ್ಪಕವಾಗಿ ಅನಾವರಣಗೊಳಿಸುವ ಮೂಲಕ ಸ್ಕೌಟ್-ಗೈಡ್ಸ್ ಚಳುವಳಿಯನ್ನು ಹೆಚ್ಚು ಜನರ ಹೃದಯಕ್ಕೆ ತಲುಪಿಸುವ ಪ್ರಯತ್ನ ನಾವೆಲ್ಲರೂ ಮಾಡೋಣ.

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಹಿರಿಯ ಸಾಹಿತಿ ಹಾಗೂ ವಿದ್ವಾಂಸರಾದ ಡಾ. ಗೊ.ರು. ಚನ್ನಬಸಪ್ಪ ಅವರನ್ನು ಆಯ್ಕೆ ಮಾಡಿರುವುದು ಅತ್ಯಂತ ಶ್ಲಾಘನೀಯ ವಿಷಯವಾಗಿದೆ. ಸಮಾಜದಲ್ಲಿ ಸೌಹಾರ್ದ ವಾತಾವರಣದ ನಿರ್ಮಾಣ, ಬಹುಸಂಸ್ಕೃತಿಯ ಸಹಿಷ್ಣುತೆ ಮತ್ತು ಸಾಮರಸ್ಯವನ್ನು ಬೆಳೆಸುವ ಅವರ ನಂಬಿಕೆಗಳು ಸ್ಕೌಟ್ಸ್-ಗೈಡ್ಸ್ ಚಳವಳಿಯ ಮೂಲಭೂತ ತತ್ವಗಳಿಗೆ ಹತ್ತಿರವಾಗಿವೆ. ಈ ಹಿನ್ನೆಲೆಯಲ್ಲಿ ಸ್ಕೌಟ್ಸ್-ಗೈಡ್ಸ್ ಚಳುವಳಿಯನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡು, ಕಳೆದ 5 ದಶಕಗಳಿಂದ ಈ ಚಳವಳಿಯನ್ನು ಪ್ರೋತ್ಸಾಹಿಸುತ್ತಾ, ಮಾರ್ಗದರ್ಶನ ಮಾಡುತ್ತಿರುವ ಅವರ ಆಯ್ಕೆಯಿಂದ ನಮ್ಮ ಸಂಸ್ಥೆಗೂ ಹೆಮ್ಮೆ ಮತ್ತು ಗೌರವ ತಂದಿದೆ. ಈ ಹಿರಿಯ ಚೇತನಕ್ಕೆ ಸಂಸ್ಥೆಯ ಪರವಾಗಿ ಮತ್ತು ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕನ್ನಡ ಸಾರಸ್ವತ ಲೋಕಕ್ಕೆ ಅವರ ಸೇವೆ ಅಪಾರವಾದುದು. ಅಕಾಡೆಮಿಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಮಹತ್ವದ ಕೊಡುಗೆ ನೀಡಿದ್ದಾರೆ. ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕದಲ್ಲಿ ಜಾನಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಗೊ.ರು.ಚ ಅವರು. ಜನಪರ ಚಿಂತನೆಗಳು ಮತ್ತು ಜಾತ್ಯಾತೀತ ತತ್ವಗಳ ಪರವಾದ ಅವರ ತುಡಿತ ಅತ್ಯಂತ ಪ್ರಭಾವಶಾಲಿಯಾದುದು.

ಡಿಸೆಂಬರ್ 20, 21 ಮತ್ತು 22 ರಂದು ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ಸಂಸ್ಥೆ ಸಮಗ್ರವಾಗಿ ತೊಡಗಿಸಿಕೊಂಡು, ಈ ಮಹತ್ವದ ಕಾರ್ಯಕ್ರಮಕ್ಕೆ ಬೆಂಬಲ ನೀಡಲು ಉತ್ಸುಕವಾಗಿದ್ದೇವೆ.

ನಮ್ಮ ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿರುವ ಗೀತಗಾಯನ ಸ್ಪರ್ಧೆಗಳು ಸ್ಥಳೀಯ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಸಲಾಗಿದ್ದು, ಈಗ ಮೈಸೂರು, ಧಾರವಾಡ, ಕಲಬುರಗಿ ಮತ್ತು ಬೆಂಗಳೂರಿನಲ್ಲಿ ವಿಭಾಗೀಯ ಸ್ಪರ್ಧೆಗಳೂ ಯಶಸ್ವಿಯಾಗಿ ಪೂರ್ಣಗೊಂಡಿವೆ. ಮುಂದುವರೆದಂತೆ, ಡಿಸೆಂಬರ್ 01 ರಂದು ತುಮಕೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ಜರುಗಲಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲು ನೆರವಾದ ಪ್ರತಿಯೊಬ್ಬರಿಗೂ ಹೃತ್ಪೂರ್ವಕವಾದ ಧನ್ಯವಾದಗಳು.

ನವೆಂಬರ್ 19 ರಂದು ಪಿಲಿಕುಳದಲ್ಲಿರುವ ನಮ್ಮ ಜಿಲ್ಲಾ ತರಬೇತಿ ಕೇಂದ್ರದಲ್ಲಿ ನೂತನ ಸಭಾಭವನದ ಉದ್ಘಾಟನೆಗೊಂಡಿದ್ದು ಸಂತೋಷ ತಂದಿದೆ. ಈ ಕಟ್ಟಡದ ಕನಸನ್ನು ಸಾಕಾರಗೊಳಿಸಿದ ಜಿಲ್ಲಾ ಮುಖ್ಯ ಆಯುಕ್ತರಾದ ಡಾ.ಮೋಹನ್ ಆಳ್ವ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ತನ್ನ ಶತಮಾನೋತ್ಸವದ ಸಂಭ್ರಮದಲ್ಲಿದ್ದು, ಈ ಜಿಲ್ಲಾ ಸಂಸ್ಥೆಯ ನೂರು ವರ್ಷಗಳ ಯಶಸ್ವೀ ಪಯಣವು ಸ್ಮರಣೀಯವಾಗಿದೆ. ಈ ಮಹತ್ವದ ಸಂದರ್ಭದಲ್ಲಿ, ನಮ್ಮ ಸಂಸ್ಥೆಯ 106ನೇ ರಾಜ್ಯ ಪರಿಷತ್ತಿನ ಸಭೆಯನ್ನು ನೂತನ ಸಭಾಭವನದಲ್ಲಿ ಆಯೋಜಿಸಿರುವುದು ನಿಜಕ್ಕೂ ಹರ್ಷದ ವಿಚಾರವಾಗಿದೆ.

ನವೆಂಬರ್ 14 ರಂದು ದಾವಣಗೆರೆ ಜಿಲ್ಲೆಯ ಕೊಂಡಜ್ಜಿಯ ಸ್ಕೌಟ್ಸ್-ಗೈಡ್ಸ್ ತರಬೇತಿ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ ಮತ್ತು ದಿ. ಕೊಂಡಜ್ಜಿ ಬಸಪ್ಪನವರ 42ನೇ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮ ಹಾಗೂ ರಾಜ್ಯಮಟ್ಟದ ರೋವರ್ಸ್-ರೇಂಜರ್ಸ್ ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರ ಯಶಸ್ವಿಯಾಗಿ ನಡೆದವು. ಶಾಮನೂರು ಕಲ್ಲಪ್ಪ ಸಾವಿತ್ರಮ್ಮ ಆಡಳಿತ ಕಚೇರಿ ಮತ್ತು ಎಂ.ಕೆ. ಪಾಣಿ ಅತಿಥಿ ಗೃಹ ನೂತನ ಕಟ್ಟಡಗಳ ಉದ್ಘಾಟನೆಯೂ ಈ ಸಂದರ್ಭದಲ್ಲಿ ನಡೆದಿದ್ದು ಸಂದರ್ಭೋಚಿತವಾಗಿತ್ತು. ದಿವಂಗತ ಬಸಪ್ಪ ಅವರ ಜನಪರ ಕಾಳಜಿ ಹಾಗೂ ಸ್ಕೌಟ್ಸ್-ಗೈಡ್ಸ್ ಚಳುವಳಿಗೆ ನೀಡಿದ ಮಹತ್ವದ ಕೊಡುಗೆಯನ್ನು ನಾನು ಸ್ಮರಿಸುತ್ತೇನೆ.

ನವೆಂಬರ್ 19 ರಿಂದ 25ರ ವರೆಗೆ ನಮ್ಮ ರಾಜ್ಯ ಸಂಸ್ಥೆಯ ವತಿಯಿಂದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡೆ ಸಹಕಾರದೊಂದಿಗೆ, ಬೆಂಗಳೂರಿನ ಹೆಚ್.ಎ.ಎಲ್ ರೋವರ ಡೆನ್‌ನಲ್ಲಿ ರಾಷ್ಟ್ರೀಯ ಮಟ್ಟದ ಏರ್ ಸ್ಕೌಟರ್ಸ್ ಮತ್ತು ಗೈಡರ್ಸ್ ತರಬೇತಿ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಇದರ ಜೊತೆಗೆ ನವೆಂಬರ್ ತಿಂಗಳಲ್ಲಿ ರಾಜ್ಯಾದ್ಯಂತ ವಿವಿಧ ತರಬೇತಿಗಳು, ಕಾರ್ಯಕ್ರಮಗಳು ಹಾಗೂ ಸೇವಾ ಚಟುವಟಿಕೆಗಳು ಯಶಸ್ವಿಯಾಗಿ ನೆರವೇರಿದ್ದು, ಇದಕ್ಕೆ ಪ್ರೋತ್ಸಾಹ, ಬೆಂಬಲ ನೀಡಿದ ಶಿಕ್ಷಣ ಇಲಾಖೆಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಈ ಕಾರ್ಯ ಚಟುವಟಿಕೆಗಳಿಗೆ ಸಹಕರಿಸಿದ, ತೊಡಗಿಸಿಕೊಂಡು ಭಾಗವಹಿಸಿದ ಪ್ರತಿಯೊಬ್ಬರಿಗೂ ನಾನು ಅಭಿನಂದನೆಗಳನ್ನು ವ್ಯಕ್ತಪಡಿಸುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಸಂಪಾದಕೀಯ



ಮಾನ್ಯರೆ,

ಹೊಸತನ್ನು ಹುಡುಕುವ, ಸಾಹಸ ಪ್ರವೃತ್ತಿಯನ್ನು ಸಭ್ಯ ನಡವಳಿಕೆಗಳನ್ನು ವ್ಯಕ್ತಿಯ ಎಳೆಯ ವಯಸ್ಸಿನಲ್ಲಿ ಮೈಗೂಡಿಸುವ ಒಂದು ಅನುಪಮ ಪ್ರಯೋಗಾಲಯ ಸ್ಕೌಟ್ಸ್–ಗೈಡ್ಸ್ ಆಂದೋಲನ. ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿ ಮಾಡುವುದು ಮತ್ತು ಇವರು ಸಮಾಜದ ಗೌರವಾನ್ವಿತ ವ್ಯಕ್ತಿಗಳಾಗಿ ಬಾಳಲು ಮಾರ್ಗದರ್ಶನ ನೀಡುವುದು ಶಿಕ್ಷಣಾಶಕ್ತರೆಲ್ಲರ ಆದ್ಯ ಕರ್ತವ್ಯ ಆಗಿರುವುದು.

ನಮ್ಮ ದೇಶದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕಾರ್ಯಕ್ರಮ, ಚಟುವಟಿಕೆಗಳು, ಬಹುತೇಕವಾಗಿ ಶಾಲಾ–ಕಾಲೇಜುಗಳಲ್ಲಿ ನಿರ್ವಹಣೆ ಆಗುವವು ಆಗಿರುವುದರಿಂದ, ಶಾಲಾ/ ಕಾಲೇಜುಗಳ ಮುಖ್ಯಸ್ಥರ, ಶಿಕ್ಷಕ ವೃಂದದವರ, ಉಪನ್ಯಾಸಕರುಗಳ ಪಾತ್ರ ಅಪಾರ. ಇವರು ತಮ್ಮ ತರಗತಿಯ ವಿಷಯ ನಿರ್ವಹಣೆಯ ಶಿಕ್ಷಕ/ ಉಪನ್ಯಾಸಕ ಕಾರ್ಯಕ್ಕಷ್ಟೆ ತಮ್ಮ ಜವಾಬ್ದಾರಿಗಳನ್ನು ಸೀಮಿತಗೊಳಿಸಿಕೊಳ್ಳದೇ ಅವರು ಸ್ಕೌಟ್–ಗೈಡ್ ಧ್ಯೇಯ್ಯೋದೇಶಗಳನ್ನು ಅರಿತು ಅವುಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳುವಲ್ಲಿ ಮಾರ್ಗದರ್ಶನ ನೀಡಲು ಕಾರ್ಯಪ್ರವೃತ್ತರಾಗಬೇಕಾಗಿರುವುದು, ಇಂದಿನ ಶಿಕ್ಷಣ ಇಲಾಖೆಗಳೆಲ್ಲರ, ಶಿಕ್ಷಣಾಶಕ್ತರೆಲ್ಲರ ಮಹತ್ವಾಕಾಂಕ್ಷೆ ಆಗಿರುವುದು. ಇವರ ಸೃಜನಶೀಲತೆ, ಕಲ್ಪನಾ ಶಕ್ತಿಗಳು, ವಿದ್ಯಾರ್ಥಿಗಳು ಸ್ವಾರಸ್ಯಮಯವಾದ, ಸಾಹಸಮಯವಾದ, ಉಲ್ಲಾಸಭರಿತವಾದ ಮತ್ತು ಸಂತೋಷದಾಯಕವಾದ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ಬಹಳಷ್ಟು ಪ್ರೇರಕ ಹಾಗೂ ಪೂರಕ ಆಗಿರುವುದು ನಿರ್ವಿವಾದ ಜನಾಂಗದ ಸುಧಾರಣಾ ಪ್ರಕ್ರಿಯೆಯಲ್ಲಿ, ಇತರರೆಲ್ಲರಿಗಿಂತ ಅಧಿಕ ನಂಬಿಕೆಯನ್ನು ಶಿಕ್ಷಕ ವೃತ್ತಿ ತನ್ನದಾಗಿಸಿಕೊಂಡಿರುವುದರಿಂದ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣದ ಸಕ್ರಿಯ ಅನುಷ್ಠಾನದಲ್ಲಿ ಇವರ ಪಾತ್ರ ಅಪಾರ. ಇದನ್ನು ಮನಗಂಡು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಳಗಳ ನಾಯಕರುಗಳು, ಸ್ಥಳೀಯ/ ಜಿಲ್ಲಾ/ ರಾಜ್ಯ ಸಂಸ್ಥೆಗಳವರು, ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿ ಕಾರ್ಯಕ್ರಮ, ಚಟುವಟಿಕೆಗಳ ಸಕ್ರೀಯ ಅನುಷ್ಠಾನದಲ್ಲಿ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ಬಹಳಷ್ಟು ಶ್ರಮಿಸುತ್ತಿರುವರಾದರೂ ಇನ್ನು ಹೆಚ್ಚು ಹೆಚ್ಚು ವಿಸ್ತರಿಸಬೇಕಾಗಿರುವುದು ಅತ್ಯಗತ್ಯ ಆಗಿರುವುದು. ಈ ಬಗ್ಗೆ ಆಯಾಯ ಜಿಲ್ಲೆಗಳಲ್ಲಿ ಏರ್ಪಡಿಸಲಿರುವ ಮೂಲ ತರಬೇತಿ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಶಿಕ್ಷಕರು ಭಾಗವಹಿಸಿ ತರಬೇತಿ ಹೊಂದಿ ದಳಗಳನ್ನು ಪ್ರಾರಂಭಿಸಿ, ಯಶಸ್ವಿಗೊಳಿಸಲು ವಿನಂತಿಸಿದೆ.

ವಿದ್ಯಾರ್ಥಿಗಳ ಗುಣಮಟ್ಟ ಸಾಧನೆಯ ಪ್ರಗತಿಪರ ಶಿಕ್ಷಣದ ಸಾಧನೆಯನ್ನು ಅರಿಯುವಲ್ಲಿ ವಿವಿಧ ತರಬೇತಿ ಕೇಂದ್ರಗಳಲ್ಲಿ ಏರ್ಪಟ್ಟ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರಗಳು ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿದ ಎಲ್ಲಾ ದಳನಾಯಕರ ವೃಂದದವರಿಗೆ ಮತ್ತು ಸಹಕರಿಸಿದ ಸರ್ವರಿಗೂ ಅಭಿನಂದನೆಗಳು.

ವಿದ್ಯಾರ್ಥಿಗಳಲ್ಲಿ ದೇಶಾಭಿಮಾನವನ್ನು, ರಾಷ್ಟ್ರ ಪ್ರೇಮವನ್ನು ಮೂಡಿಸುವಲ್ಲಿ ಪೂರಕ ಹಾಗೂ ಪ್ರೇರಕವಾಗಿ ನಿರ್ವಹಿಸಲು ಆದೇಶಿಸಿದ್ದ, ದೇಶಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧಾ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಸ್ಥಳೀಯ/ ಜಿಲ್ಲಾ ಮಟ್ಟಗಳಲ್ಲಿ ಸಮರ್ಪಕವಾಗಿ ನಿರ್ವಹಿಸಿ ವಿಭಾಗೀಯ ಮಟ್ಟದಲ್ಲೂ ಯಶಸ್ವಿ ಆಗಿ ನಿರ್ವಹಿಸಿರುವ ಸರ್ವರಿಗೂ ಅನಂತಾನಂತ ವಂದನೆಗಳು. ಈ ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ 50,000ಕ್ಕು ಹೆಚ್ಚು ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳನ್ನು ಅರಿತು, ಕಲಿತು, ಸ್ಪರ್ಧಿಸಿ, ಹರ್ಷಿತರಾಗಿ, ಜಿಲ್ಲಾ ಮತ್ತು ವಿಭಾಗೀಯ ಮಟ್ಟದಲ್ಲಿ ವಿಜೇತರಾಗಿ ಬಹುಮಾನಿತರಾಗಿರುವುದು ಅಭಿನಂದನಾರ್ಹ. ಡಿಸೆಂಬರ್ 01 ರಂದು 4 ವಿಭಾಗೀಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನದಲ್ಲಿ ವಿಜೇತರಾದ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳಿಗೆ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳಿಗೆ ತುಮಕೂರಿನಲ್ಲಿ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಿರುವುದನ್ನು ತಿಳಿಸಲು ಹರ್ಷಿಸುತ್ತೇನೆ.

ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆಯಲ್ಲಿ ಪೂಜ್ಯ ದಿ. ಕೊಂಡಜ್ಜಿ ಬಸಪ್ಪನವರ 42ನೇ ಪುಣ್ಯ ಸ್ಮರಣೆ ಕಾರ್ಯ ಯಶಸ್ವಿಆಗಿ ನಿರ್ವಹಣೆ ಆಗಿದ್ದು, ಹೊಸ ಕಟ್ಟಡಗಳ ಉದ್ಘಾಟನೆಗಳೊಂದಿಗೆ ಅವರ ಸ್ಮರಣಾರ್ಥ ಕಾರ್ಯಕ್ರಮದಲ್ಲಿ 400ಕ್ಕು ಹೆಚ್ಚು ವಿದ್ಯಾರ್ಥಿಗಳು ಪದಕ ತರಬೇತಿ ಶಿಬಿರದಲ್ಲಿ ಭಾಗವಹಿಸಿ, ವಿವಿಧ ಪದಕಗಳನ್ನು ಹೊಂದಿರುವುದು ಅಭಿನಂದನಾರ್ಹ.

ಕರ್ನಾಟಕ ರಾಜ್ಯ ಸಂಸ್ಥೆಯ ನೆರವಿನೊಂದಿಗೆ ರಾಷ್ಟ್ರೀಯ ಸಂಸ್ಥೆಯ ನೇತೃತ್ವದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಗುಣಾತ್ಮಕ ಶಿಕ್ಷಣಕ್ಕೆ ಪೂರಕವಾಗಿ ಡಾ॥ ಆನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಆರ್.ಓ.ಟಿ ಮತ್ತು ಪ್ರಿ–ಎಎಲ್‌ಟಿ ತರಬೇತಿಗಳು ಯಶಸ್ವಿ ಆಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿದ ಸರ್ವರಿಗೂ ರಾಜ್ಯ ಸಂಸ್ಥೆಯ ಪರವಾಗಿ ಅನಂತಾನಂತ ಕೃತಜ್ಞತೆಗಳು.

ನವೆಂಬರ್ 19 ರಿಂದ 25ರ ವರೆಗೆ ಹೆಚ್‌ಎಎಲ್, ಬೆಂಗಳೂರಿನಲ್ಲಿ ಏರ್ಪಟ್ಟ ಏರ್ ಸ್ಕೌಟರ್/ ಗೈಡರ್/ ರೋವರ್ ಸ್ಕೌಟ್ ಲೀಡರ್/ ರೇಂಜರ್ ಲೀಡರ್ ಟ್ರೈನಿಂಗ್ ತರಬೇತಿಯಲ್ಲಿ 40ಕ್ಕು ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿದ್ದು, ಅದರ ಯಶಸ್ವಿ ನಿರ್ವಹಣೆಯಲ್ಲಿ ತರಬೇತಿ ನಾಯಕರ, ಸಂಪನ್ಮೂಲ ವ್ಯಕ್ತಿಗಳು ಹೆಚ್‌ಎಎಲ್ ಸಂಸ್ಥೆಯ ಇತರ ಎಲ್ಲಾ ಅಧಿಕಾರಿಗಳ ಪಾತ್ರ ಅಪಾರ.

ಭವ್ಯ ಯುವ ಜನಾಂಗವನ್ನು ಹೊಂದುವಲ್ಲಿ ಉತ್ತಮ ತರಬೇತಿ ಕೇಂದ್ರದ ಅವಶ್ಯಕತೆಯನ್ನು ಮನಗಂಡು ರಾಷ್ಟ್ರದಲ್ಲೇ ಅತ್ಯುತ್ತಮ ಎನ್ನಿಸಲಿರುವ ಭಾರತ್ ಸ್ಕೌಟ್ಸ್–ಗೈಡ್ಸ್ ತರಬೇತಿ ಕೇಂದ್ರವನ್ನು, ಪಿಳಿಕುಳ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಸನ್ಮಾನ್ಯ ಡಾ॥ ಮೋಹನ್ ಆಳ್ವ, ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಸಂಸ್ಥೆ, ಮೂಡಬಿದರೆ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲೆ ಇವರು ನಿರ್ಮಿಸುವಲ್ಲಿ ಶ್ರಮಿಸುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನ ಬೆಳಸುವಲ್ಲಿ ಅವರ ಮನಸುಗಳನ್ನು ಕಟ್ಟುವಲ್ಲಿ ಇವರ ಪ್ರಯತ್ನ ಮತ್ತು ಶ್ರಮಕ್ಕೆ ನಮ್ಮ ರಾಜ್ಯ/ ರಾಷ್ಟ್ರ ಸಂಸ್ಥೆಗಳ ಸರ್ಕಾರದ ಬೆಂಬಲ, ಶಿಕ್ಷಣಾಶಕ್ತರೆಲ್ಲರ ಪ್ರೋತ್ಸಾಹ ಇಂದಿನ ಅತ್ಯಗತ್ಯವಾಗಿರುವುದು.

ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮಾಸ ಪತ್ರಿಕೆಯ ಗೌರವ ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಕಟಣಾ ಅಧ್ಯಕ್ಷರು, ಮಿತ ಭಾಷೆಯ, ಹಿತ ನುಡಿಯ ಸಜ್ಜನರಾಗಿರುವ, ಜೊತೆಗೆ ಗಾಂಧಿ ಚಿಂತನೆ ಶರಣ ಚಿಂತನೆಗಳನ್ನು ಮೈಗೂಡಿಸಿಕೊಂಡು ನಮ್ಮೆಲ್ಲರಿಗೂ ಆದರ್ಶ ಪ್ರಾಯ ಗುರುಗಳಾಗಿರುವ ಮಾನ್ಯ ನಾಡೋಜ ಡಾ॥ ಗೊ.ರು. ಚನ್ನಬಸಪ್ಪರವರನ್ನು 87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯನ್ನುಂಟು ಮಾಡಿರುವುದಾಗಿದೆ. ಅವರಿಗೆ ಅನಂತಾನಂತ ಅಭಿನಂದನೆಗಳು. ಒಟ್ಟಿನಲ್ಲಿ ನವೆಂಬರ್ 2024ರಲ್ಲಿ ನಿರ್ವಹಿಸಲು ಯೋಜಿಸಿದ್ದ ಎಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಚಟುವಟಿಕೆಗಳು, ಕಾರ್ಯಕ್ರಮಗಳು ಸಕಾಲದಲ್ಲಿ ಸಮರ್ಪಕವಾಗಿ ನಿರ್ವಹಣೆ ಆಗುವಲ್ಲಿ ಶ್ರಮಿಸಿದ ಸರ್ವರಿಗೂ ಅಭಿನಂದನೆಗಳು.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ನಾಡೋಜ
# ಡಾ. ಗೊ.ರು. ಚನ್ನಬಸಪ್ಪ



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಮಣಶ್ರೀ ಪ್ರತಿಷ್ಠಾನದ ಸಹಯೋಗದಲ್ಲಿ ನೀಡಿದ "ಜೀವಮಾನ ಸಾಧನಾ ಪ್ರಶಸ್ತಿ ಪುರಸ್ಕೃತರಾದ" ಗೊಂಡೇದಹಳ್ಳಿ ರುದ್ರಪ್ಪ ಚನ್ನಬಸಪ್ಪನವರನ್ನು (ಗೊರುಚ) ನಮ್ಮ ನಾಡಿನ ಪರಮ ದಾರ್ಶನಿಕರಾದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ಕೆಳಕಂಡ ಮಾತುಗಳಿಂದಲೇ, ಪರಿಚಯಿಸುವುದು ಸಂದರ್ಭೋಚಿತವೆಂದು ನಾವು ಭಾವಿಸಿದ್ದೇವೆ:

"ಕನ್ನಡ ನಾಡಿನ ಹಿರಿಯ ಚಿಂತಕರಾದ ಶ್ರೀ ಗೊ.ರು.ಚ. ಅವರದು ಸರಳ, ಸುಂದರ, ಶರಣ ಜೀವನ. ಮನ-ಮಾತುಗಳಲ್ಲಿ ಸಾತ್ವಿಕತೆ, ನೋಟದಲ್ಲಿ ಶೋಧನೆಯ ತೀಕ್ಷ್ಣತೆ, ನಡತೆಯಲ್ಲಿ ಅವಧಾನ. ನಾಡು-ನುಡಿ ಹಾಗೂ ನಾಡಿಗಳಲ್ಲಿ ಅವಿಕಂಪಿತ ಪ್ರೇಮ. ಆ ಕಾರಣಗಳಿಂದಲೇ ಅಸ್ತಿತ್ವಕ್ಕೆ ಬಂದಿರುವುದು ಅವರ ಗ್ರಾಮ ವಿಕಾಸ ಪ್ರತಿಷ್ಠಾನ. ಆ ಪ್ರತಿಷ್ಠಾನದ ಪರಿಶ್ರಮದ ಫಲವಾಗಿ ಅವರ ಜನ್ಮಸ್ಥಳ ಗೊಂಡೇದಹಳ್ಳಿ ಒಂದು ಸ್ವಚ್ಛ, ಸಮೃದ್ಧ, ಸುಶಾಂತ ಗ್ರಾಮವಾಗಿದೆ. ನಮ್ಮ ನಾಡಿಗೆ ಮಾದರಿ ಶ್ರೀ ಗೊ.ರು.ಚ. ಅವರು. ಪ್ರತಿಷ್ಠಾನಕ್ಕೆ ಅರ್ಪಿಸಿರುವ ತಮ್ಮ ಮನೆಯೇ ಅಲ್ಲಿನ ಗ್ರಾಮ ಸೇವಾ ಕಾರ್ಯಗಳ ಕೇಂದ್ರ".

ಡಾ. ಗೊ.ರು.ಚ. ಅವರ ವ್ಯಕ್ತಿತ್ವಕ್ಕೆ ಪೂಜ್ಯ ಶ್ರೀಗಳ ಮೇಲ್ಕಂಡ ಮಾತುಗಳೇ ಸಾಕೆಂದು ಅನ್ನಿಸುವುದಾದರೂ, ಸಂದರ್ಭದ ಔಚಿತ್ಯದ ದೃಷ್ಟಿಯಿಂದ ಈ ಕೆಳಕಂಡ ಕೆಲವು ಮುಖ್ಯ ಮಾಹಿತಿಗಳನ್ನು ತಿಳಿಸಬಯಸುತ್ತೇವೆ. ಸರ್ಕಾರಿ ದಾಖಲೆಯ ಪ್ರಕಾರ ಗೊ.ರು.ಚ. ಅವರ ಜನ್ಮದಿನ 18 ಮೇ 1930. ಆದರೆ ವಾಸ್ತವ ದಿನ 22 ಡಿಸೆಂಬರ್ 1928. ಜನ್ಮಸ್ಥಳ ಚಿಕ್ಕಮಗಳೂರು ಜಿಲ್ಲಾ ತರೀಕೆರೆ ತಾಲೂಕಿನ ಗೊಂಡೇದಹಳ್ಳಿ. ತಂದೆ ರುದ್ರಪ್ಪ ಗಿರಿಗೌಡರ; ತಾಯಿ ಅಕ್ಕಮ್ಮ ಮನೆಯ ಬಡತನದಿಂದಾಗಿ ಗೊ.ರು.ಚ ಅವರ ಶಿಕ್ಷಣ ಶಾಲಾ ಹಂತಕ್ಕೇ ಸ್ಥಗಿತವಾಯಿತು.

ವಿದ್ಯಾರ್ಥಿಯಾಗಿದ್ದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲು. ಸ್ವಾತಂತ್ರ್ಯದ ನಂತರ 1948ರಲ್ಲಿ ಸರ್ಕಾರಿ ಉದ್ಯೋಗಕ್ಕೆ ಪ್ರವೇಶ. ಶಾಲಾ ಶಿಕ್ಷಕರಾಗಿ 15 ವರ್ಷ, ಸಮುದಾಯ ಅಭಿವೃದ್ಧಿ ಇಲಾಖೆಯಲ್ಲಿ ಸಮಾಜ ಶಿಕ್ಷಣ ವಿಸ್ತರಣಾಧಿಕಾರಿಯಾಗಿ 02 ವರ್ಷ, ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಉಪಸಂಪಾದಕರಾಗಿ 8 ವರ್ಷ, ವಿಶ್ವಬ್ಯಾಂಕಿನ ಜನಸಂಖ್ಯಾ ಯೋಜನೆಯಲ್ಲಿ ಪ್ರಕಟಣಾ ವಿಭಾಗದ ಸಂಪಾದಕರಾಗಿ, ಉಪನಿರ್ದೇಶಕರಾಗಿ 15 ವರ್ಷ – ಹೀಗೆ 40 ವರ್ಷಗಳ ಸುದೀರ್ಘ, ಸಮರ್ಥ ಸರ್ಕಾರಿ ಸೇವೆ ಸಲ್ಲಿಸಿರುತ್ತಾರೆ.

ಸರ್ಕಾರಿ ಸೇವೆಯಲ್ಲಿದ್ದಾಗಲೇ ಸಾಹಿತ್ಯ, ಸಂಸ್ಕೃತಿ, ಚಟುವಟಿಕೆಗಳ ಸಂಬಂಧ. ಹುಟ್ಟಿದ ಊರಿನ 'ಹಳ್ಳಿಯ ಬಳಗ' ಸಂಘದಿಂದ ಹಿಡಿದು ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಾರ್ವಭೌಮ ಸಂಸ್ಥೆಯವರೆಗೆ, ಕೆ.ಆರ್. ಲಿಂಗಪ್ಪ ಜಾನಪದ ಪ್ರತಿಷ್ಠಾನ, ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ, ಕರ್ನಾಟಕ ಅಂಧರ ಕ್ಷೇಮಾಭ್ಯುದಯ ಸಂಸ್ಥೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪ್ರಕಟಣ ಸಮಿತಿ, ಕರ್ನಾಟಕ ಸರ್ಕಾರದ ರಾಜ್ಯ ಭಾಷಾ ಆಯೋಗ, ಬಸವ ಕಲ್ಯಾಣದ ಅನುಭವ ಮಂಟಪ ನವನಿರ್ಮಾಣ ಸಂಬಂಧದ ತಜ್ಞರ ಸಮಿತಿ – ಹೀಗೆ ಇನ್ನೂ ಹಲವು ಪ್ರಮುಖ ಸಂಸ್ಥೆಗಳ ಅಧ್ಯಕ್ಷರಾಗಿ, ದಕ್ಷತೆಯಿಂದ ಸೇವೆ ಸಲ್ಲಿಸಿರುವರು. ಜೊತೆಗೆ ಭಾರತ ಸರ್ಕಾರದ ಪಾರಂಪರಿಕ ಸಂಸ್ಕೃತಿ ಸಂರಕ್ಷಣಾ ಸಮಿತಿ, ರಾಷ್ಟ್ರೀಯ ಗ್ರಂಥ ಪ್ರವರ್ತಕ ಸಮಿತಿಗಳೇ ಅಲ್ಲದೆ, ರಾಜ್ಯಮಟ್ಟದ ಪಾನನಿರೋಧ ಚಳವಳಿ, ಇಂಡಿಯನ್ ರೆಡ್‌ಕ್ರಾಸ್, ಕರ್ನಾಟಕ, ಕುವೆಂಪು ಜನ್ಮಸ್ಥಳ ಅಭಿವೃದ್ಧಿ ಸಮಿತಿ, ಡಾ. ಶಿವರಾಮ ಕಾರಂತರು, ಡಾ. ಗುಬ್ಬಿವೀರಣ್ಣನವರು, ಸಿದ್ಧವನಹಳ್ಳಿ ನಿಜಲಿಂಗಪ್ಪನವರು ಅಭಿನಂದನ ಸಮಿತಿಗಳು, ಕರ್ನಾಟಕ ಶಾಸಕರ ಚಿಂತನ ಶಿಬಿರ ಮತ್ತಿತರ ಅನೇಕ ಸಮಿತಿಗಳ ಸದಸ್ಯರಾಗಿ, ಸಂಚಾಲಕರಾಗಿ ಅಹರ್ನಿಸಿ ಸೇವೆ ಸಲ್ಲಿಸಿರುತ್ತಾರೆ.

ಹಾಗೆಯೇ ಪದನಿಮಿತ್ತ ಸದಸ್ಯರಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ವಿಶ್ವವಿದ್ಯಾಲಯದ ಆಡಳಿತ ಸಮಿತಿ, ಪಂಪ ಪ್ರಶಸ್ತಿ, ಬಸವ ಪುರಸ್ಕಾರಗಳ ಆಯ್ಕೆ ಸಮಿತಿ, ಕನ್ನಡ ನಿಘಂಟು ಸಮಿತಿ ಮತ್ತಿತರ ಸರ್ಕಾರಿ ಪ್ರಾಯೋಜಿತ ಸಮಿತಿಗಳಲ್ಲೂ ಅವರು ಮೌಲಿಕವಾದ ಸಲಹೆ-ಸಹಕಾರ ನೀಡಿದ್ದಾರೆ.

ಗೊ.ರು.ಚ. ಅವರ ಪ್ರಥಮವೆನಿಸಿರುವ ಸಾಧನೆಗಳಲ್ಲಿ ಕೇವಲ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಬಹುದು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ 'ಒಬ್ಬ ಕನ್ನಡಿಗ ಒಂದು ರೂಪಾಯಿ' ಯೋಜನೆ, ಜಾನಪದ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಬೀದರಿನಲ್ಲಿ ನಡೆದ ಅಖಿಲ ಭಾರತ ಪ್ರಥಮ ಜಾನಪದ ಸಮ್ಮೇಳನ, 1967ರಷ್ಟು ಹಿಂದೆಯೇ ತರೀಕೆರೆಯಲ್ಲಿ ನಡೆಸಿದ ರಾಜ್ಯಮಟ್ಟದ ಪ್ರಥಮ ಜಾನಪದ ಸಮ್ಮೇಳನ, ಜಾನಪದ ಅಕಾಡೆಮಿಯಲ್ಲಿ ಜನಪದ ಕಲಾವಿದರ ಕ್ಷೇಮನಿಧಿ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಅಮೇರಿಕಾ ಕನ್ನಡ ಕೂಟದಿಂದ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕ ಘಟಕಗಳ



1962 ಗಿರಿಯಾಪುರ ಶ್ರೀ ಗುರು ಕುಮರಾಶ್ರಮದಲ್ಲಿ ಪೂಜ್ಯ ಶ್ರೀ ಸದಾಶಿವ ಶಿವಾಚಾರ್ಯರ ಷಷ್ಟ್ಯಬ್ದಿ ಮಹೋತ್ಸವ: ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರ್ ಅವರ ಸಮ್ಮುಖ



1967 ದೆಹಲಿಯಲ್ಲಿ ಕನ್ನಡ ರಾಜ್ಯೋತ್ಸವ ಸಂದರ್ಭ: ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಅವರೊಡನೆ ಭೇಟಿ: ಮಧ್ಯದಲ್ಲಿ ಲೋಕಸಭಾ ಸದಸ್ಯ ಎಂ.ವಿ. ರಾಜಶೇಖರನ್



ಸಮಾರಂಭವೊಂದರಲ್ಲಿ ಶ್ರೀ ಡಿ. ದೇವರಾಜ ಅರಸ್ ಅವರಿಗೆ ಸ್ವಾಗತ



ಬೆಂಗಳೂರು: ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರೊಂದಿಗೆ ಆಸ್ಪತ್ರೆ ಭೇಟಿ ಸಂದರ್ಭ

ರಚನೆ, ವಿಶ್ವದಲ್ಲೇ ಪ್ರಥಮವೆನಿಸಿರುವ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲೂಕು ಘಟಕಗಳು ಹಾಗೂ ಕದಳಿ ಮಹಿಳಾ ವೇದಿಕೆ ಮತ್ತು 'ಮಹಾಮನೆ' ಮಾಸಿಕದ ಆರಂಭ, ಶರಣ ಕ್ಷೇತ್ರಗಳ ಚಿತ್ರೀಕರಣ ಇತ್ಯಾದಿ.


ವೀರಗಾಸೆ ಕಲಾಪ್ರದರ್ಶನವೊಂದರಲ್ಲಿ

ಲೇಖಕರಾಗಿ ವಿಶೇಷವಾಗಿ ಜನಪದ ಮತ್ತು ವಚನ ಸಾಹಿತ್ಯ ಕುರಿತಂತೆ 54ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಸಾಕ್ಷಿಕಲ್ಲು, ಬೆಳ್ಳಕ್ಕಿ ಹಿಂಡು, ಬೆದರ್ಯಾವು, ಚೆಲುವಾಂಬಿಕೆ, ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಅವರು ಸಂಪಾದಿಸಿರುವ ಅನೇಕ ಗ್ರಂಥಗಳಲ್ಲಿ 'ಹೊನ್ನ ಬಿತ್ತೇವು ಹೊಲಕೆಲ್ಲ', ವಿಭೂತಿ, ಗ್ರಾಮಜ್ಯೋತಿ, ನೂರೊಂದು ಚಿಂತನ, 'ಕರ್ನಾಟಕ ಪ್ರಗತಿಪಥ' ಮೊದಲಾದವು ಶ್ರೇಷ್ಠ ಆಕರ ಗ್ರಂಥಗಳಾಗಿವೆ. ಜಾನಪದ ಅಂಗಳದಲ್ಲಿ, ಆಡಿಬಾ ನನಕಂದ, ಹತ್ತು ವಚನಗಳ ಸ್ಮತ್ತ, ನೆತ್ತಿಯ ಬುತ್ತಿ, ಎಂಟಕ್ಕೂ ಹೆಚ್ಚು ಕೃತಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಗೊಂಡೇದಹಳ್ಳಿಯಿಂದ ಬೆಂಗಳೂರಿಗೆ' ಗೊ.ರು.ಚ. ಅವರ ಭಾಗಶಃ ಆತ್ಮಕಥೆ. ಅವರೀಗ UBS Publishers ಪ್ರಕಟಿಸಿರುವ "Terrorism and Response to Terrorist Threat" ಇಂಗ್ಲೆಂಡಿನ ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸಿರುವ 'Political Violence in Ancient India' ಎಂಬ ಗ್ರಂಥಗಳನ್ನು ಅನುವಾದಿಸಿದ್ದಾರೆ. ನಾಡಿನ 50ಕ್ಕೂ ಹೆಚ್ಚು ಬರಹಗಾರರ ಕೃತಿಗಳಿಗೆ ಮುನ್ನುಡಿ ಬರೆದಿದ್ದಾರೆ.


ಬೆಂಗಳೂರು: 60ನೆಯ ಹುಟ್ಟುಹಬ್ಬ
ಸಿದ್ಧನಹಳ್ಳಿ ನಿಜಲಿಂಗಪ್ಪ ಅವರೊಡನೆ

ನೇಪಾಳದ ಕಠ್ಮಂಡುವಿನಲ್ಲಿ ನಡೆದ ಭಾರತ ಸಂಸ್ಕೃತಿ ಸಮ್ಮೇಳನ, ದಾಂಡೇಲಿಯಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯ ಜಾನಪದ ಸಮ್ಮೇಳನ, ಮುಂಬೈನಲ್ಲಿ ನಡೆದ ರಾಷ್ಟ್ರೀಯ ಅನುಭಾವ ಸಾಹಿತ್ಯ ಸಮ್ಮೇಳನ, ಬೆಂಗಳೂರಿನಲ್ಲಿ ನಡೆದ ವಚನ ಸಾಹಿತ್ಯ ಸಮ್ಮೇಳನ ಮೊದಲಾದ ನಾನಾ ಸಮ್ಮೇಳನಗಳ ಸರ್ವಾಧ್ಯಕ್ಷರಾಗಿದ್ದ ಗೌರವ ಡಾ. ಗೊ.ರು.ಚ. ಅವರದ್ದು. ವಿಶೇಷ ಆಹ್ವಾನದ ಮೇಲೆ ಅಮೇರಿಕಾ, ಸಿಂಗಪುರ ಮತ್ತು ಅರಬ್ ರಾಷ್ಟ್ರಗಳಲ್ಲಿ ನಡೆದ ಕನ್ನಡ ಕಾರ್ಯಕ್ರಮಗಳೇ ಅಲ್ಲದೆ ರಾಜ್ಯ ಸರ್ಕಾರ, ನಾನಾ ವಿಶ್ವವಿದ್ಯಾಲಯಗಳು, ಸಂಘ–ಸಂಸ್ಥೆಗಳು, ವಿವಿಧ ಕಾರ್ಯಕ್ರಮಗಳಲ್ಲಿ ಉದ್ಘಾಟಕರಾಗಿ, ಅಧ್ಯಕ್ಷರಾಗಿ, ಸಮಾರೋಪಕರಾಗಿ ಪಾಲುಗೊಂಡಿದ್ದಾರೆ.


ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಮುಖ್ಯಮಂತ್ರಿ
ಎಸ್.ಎಂ. ಕೃಷ್ಣ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕಾರ
ರಾಣಿಸತೀಶ್, ಚಂದ್ರದಾಸ್‌ಗುಪ್ತ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರಥಮ ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಗೊ.ರು.ಚ. ಅವರಿಗೆ ಬಂದಿರುವ ಪ್ರಶಸ್ತಿಗಳು ಅನೇಕ. ಅವುಗಳ ಸಂಖ್ಯೆಯೇ 36 ಅನ್ನು ಮೀರುತ್ತದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೆಸರಿಸಬಹುದು. ಕರ್ನಾಟಕ ಸರ್ಕಾರದ 10 ಲಕ್ಷ ರೂ.ಗಳ 'ಬಸವ ರಾಷ್ಟ್ರೀಯ ಪುರಸ್ಕಾರ', ಭಾರತ ಸರ್ಕಾರದ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಅತ್ಯುನ್ನತ ಸಿಲ್ವರ್ ಎಲಿಫೆಂಟ್ ಪದಕ, ಕರ್ನಾಟಕ ನಾಟಕ ಮತ್ತು ಜಾನಪದ ಅಕಾಡೆಮಿಗಳ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪ್ರೊ. ಸಂ.ಶಿ. ಭೂಸನೂರ ಮಠ ಪ್ರಶಸ್ತಿ, ಇಂಗ್ಲೆಂಡ್ ಕನ್ನಡ ಕೂಟ ಪ್ರಶಸ್ತಿ, ರೋಟರಿ ಗೌರವ ಸದಸ್ಯತ್ವ, ಸಂಸ್ಕೃತಿ ಸಂಗಮ ಪ್ರಶಸ್ತಿ, ಶ್ರೀ ಸಿದ್ಧಗಂಗಾ ಶಿವಕುಮಾರ ಪ್ರಶಸ್ತಿ ಕೆಳದಿ ಶಿವಪ್ಪನಾಯಕ ಪ್ರಶಸ್ತಿ, ತೋಂಟದ ಸಿದ್ದಲಿಂಗ ಸ್ವಾಮಿಗಳ ಶರಣ ಪ್ರಶಸ್ತಿ, ದೆಹಲಿ ಕರ್ನಾಟಕ ಸಂಘದ ಡಾ. ಶಿವರಾಮ ಕಾರಂತ ಪ್ರಶಸ್ತಿ ಇತ್ಯಾದಿ.


ಕರ್ನಾಟಕ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ

ಡಾ. ಗೊ.ರು.ಚ. ಅವರು ಪಡೆದಿರುವ ಪ್ರಶಸ್ತಿಗಳ ಹಣದ ಜೊತೆಗೆ, ಅವರಿಗೆ ಬಂದ ಸಭಾಭತ್ಯೆ, ಗೌರವಧನ, ಸಂಭಾವನೆ ಇತ್ಯಾದಿ ಎಲ್ಲ ಹಣವನ್ನೂ ಸಾರ್ವಜನಿಕ ಸಂಸ್ಥೆಗಳಿಗೆ ನೀಡಿರುತ್ತಾರೆ. ಅವರಿಗೆ 84 ವರ್ಷಗಳು ತುಂಬಿದಾಗ ಅಭಿಮಾನಿಗಳು ಅರ್ಪಿಸಿದ 11,11,111 ರೂ. ಗಳ (ಹನ್ನೊಂದು ಲಕ್ಷದ ಹನ್ನೊಂದು ಸಾವಿರದ ನೂರಾ ಹನ್ನೊಂದು ರೂಪಾಯಿಗಳು) ಗೌರವ ನಿಧಿಗೆ ತಾವೂ ಮತ್ತಷ್ಟು ಸೇರಿಸಿ, ಆ ಸಂದರ್ಭದಲ್ಲಿ ಪ್ರಕಟವಾದ ತಮ್ಮ ಗ್ರಂಥಗಳನ್ನೆಲ್ಲ ಪರಿಷತ್ತಿಗೆ ನೀಡಿದ್ದಾರೆ. ಆ ಗ್ರಂಥಗಳ ಮಾರಾಟದಿಂದ ಬಂದ ಹಣವೂ ಸೇರಿದಂತೆ ಈಗ ಅವರ ಹೆಸರಿನಲ್ಲಿ ದತ್ತಿ ಇಡಲಾಗಿರುವುದು.



ಈ ಎಲ್ಲಕ್ಕೂ ಮೇರು ಗೌರವವೆಂಬಂತೆ ಅಖಿಲ ಭಾರತ 87ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದು ಎಲ್ಲರಿಗೂ ಬಹಳ ಹೆಮ್ಮೆಯ ವಿಷಯ ಆಗಿರುವುದಲ್ಲದೆ ಪ್ರಶಸ್ತಿಗೆ ಕಳಸಪ್ರಾಯ ಆಗಿರುವರು.




ಬೆಂಗಳೂರು: ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ


ನವದೆಹಲಿ: ರಾಷ್ಟ್ರಪತಿ ಡಾ. ಪ್ರಣವಮುಖರ್ಜಿ ಅವರಿಂದ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಪ್ರದಾನ


ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಕೊಡಲ್ಪಡುವ 'ಬೆಳ್ಳಿ ಆನೆ ಪದಕ'ವನ್ನು 2015ರಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀ ಪಣವ್ ಮುಖರ್ಜಿ ಅವರಿಂದ ಸ್ವೀಕಾರ.


ಕುಟುಂಬದ ಕರುಳ ಬಳ್ಳಿ

## ಹೃತ್ಪೂರ್ವಕ ಅಭಿನಂದನೆಗಳು



ಕನ್ನಡ ರಾಜ್ಯೋತ್ಸವದ ಪ್ರಯುಕ್ತ 2024ನೇ ಸಾಲಿನ ದಕ್ಷಿಣ ಕನ್ನಡ 'ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ'ಗೆ ಸಾಂದೀಪನಿ ಗ್ರಾಮೀಣ ವಿದ್ಯಾಸಂಸ್ಥೆ, ನರಿಮೊಗರು, ಪುತ್ತೂರು ತಾಲ್ಲೂಕಿನ ಗೈಡ್ **ಕು. ಜ್ಞಾನ ರೈ,** 8ನೇ ತರಗತಿ ಇವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ಕರಾವಳಿಯ ಬಹುಮುಖ ಪ್ರತಿಭೆ, ಕಲೆ ಮತ್ತು ಸಂಸ್ಕೃತಿ ರಂಗದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ ಅಪೂರ್ವ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದ **ಕು. ಜ್ಞಾನ ರೈ** ಇವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಹೃತ್ಪೂರ್ವಕ ಅಭಿನಂದನೆಗಳು.



## ಡಿಸೆಂಬರ್ 2024ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ | 01.12.2024 | ತುಮಕೂರು ಜಿಲ್ಲೆ |
| 2 | ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವ ಶಿಬಿರ | 10.12.2024 ರಿಂದ 15.12.2024 | ಆಳ್ವಾಸ್ ಶಿಕ್ಷಣ ಸಂಸ್ಥೆ, ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ |
| 3 | 106ನೇ ರಾಜ್ಯ ಪರಿಷತ್ ಸಭೆ | 14.12.2024 | ಜಿಲ್ಲಾ ಸ್ಕೌಟ್–ಗೈಡ್ ತರಬೇತಿ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ |
| 4 | ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ | 18.12.2024 ರಿಂದ 24.12.2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 5 | ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ | 18.12.2024 ರಿಂದ 24.12.2024 | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಶಿಬಿರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ |

## ರಾಜ್ಯ ಸಂಸ್ಥೆಯ ನೇತೃತ್ವದಲ್ಲಿ ನಿರ್ವಹಿಸಲ್ಪಟ್ಟ
# ನವೆಂಬರ್ 2024ರ ಕಾರ್ಯಚಟುವಟಿಕೆಗಳು

### 1. ಕನ್ನಡರಾಜ್ಯೋತ್ಸವ ದಿನಾಚರಣೆ



ರಾಜ್ಯ ಕೇಂದ್ರ ಕಛೇರಿಯಲ್ಲಿ ನವೆಂಬರ್ 01 ರಂದು 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಶ್ರೀ ಕೆಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿ, ಸಾಹಿತ್ಯ, ಕವಿಗಳು ಹಾಗೂ ವಿಶೇಷತೆಯ ಬಗ್ಗೆ ತಿಳಿಸಿದರು. ಶ್ರೀಮತಿ ಬಿ.ವಿ. ರಾಮಲತ, ರಾಜ್ಯ ಆಯುಕ್ತರು (ವ.ಸಂ), ಶ್ರೀಮತಿ ಮಂಜುಳ ,ಸಿ, ರಾಜ್ಯ ಸಂಘಟನಾ ಆಯುಕ್ತರು (ಗೈ), ಶ್ರೀ ನಂದಕುಮಾರ್ ಆರ್.ಎಸ್.ಎಲ್., ಶ್ರೀ ಶಿವಕುಮಾರಸ್ವಾಮಿ, ಶ್ರೀಮತಿ ರೀತಾಂಜಲಿ, ಗೈಡರ್, ಶ್ರೀ ಸಂಜಯ್ ಸ್ಕೌಟರ್, ಡೆಲ್ಲಿ ಪಬ್ಲಿಕ್ ಸ್ಕೂಲ್ ಸ್ಕೌಟ್ಸ್–ಗೈಡ್ಸ್‌ಗಳು ಉಪಸ್ಥಿತರಿದ್ದರು.



### 2. ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ಸೇವಾ ಶಿಬಿರ

ದೀಪಾವಳಿ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಂತೆ ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ಅಕ್ಟೋಬರ್ 31 ರಿಂದ ನವೆಂಬರ್ 02ರ ವರೆಗೆ ಜಿಲ್ಲಾ ಮಟ್ಟದ ಸೇವಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಮಲೆಮಹದೇಶ್ವರ ದೇವಸ್ಥಾನದ ಆವರಣ ಹಾಗೂ ದೇವಸ್ಥಾನದ ಒಳಾಂಗಣದಲ್ಲಿ ಸರದಿ ಸಾಲಿನಲ್ಲಿ ಬರುವಂತಹ ಭಕ್ತಾದಿಗಳನ್ನು ದರ್ಶನವಾದ ನಂತರ ಸಾಲಿನಲ್ಲಿ ಕಳುಹಿಸುವುದು, ಆಹಾರ ವಿತರಣೆ, ಸ್ವಚ್ಛತೆ ಕಾರ್ಯಕ್ರಮ ಮತ್ತು ಚಿನ್ನದ ರಥೋತ್ಸವ ಸಂದರ್ಭದಲ್ಲಿ ಸೇವಾ ಕಾರ್ಯಕ್ರಮವನ್ನು ಮಾಡಿರುತ್ತಾರೆ. ಈ ಸೇವಾ ಶಿಬಿರದಲ್ಲಿ ಚಾಮರಾಜನಗರ ಜಿಲ್ಲೆಯಿಂದ ಒಟ್ಟು 130 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿರುತ್ತಾರೆ, ಶ್ರೀ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ರಘು ರವರು ಸೇವೆಯನ್ನು ಅಭಿನಂದಿಸಿರುತ್ತಾರೆ.

### 3. ಸಂಸ್ಥಾಪನ/ ಧ್ವಜ ದಿನಾಚರಣೆ

ಭಾರತದಲ್ಲಿ ಮೊದಲ ಸ್ಕೌಟ್ಸ್‌ದಳ ಪ್ರಾರಂಭವಾದ ಬಿಷಪ್ ಕಾಟನ್ ಶಾಲೆ, ಬೆಂಗಳೂರು ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಮತ್ತು ಧ್ವಜ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಹಾಗೂ ಬಿಷಪ್ ಕಾಟನ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಅಲಿಸ್ಟೈರ್ ಆರ್.ಎ. ಫ್ರೀಸೆರವರು ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿದರು. ಶ್ರೀ ಕೆ. ಗಂಗಪ್ಪಗೌಡ, ಶ್ರೀ ಎಂ.ಕೆ. ಖಾನ್, ಶ್ರೀ ಎಂ.ಎಸ್. ಸತೀಶ್, ಶ್ರೀ ಬಿ.ಕೆ. ಶೇಷಾದ್ರಿ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ಜಿಲ್ಲೆಯ 300 ಸ್ಕೌಟ್ಸ್, ಗೈಡ್ಸ್, ರೋವರ್, ರೇಂಜರ್ಸ್‌ಗಳು, ಶಿಕ್ಷಕರು ಭಾಗವಹಿಸಿದ್ದರು.











ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ನವೆಂಬರ್ 07 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ನಾಯಕತ್ವದಲ್ಲಿ ಶ್ರೀ ಎಮ್.ಎಸ್. ಶ್ರೀಕಾರ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಶ್ರೀ ರಿತೇಶ್ ಸಿಂಗ್, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶ್ರೀ ಎಲ್.ಕೆ. ಅತೀಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಹಣಕಾಸು ವಿಭಾಗ, ಡಾ. ಪಿ.ಸಿ. ಜಾಫರ್, ಕಾರ್ಯದರ್ಶಿ, ಹಣಕಾಸು ವಿಭಾಗ, ಡಾ. ಕೆ.ವಿ. ತ್ರಿಲೋಕಚಂದ್ರ, ಆಯುಕ್ತರು, ಶಾಲಾ ಶಿಕ್ಷಣ ಹಾಗೂ ಶ್ರೀ ಬಿ. ದಯಾನಂದ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರುಗಳನ್ನ ಭೇಟಿ ಮಾಡಿ ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು. ಶ್ರೀ ಎಮ್.ಎ. ಖಾಲಿದ್, ರಾಜ್ಯ ಸ್ಕೌಟ್ಸ್ ಆಯುಕ್ತರು, ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಗೈಡ್ಸ್ ಆಯುಕ್ತರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ನವೆಂಬರ್ 07 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಶ್ರೀ ಎನ್. ಮಂಜುಶ್ರೀ, ಆಯುಕ್ತರು, ಕಾಲೇಜು ಶಿಕ್ಷಣ, ಶ್ರೀ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತರು, ಬಿಬಿಎಂಪಿ, ಪ್ರೊ. ಎಸ್.ಆರ್. ನಿರಂಜನ್, ಉಪಾಧ್ಯಕ್ಷರು, ಉನ್ನತ ಶಿಕ್ಷಣ ಪರಿಷತ್ತು, ಶ್ರೀಮತಿ ಸಿಂಧು ಬಿ. ರೂಪೇಶ್, ನಿರ್ದೇಶಕರು, ಪಿ.ಯು. ಬೋರ್ಡ್, ಬೆಂಗಳೂರು ಇವರುಗಳನ್ನ ಭೇಟಿ ಮಾಡಿ ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಎನ್. ಶ್ರೀನಿವಾಸನ್, ಸಹಾಯಕ ರಾಜ್ಯ ಸ್ಕೌಟ್ಸ್ ಆಯುಕ್ತರು, ಶ್ರೀ ಎಲ್. ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿ ಹಾಗೂ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.






ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ನವೆಂಬರ್ 08 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಸನ್ಮಾನ್ಯ ಶ್ರೀ ಬಸವರಾಜ್ ಹೊರಟ್ಟಿ, ಗೌರವಾನ್ವಿತ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್‌ರವರನ್ನು ಭೇಟಿ ಮಾಡಿ, ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳ ಬಗ್ಗೆ ತಿಳಿಸಿದರು. ನಂತರ ಶ್ರೀ ಬಸವರಾಜ್ ಹೊರಟ್ಟಿರವರು ಧ್ವಜಚೀಟಿಗಳನ್ನು ಬಿಡುಗಡೆಗೊಳಿಸಿ, ಶುಭಕೋರಿದರು. ಈ ಸಂದರ್ಭದಲ್ಲಿ ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ, ಶ್ರೀ ಪ್ರಭಾಕರ ಭಟ್, ಎಸ್.ಒ.ಸಿ. ಹಾಗೂ ಶ್ರೀ ಕೆ.ಹೆಚ್. ಜಯರಾಮಯ್ಯ, ಪಿ.ಆರ್.ಒ.ರವರುಗಳು ಉಪಸ್ಥಿತರಿದ್ದರು.





ರಾಜ್ಯ ಕೇಂದ್ರ ಕಚೇರಿ ಆವರಣದಿಂದ ಬಿಷಪ್ ಕಾಟನ್ ಶಾಲೆಯವರೆಗೆ ಶಾಂತಿ ಜಾಥ ಆಯೋಜಿಸಲಾಯಿತು. ಈ ಜಾಥವನ್ನು ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಗಂಗಪ್ಪಗೌಡರವರು ಹಸಿರು ನಿಶಾನೆ ನೀಡುವ ಮುಂಖಾಂತರ ಆರಂಭಿಸಿದರು. ಈ ಜಾಥದಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲೆಯ 450 ಕಬ್ ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ದಳನಾಯಕರುಗಳು ಭಾಗವಹಿಸಿದರು.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಮತ್ತು ಧ್ವಜ ದಿನಾಚರಣೆಯ ಅಂಗವಾಗಿ ಕೊಂಡಜ್ಜಿ ಬಸಪ್ಪ ಸಭಾಂಗಣ, ಬೆಂಗಳೂರು ಇಲ್ಲಿ ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿದರು. ಶ್ರೀ ಕೆ. ಗಂಗಪ್ಪಗೌಡ, ಶ್ರೀ ಎಂ.ಕೆ. ಖಾನ್, ಶ್ರೀ ಎಂ.ಎಸ್. ಸತೀಶ್, ಶ್ರೀ ಬಿ.ಕೆ. ಶೇಷಾದ್ರಿ, ಶ್ರೀ ಪಿ. ಪಳನಿರವರು ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ಜಿಲ್ಲೆಯ 800 ಕಬ್ಸ್, ಬುಲ್ಬುಲ್, ಸ್ಕೌಟ್ಸ್, ಗೈಡ್ಸ್, ರೋವರ್, ರೇಂಜರ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.



75ನೇ ವರ್ಷದ ಸಂಸ್ಥಾಪನ ಮತ್ತು ಧ್ವಜ ದಿನಾಚರಣೆ ಮಹೋತ್ಸವದ ಅಂಗವಾಗಿ ರಾಜ್ಯ ಕೇಂದ್ರ ಕಛೇರಿಯಿಂದ ವಿಧಾನಸೌಧ ಮತ್ತು ಕೆ.ಆರ್. ವೃತ್ತದ ವರೆಗೆ ಮತ್ತು ರಾಜ್ಯ ಕೇಂದ್ರ "ಕ್ಯಾಂಡಲ್ ಮಾರ್ಚ್" ಅನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಶ್ರೀ ಮೋಹನ್‌ಕುಮಾರ್ ಕೊಂಡಜ್ಜಿ, ಮಾಜಿ ವಿಧಾನ ಪರಿಷತ್ ಸದಸ್ಯರು ಮತ್ತು ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್)ರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

### 4. ಮೈಸೂರು ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಹಾಗೂ ಜಿಲ್ಲಾ ಸಂಸ್ಥೆ ಮೈಸೂರು ರವರ ಸಹಯೋಗದಲ್ಲಿ ನವೆಂಬರ್ 12 ರಂದು ಮೈಸೂರಿನ ವಿದ್ಯಾವರ್ಧಕ ಕಾಲೇಜು ಸಭಾಂಗಣದಲ್ಲಿ ಮೈಸೂರು ವಿಭಾಗೀಯ ಮಟ್ಟದ ದೇಶಭಕ್ತಿ ಗೀತೆಗಾಯನ ಸ್ಪರ್ಧೆ–2024ನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಂಗಳೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಂದ 600 ಕಬ್ಸ್, ಬುಲ್ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್ ಹಾಗೂ ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನಗಳನ್ನು ವಿತರಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬಿ.ಕೆ. ಬಸವರಾಜ್, ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್) ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.





### 5. ರಾಜ್ಯ ಮಟ್ಟದ ಸ್ಕೌಟ್–ಗೈಡ್ ಪದಕತರಬೇತಿ ಶಿಬಿರ

ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮಟ್ಟದ ಪದಕ ತರಬೇತಿ ಶಿಬಿರವನ್ನು ನವೆಂಬರ್ 12 ರಿಂದ 14ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್–ಗೈಡ್ಸ್ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ 20 ಜಿಲ್ಲೆಗಳಿಂದ 190 ಸ್ಕೌಟ್ಸ್, 149 ಗೈಡ್ಸ್, 33 ಸ್ಕೌಟರ್ಸ್–ಗೈಡರ್ಸ್, 10 ಸೇವಾ ಸಿಬ್ಬಂದಿಗಳು ಹಾಗೂ 10 ಸರ್ವಿಸ್ ರೋವರ್ಸ್–ರೇಂಜರ್ಸ್‌ಗಳು ಸೇರಿಬಟ್ಟು 392 ಜನರು ಭಾಗವಹಿಸಿದ್ದರು. ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌಟ್) ಮತ್ತು ಶ್ರೀಮತಿ ವಜ್ರಗಂಗಮ್ಮ, ಎ.ಎಲ್.ಟಿ (ಗೈಡ್) ಇವರುಗಳು ನಾಯಕರಾಗಿದ್ದರು. ಪ್ರಕೃತಿ ವಿಕೋಪ ನಿರ್ವಹಣೆ ಮತ್ತು ಪರಿಹಾರ ಪ್ರಾವಿಣ್ಯತಾ ಪದಕದ ಬಗ್ಗೆ ಶ್ರೀ ಎಸ್.ಎನ್. ಕಿರಣ್ ಕುಮಾರ್, ಇನ್ಸ್‌ಪೆಕ್ಟರ್, ಎಸ್.ಡಿ.ಆರ್.ಎಫ್, ಶ್ರೀ ಶ್ರೀನಿವಾಸ್, ಅಗ್ನಿಶಾಮಕ ಅಧಿಕಾರಿಗಳು, ಶ್ರೀ ಶ್ರೀನಿವಾಸ್.ಎಸ್, ಸಂಪನ್ಮೂಲ ಅಧಿಕಾರಿಗಳು ಇವರ ನೇತೃತ್ವದಲ್ಲಿ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು ಶ್ರೀ ಪಿ.ವೈ. ಪಾಟೀಲ್, ಎ.ಎಲ್.ಟಿ (ಸ್ಕೌ) ಇವರ ನೇತೃತ್ವದಲ್ಲಿ ಪ್ರಥಮಚಿಕಿತ್ಸೆ, ಹೇಗೆ, ಏಕೆ, ಬ್ಯಾಂಡೇಜಸ್, ಸ್ಲಿಂಗ್ಸ್, ಪೇಷೆಂಟ್‌ಗಳನ್ನು ಸಾಗಿಸುವ ಬಗ್ಗೆ, ಅಂಬುಲೆನ್ಸ್ ಬ್ಯಾಡ್ಜ್, ಇತ್ಯಾದಿಗಳನ್ನು ತಂಡ ತಂಡಗಳಲ್ಲಿ ಕಲಿಸಲಾಯಿತು. ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌ) ಮತ್ತು ಸಹಾಯಕ ರಾಜ್ಯ

ಆಯುಕ್ತರು (ಸ್ಕೌ) ಇವರ ನೇತೃತ್ವದಲ್ಲಿ ದಿಕ್ಸೂಚಿ ನಕ್ಷೆ ಓದುವುದು, ಏಕೆ, ಹೇಗೆ, ಸ್ಥಳವನ್ನು ಕಂಡು ಹಿಡಿಯುವ ಬಗ್ಗೆ, ನಕ್ಷತ್ರ ವೀಕ್ಷಣೆ, ಇತ್ಯಾದಿ ವಿಷಯಗಳನ್ನು ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಕಲಿಸಿ ಉತ್ತಮ ಮಾಹಿತಿಯನ್ನು ನೀಡಲಾಯಿತು. ಒಟ್ಟು 3 ಪ್ರಾವಿಣ್ಯತಾ ಪದಕಗಳ ಬಗ್ಗೆ ತಿಳಿಸಲಾಯಿತು. ಶಿಬಿರಕ್ಕೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭೇಟಿ ನೀಡಿ ಮಕ್ಕಳ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿ, ನೆಹರುರವರ ಆದರ್ಶ ಜೀವನ ಮತ್ತು ಮಕ್ಕಳು ಪಾಲಿಸಬೇಕಾದ ಅಂಶಗಳನ್ನು ತಿಳಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು ಮತ್ತು ದಳನಾಯಕರನ್ನು ಭೇಟಿ ಮಾಡಿ ಉತ್ತಮವಾಗಿ ದಳಗಳನ್ನು ನಡೆಸುವಂತೆ ತಿಳಿಸಿದರು.





6. ಕೊಂಡಜ್ಜಿ ಬಸಪ್ಪನವರ 42ನೇ ಪುಣ್ಯ ಸ್ಮರಣೆ ಮತ್ತು ಮಕ್ಕಳ ದಿನಾಚರಣೆ

ನವೆಂಬರ್ 14 ರಂದು ಮಕ್ಕಳ ದಿನಾಚರಣೆ, ಕೊಂಡಜ್ಜಿ ಬಸಪ್ಪನವರ 42ನೇ ಪುಣ್ಯಸ್ಮರಣೆಯೆಂದು ಶಾಮನೂರು ಕಲ್ಲಪ್ಪ ಸಾವಿತ್ರಮ್ಮ ಆಡಳಿತ ಭವನ, ಎಂ.ಕೆ. ಪಾಣಿ ಅತಿಥಿಗೃಹದ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭ ಹಾಗೂ ಸರ್ವಧರ್ಮ ಪ್ರಾರ್ಥನೆವನ್ನು ಏರ್ಪಡಿಸಲಾಯಿತು. ಪದಕ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳು ಮತ್ತು ದಳನಾಯಕರು ಸರ್ವಧರ್ಮ ಪ್ರಾರ್ಥನೆ ಮಾಡುವುದರ ಮುಖಾಂತರ ಕೊಂಡಜ್ಜಿ ಬಸಪ್ಪನವರನ್ನು ಸ್ಮರಿಸಿ ಗೌರವ ಸಮರ್ಪಿಸಿದರು. ದಾವಣಗೆರೆ ಜಿಲ್ಲೆಯ ಸ್ಕೌಟ್ಸ್–ಗೈಡ್ಸ್‌ಗಳು ಅತಿಥಿಗಳಿಗೆ ಘನವಂದನೆಯನ್ನು ನೀಡಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಶ್ರೀ ಜಿ.ಎಂ. ಗಂಗಾಧರಸ್ವಾಮಿ, ಮಾನ್ಯ ಜಿಲ್ಲಾಧಿಕಾರಿಗಳು, ಶ್ರೀ ಸುರೇಶ್. ಬಿ. ಇಟ್ನಾಳ್, ಮಾನ್ಯ ಕಾರ್ಯನಿರ್ವಹಣ ಅಧಿಕಾರಿಗಳು, ಶ್ರೀಮತಿ ಕರಿಯಮ್ಮ, ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕೊಂಡಜ್ಜಿ, ಶ್ರೀ ಕೆ.ಬಿ. ಗುರುಮೂರ್ತಿ, ರಾಜ್ಯ ಹಣಕಾಸು ಸಮಿತಿ ಸದಸ್ಯರು, ಶ್ರೀ ಮುರುಘ ರಾಜೇಂದ್ರಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ದಾವಣಗೆರೆ, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಶ್ರೀ ಮಲ್ಲಿಕಾರ್ಜುನ ಕಡಕೋಳ, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಮಾಜಿ ವಿಧಾನ ಪರಿಷತ್ ಸದಸ್ಯರು, ದಾವಣಗೆರೆ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಕೊಂಡಜ್ಜಿ ಗ್ರಾಮಸ್ಥರು ಮತ್ತು ಕೊಂಡಜ್ಜಿ ಬಸಪ್ಪ ಕುಟುಂಬದ ಸದಸ್ಯರು ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿ ಶಿಬಿರದ ಕಟ್ಟಡಗಳ ಉದ್ಘಾಟನೆಯನ್ನು ನೆರವೇರಿಸಿ, ತರಬೇತಿ ಕೇಂದ್ರದ ಅಭಿವೃದ್ಧಿ, ಬಸಪ್ಪನವರ ಸಾಧನೆ ಇತ್ಯಾದಿಗಳ ಬಗ್ಗೆ ಶ್ಲಾಘೀಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಆಗಮಿಸಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದರು. ತರಬೇತಿ ಕೇಂದ್ರದಲ್ಲಿ ರಸ್ತೆ ನಿರ್ಮಾಣಕ್ಕೆ ಅವರುಗಳ ಸಹಕಾರವನ್ನು ಕೋರಿದರು. ಕೊಂಡಜ್ಜಿ ಬಸಪ್ಪನವರ ಆದರ್ಶ ಜೀವನ ಇತರರಿಗೆ ಮಾದರಿ, ನಾವೆಲ್ಲರೂ ಉತ್ತಮ, ಸರಳ ಜೀವನ ನಡೆಸಲು ಸ್ಕೌಟಿಂಗ್ ಅಡಿಪಾಯವಾಗುತ್ತದೆ ಎಂದು ತಿಳಿಸಿದರು.

ಶಾಮನೂರು ಕಲ್ಲಪ್ಪ ಸಾವಿತ್ರಮ್ಮ ಆಡಳಿತ ಭವನ, ಎಂ.ಕೆ. ಪಾಣಿ ಅತಿಥಿ ಗೃಹ ಉದ್ಘಾಟನೆಯಲ್ಲಿ ಜಿಲ್ಲಾಧಿಕಾರಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್, ದಾವಣಗೆರೆ ಇವರು ದಾವಣಗೆರೆ ಜಿಲ್ಲಾ ಸಂಸ್ಥೆಗೆ ಒಂದು ಲಕ್ಷ ರೂಪಾಯಿ ಅನುದಾನವನ್ನು ಸ್ಕೌಟ್ಸ್–ಗೈಡ್ಸ್ ಸಮವಸ್ತ್ರಕ್ಕಾಗಿ ನೀಡಿರುವುದಕ್ಕೆ ಧಾನ್ಯವಾದ ಇದರ ಅಂಗವಾಗಿ ಕೊಂಡಜ್ಜಿ ಗ್ರಾಮದ ಗೈಡ್ ದಳಕ್ಕೆ ಸಮವಸ್ತ್ರವನ್ನು ಸಾಂಕೇತಿಕವಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ವಿತರಿಸಿ ಶುಭವನ್ನುಕೋರಿದರು.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಪದಾಧಿಕಾರಿಗಳು, ಕೊಂಡಜ್ಜಿ ಗ್ರಾಮಸ್ಥರು ಮತ್ತು ಶಿಬಿರದ ನಾಯಕ–ನಾಯಕಿಯರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.





## ಹಾಸನದ ಹಾಸನಾಂಬಾ ದೇವಸ್ಥಾನದಲ್ಲಿ

# ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವಾ ಶಿಬಿರ



ಅಕ್ಟೋಬರ್ 23 ರಿಂದ 03ರ ವರೆಗೆ ರಾಜ್ಯ ಸಂಸ್ಥೆ, ಹಾಸನ ಜಿಲ್ಲಾಡಳಿತ ಮತ್ತು ಜಿಲ್ಲಾ ಸಂಸ್ಥೆ ಹಾಸನ ಇವರ ಸಹಯೋಗದೊಂದಿಗೆ ಹಾಸನಾಂಬ ದೇವಿ ದರ್ಶನ ಮತ್ತು ಸಿದ್ಧೇಶ್ವರ ಸ್ವಾಮಿಯವರ ಜಾತ್ರಾ ಮಹೋತ್ಸವದಲ್ಲಿ ರಾಜ್ಯ ಮಟ್ಟದ ರೋವರ್ಸ್ ರೇಂಜರ್ಸ್‌ಗಳ ಸೇವಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮೊದಲನೇ ಸೇವಾ ಶಿಬಿರದ ಉದ್ಘಾಟನೆಯನ್ನು ಅಕ್ಟೋಬರ್ 24 ರಂದು ಸಂಜೆ 4 ಗಂಟೆಗೆ ಶ್ರೀ ಎ.ಎನ್. ಮಹೇಶ್, ಅಧ್ಯಕ್ಷರು, ಪರಿಸರ ಮೌಲ್ಯಮಾಪನ ಸಮಿತಿ ಮತ್ತು ಉಪಾಧ್ಯಕ್ಷರು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿ ಮಾತನಾಡುತ್ತಾ, ರಾಜ್ಯದ ವಿವಿದ ಮೂಲೆಗಳಿಂದ ಬರುವ ಭಕ್ತಾದಿಗಳ ಕಾಯ, ವಾಚ, ಮನಸಾ ಸೇವೆ ಸಲ್ಲಿಸಿ ಹಾಸನಾಂಬೆಯ ಕೃಪೆಗೆ ಪಾತ್ರರಾಗಬೇಕೆಂದು ತಿಳಿಸಿದರಲ್ಲದೆ, ಜಿಲ್ಲಾಡಳಿತ ನೀಡಿರುವ ಜವಾಬ್ದಾರಿಯನ್ನು ಉತ್ತಮ ಸೇವೆ ಸಲ್ಲಿಸುವುದರ ಸೇವಾ ಶಿಬಿರವನ್ನು ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಹೇಮಾವತಿ ಜಲಾಶಯ ವಿಶೇಷ ಭೂ ಸ್ವಾದೀನಾಧಿಕಾರಿಗಳಾದ ಶ್ರೀ ಮಂಜುನಾಥರವರು ಮುಖ್ಯ ಅತಿಥಿಗಳಾಗಿ ಮಾತನಾಡಿ "ಹಾಸನಾಂಬ ದೇವಾಲಯಕ್ಕೆ ಬರುವ ಲಕ್ಷಾಂತರ ಭಕ್ತಾದಿಗಳಿಗೆ ವಿನಯ ಪೂರ್ವಕವಾಗಿ ಸೇವೆಸಲ್ಲಿಸಿ ತಮ್ಮ ಪಾಲಿನ ಕರ್ತವ್ಯವನ್ನು ತಪ್ಪದೇ ಪಾಲಿಸಿಕೊಂಡು ಬಂದಾಗ ವಿದ್ಯಾರ್ಥಿಗಳು ಅದ್ವಿತೀಯ ಸಾಧನೆ ಮಾಡಲು ಸಾದ್ಯ ಮತ್ತು ರೋವರ್ಸ್–ರೇಂಜರ್ಸ್‌ಗಳು ಅತ್ಯಂತ ಅಮೂಲ್ಯವಾದ ಸೇವಾ ಗುಣವನ್ನು ಬಾಲ್ಯದಲ್ಲಿ ಶಿಕ್ಷಣದ ಜೊತೆಗೆ ಮೈಗೂಡಿಸಿಕೊಂಡಲ್ಲಿ ಉಜ್ವಲ ಭವಿಷ್ಯ ನಮ್ಮದಾಗುತ್ತದೆ" ಎಂದರು.

ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ "ರೋವರ್ಸ್–ರೇಂಜರ್ಸ್‌ಗಳು ಶ್ರದ್ಧಾ ಪೂರ್ವಕವಾಗಿ ಸೇವೆ ಸಲ್ಲಿಸಿದರೆ ಹಾಸನಾಂಬಾ ದೇವಿಯು ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವುದರಲ್ಲಿ ಯಾವ ಸಂಶಯವಿಲ್ಲ" ಎಂದು ತಿಳಿಸಿ ಶಿಬಿರದ ಯಶಸ್ಸಿಗೆ ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ಶ್ರೀ ಎಲ್.ಟಿ ಲೋಕೆಶ್, ಸಹಾಯಕ ರಾಜ್ಯ ಕಾರ್ಯದರ್ಶಿ ಸ್ವಾಗತಿಸಿದರು, ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಕಾರ್ಯದರ್ಶಿ, ಹಾಸನ ಪ್ರಸ್ತಾವಿಕ ನುಡಿಗಳನ್ನು ನುಡಿದರು. ಶ್ರೀ ಆರ್.ಜಿ. ಗಿರೀಶ್, ರೋವರ್ ಸ್ಕೌಟ್ ಲೀಡರ್ ವಂದನೆ ಸಲ್ಲಿಸಿದರು.

ಹಾಸನಾಂಬೆ ದೇವಿಯ ದರ್ಶನದ ಎರಡನೇ ಸೇವಾ ಶಿಬಿರವು ಅಕ್ಟೋಬರ್ 28 ರಂದು ಪ್ರಾರಂಭವಾಯಿತು. ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ದೂರವಾಣಿ ಮೂಲಕ ಎಲ್ಲಾ ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ಉದ್ದೇಶಿಸಿ ಮಾತನಾಡಿ ಉತ್ತಮ ಸೇವೆಯನ್ನು







ಮಾಡುವ ಮೂಲಕ ಬರುವ ಭಕ್ತಾದಿಗಳ ಪ್ರಶಂಸೆಗೆ ಪಾತ್ರರಾಗುತ್ತೀರೆಂದು ತಿಳಿಸಿದರು. ಜಿಲ್ಲಾ ಆಡಳಿತವು ನೀಡಿರುವ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದು ಕರೆ ನೀಡಿ, ಶಿಬಿರದ ಯಶಸ್ಸಿಗೆ ಶುಭಹಾರೈಸಿದರು. 2ನೇ ಶಿಬಿರದಲ್ಲಿ ದಾವಣಗೆರೆ, ಕೊಡಗು, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ, ರಾಮನಗರ, ತುಮಕೂರು, ಮಂಡ್ಯ, ಮಂಗಳೂರು, ಹಾಸನ ಜಿಲ್ಲೆಗಳು ಭಾಗವಹಿಸಿದರು. ಒಟ್ಟು 345 ರೋವರ್ಸ್ 300 ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಸತ್ಯಭಾಮ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಹಾಸನ ಹಾಗೂ ಶ್ರೀ ಜೆ.ಬಿ. ಮಾರುತಿ, ಉಪ'ವಿಭಾಗಧಿಕಾರಿಗಳು, ಹಾಸನ ಇವರುಗಳು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವೆಯನ್ನು ಪ್ರತಿನಿತ್ಯ ವೀಕ್ಷಿಸಿ ಜಿಲ್ಲಾಡಳಿತದ ವತಿಯಿಂದ ಪ್ರಶಂಸೆ ವ್ಯಕ್ತಪಡಿಸಿದರು.

ಎರಡನೇ ಹಂತದ ಶಿಬಿರಕ್ಕೆ ಶ್ರೀ ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಹಾಗೂ ಶ್ರೀ ಶ್ರೀಕಾಂತ್, ಕೇಂದ್ರ ಸ್ಥಾನಿಕ ಆಯುಕ್ತರು (ರೋವರ್) ಮತ್ತು ನೋಡೆಲ್ ಅಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ರವರು ಆಗಮಿಸಿ ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವೆಯನ್ನುಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ರಾಜ್ಯ ಆಯುಕ್ತರು (ಗೈಡ್) ಶ್ರೀಮತಿ ಗೀತನಾಟರಾಜ್‌ರವರು ಸೇವಾ ಶಿಬಿರ ನಡೆಯುವ ಸ್ಥಳಕ್ಕೆ ಭೇಟಿ ಮಾಡಿ ವಿದ್ಯಾರ್ಥಿಗಳ ಸೇವೆಯನ್ನು ವೀಕ್ಷಣೆ ಮಾಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ನವೆಂಬರ್ 02ರ ಸಂಜೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಉಪವಿಭಾಗಾಧಿಕಾರಿಗಳಾದ ಶ್ರೀ ಮಾರುತಿರವರು ಭಾಗವಹಿಸಿ ವಿದ್ಯಾರ್ಥಿಗಳ ಸೇವೆಯ ಬಗ್ಗೆ ಯುವಜನರ ಶಕ್ತಿಯ ಬಗ್ಗೆ ತಿಳಿಸಿದರು. ಎರಡು ವರ್ಷಗಳಿಂದ ಹಾಸನಾಂಬ ಜಾತ್ರ ಮಹೋತ್ಸವಕ್ಕೆ ವಿದ್ಯಾರ್ಥಿಗಳ ಕೊಡುಗೆಯ ಬಗ್ಗೆ ನೆನೆದು ಮುಂದಿನ ಉತ್ತಮ ಭವಿಷ್ಯಕ್ಕೆ ಶುಭಕೋರಿ, ಮಕ್ಕಳಿಗೆ ಅಭಿನಂದನ ಪತ್ರಗಳ ವಿತರಣೆ ಮಾಡಿದರು. ಈ ಸಂದರ್ಭದಲ್ಲಿಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ರೋವರ್ಸ್ ಮತ್ತು ರೇಂಜರ್ಸ್‌ಗಳು ಉಪಸ್ಥಿತರಿದ್ದರು.

ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ರಾಜ್ಯ ಕಾರ್ಯದರ್ಶಿ ಮತ್ತು ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಕಾರ್ಯದರ್ಶಿ, ಹಾಸನ ಇವರುಗಳು ಈ ಸೇವಾ ಶಿಬಿರ ಉಸ್ತುವಾರಿ ವಹಿಸಿಕೊಂಡಿದ್ದರು. ಪ್ರೊ. ಜಿ.ಡಿ. ನಾರಾಯಣ್, ಕೇಂದ್ರ ಸ್ಥಾನಿಕ ಆಯುಕ್ತರು, ಶ್ರೀಮತಿ ಪ್ರಿಯಾಂಕ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಶ್ರೀ ಆರ್.ಜಿ. ಗಿರೀಶ್, ರೋವರ್ ಸ್ಕೌಟ್ ಲೀಡರ್, ಶ್ರೀ ಮಧು ಉಪನ್ಯಾಸಕರು ಇನ್ನಿತರ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳು ಶಿಬಿರದಲ್ಲಿ ಸಹನಾಯಕರುಗಳಾಗಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ. ಕೊನೆಯ ದಿನದಲ್ಲಿ ಹುಂಡಿ ಹಣ ಎಣಿಕೆಯ ಕಾರ್ಯದಲ್ಲಿ ಸಂಸ್ಥೆಯ ರೋವರ್ಸ್–ರೇಂಜರ್ಸ್‌ಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.







## ಅಭಿನಂದನೆಗಳು



ಸರ್ಕಾರಿ ಪದವಿ ಕಾಲೇಜ್, ಯಾದಗಿರಿಯಲ್ಲಿ ಪದವಿ ಮುಗಿಸಿ.
ರಾಜ್ಯಪುರಸ್ಕಾರ ಪ್ರಶಸ್ತಿ ಪಡೆದಿರುವ
**ಕು. ಭೀಮರಾಯ ಎಸ್.ಕೆ.** ಇವರು 2024–2025
ಸಾಲಿನಲ್ಲಿ ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ಕೌಟ್ಸ್ ಮತ್ತು
ಗೈಡ್ಸ್ ಕೋಟಾದಡಿಯಲ್ಲಿ
ಎಮ್.ಎ. (ಕನ್ನಡ) ಸ್ನಾತಕೋತ್ತರ ಪದವಿಯ
ಪ್ರವೇಶ ಪಡೆದುಕೊಂಡಿರುತ್ತಾರೆ.

## Congratulations



**Miss. Alveena Makandar,** Guide
Bagged 2nd Place and
Selected for National level Competition
in State Level Cricket Tournament Under -14 Girls
at K.L.E. State School, Nipani, Belagavi Dist.



# ರಾಜ್ಯ ಮಟ್ಟದ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಸಿರಿಧಾನ್ಯ ಮಾಹಿತಿ ಶಿಬಿರ





ರಾಜ್ಯ ಮಟ್ಟದ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಸಿರಿಧಾನ್ಯ ಮಾಹಿತಿ ಶಿಬಿರವನ್ನು ನವೆಂಬರ್ 4 ರಿಂದ 8ರ ವರೆಗೆ ಶ್ರೀ ಮಠ ಸಾಣೆಹಳ್ಳಿ, ಹೊಸದುರ್ಗ ತಾ॥ ಚಿತ್ರದುರ್ಗ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಶ್ರೀ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಶ್ರೀಮಠ, ಸಾಣೆಹಳ್ಳಿ ಇವರು ಉದ್ಘಾಟನೆ ನೆರವೇರಿಸಿ ಮಾತನಾಡಿ ಯುವಕ ಮತ್ತು ಯುವತಿಯರಿಗೆ ಮಾರ್ಗದರ್ಶನ ನೀಡಿದರು.

ಶ್ರೀ ಎ.ಎನ್. ಮಹೇಶ್, ಉಪಾಧ್ಯಕ್ಷರು, ರಾಜ್ಯ ಸಂಸ್ಥೆ ಇವರು ಮಾತನಾಡಿ ಶಿಬಿರಾರ್ಥಿಗಳನ್ನು ಪ್ರೋತ್ಸಾಹಿಸಿದರು. ಶ್ರೀ ಉಜ್ಜಿನಪ್ಪ ಕೇಂದ್ರ ಕಛೇರಿ ಆಯುಕ್ತರು, ಜಿಲ್ಲಾ ಸಂಸ್ಥೆ ಚಿತ್ರದುರ್ಗ, ಶ್ರೀ ಅರುಣ್‌ರವರು ಮಾತನಾಡಿದರು, ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಸದುರ್ಗ, ಕೃಷಿ ಅಧಿಕಾರಿಗಳು, ಶಾಸಕರು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ವಿವಿಧ ದಾನಿಗಳು, ಸ್ಥಳೀಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನವೆಂಬರ್ 05 ರಂದು ಸಾಣೆಹಳ್ಳಿ ಗ್ರಾಮದಲ್ಲಿ ಕೃಷಿ ಇಲಾಖೆಯ ಸಹಯೋಗದೊಂದಿಗೆ ಕೃಷಿ ಜಾಥಾವನ್ನು ಆಯೋಜಿಸಲಾಗಿತ್ತು. ಸಾವಯವ ಕೃಷಿ ಮಹತ್ವ, ಸಿರಿಧಾನ್ಯಗಳ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು.

ಆಧುನಿಕ ಕೃಷಿ ಉಪಕರಣಗಳನ್ನು ವೀಕ್ಷಿಸಿ ಮಾಹಿತಿಯನ್ನು ಪಡೆದ ರೋವರ್ಸ್–ರೇಂಜರ್ಸ್‌ಗಳು ರೈತರ ಮನೆಗೆ ಭೇಟಿ ನೀಡಿ ಹಸು ಸಾಕಾಣಿಕೆ, ಬೀಜ, ಗೊಬ್ಬರ, ಹೊಲ ಗದ್ದೆಗಳ ಉಳುಮೆ, ಇತ್ಯಾದಿಗಳ ಪದ್ಧತಿ, ಆಧುನಿಕ ತಂತ್ರಜ್ಞಾನದಿಂದ ಇಳುವರಿಯನ್ನು ಹೆಚ್ಚು ಪಡೆಯುವ ಬಗ್ಗೆ ಮನೆ ಮನೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿ ರೋವರ್ಸ್–ರೇಂಜರ್ಸ್‌ಗಳು ಬಹಳ ಸಂತೋಷವನ್ನು ಹಂಚಿಕೊಂಡರು. 6 ದಿನಗಳ ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಹೊರಹೊಮ್ಮಿತು.

ಡಾ॥ ಎಂ.ಎನ್. ರವಿ, ಡಾ॥ ಸುಮಂಗಲ ಮೇಟಿ, ಶ್ರೀಮತಿ ರೇಖಾ ಇವರುಗಳು ಶಿಬಿರವನ್ನು ಅಚ್ಚುಕಟ್ಟಾಗಿ ಸಂಘಟಿಸಿದರು. ಶ್ರೀ ಮೋಹಿಸಿನ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಸದುರ್ಗ ಇವರು ಸಂಪೂರ್ಣವಾಗಿ ತೊಡಗಿಸಿಕೊಂಡು, ಶಿಬಿರದ ಯಶಸ್ವಿಯಾಗಿ ಅತ್ಯುತ್ತಮ ಮಾರ್ಗದರ್ಶನ ಮತ್ತು ಕೊಡುಗೆಯನ್ನು ನೀಡಿದರು. ಶ್ರೀ ಯೋಗರಾಜ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, ಹೊಸದುರ್ಗ, ಶ್ರೀ ಪ್ರದೀಪ್, ಶ್ರೀಮತಿ ಮಂಜುಳ ಇತರೆ ಪದಾಧಿಕಾರಿಗಳು ಶಿಬಿರದ ಸಂಪೂರ್ಣ ಉಸ್ತುವಾರಿ ವಹಿಸಿ ಸುವ್ಯವಸ್ಥಿತವಾಗಿ ನೆರವೇರಿಸಿರುವುದು ಅಭಿನಂದನಾರ್ಹ. ಒಟ್ಟು 26 ಜಿಲ್ಲೆಗಳಿಂದ 142 ಶಿಬಿರಾರ್ಥಿಗಳು ಭಾಗವಹಿಸಿರುತ್ತಾರೆ.



# ಜಿಲ್ಲಾ ತರಬೇತಿ ಆಯುಕ್ತರುಗಳ ರಾಜ್ಯ ಮಟ್ಟದ ಸಮಾವೇಶ

ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಅಕ್ಟೋಬರ್ 23 ರಿಂದ 27ರ ವರಗೆ ನೀಲಕುರಂಜಿ ತರಬೇತಿ ಕೇಂದ್ರ, ಕೇಟ್ಟೈ ತಮಿಳುನಾಡಿನಲ್ಲಿ ರಾಜ್ಯ ಮಟ್ಟದ ತರಬೇತಿ ಆಯುಕ್ತರ ಸಮಾವೇಶವನ್ನು ಆಯೋಜಿಸಲಾಗಿತ್ತು. ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಕೆ. ಖಾನ್‌ರವರು ಸಮಾವೇಶವನ್ನು ಉದ್ಘಾಟಿಸಿದರು. ಸಮಾವೇಶದಲ್ಲಿ ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ಜಿಲ್ಲಾ ಕಾರ್ಯದರ್ಶಿ, ಶ್ರೀ ಎ.ಎಸ್. ಮಧೂಸೂದನ್, ಅಪರ ಅಂತರಾಷ್ಟ್ರೀಯ ಆಯುಕ್ತರು ಮತ್ತು ಜಿಲ್ಲಾ ಖಂಜಾಚಿಗಳು, ಶ್ರೀ ನಾಗೇಶ್ ಆರ್. ಶಿವಪುರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್), ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್), ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದರು.

ಅಕ್ಟೋಬರ್ 25 ರಂದು ಮದ್ರಾಸ್ ರೆಜಿಮೆಂಟಲ್ ಸೆಂಟರ್‌ಗೆ ಭೇಟಿ ನೀಡಿ ವಸ್ತು ಪ್ರದರ್ಶನ ವೀಕ್ಷಿಸಿ, ರೆಜಿಮೆಂಟಲ್ ಪ್ರಾರಂಭ ಬಗ್ಗೆ ಪ್ರದರ್ಶನ ನೋಡಿ, ಆರ್.ಡಿ ಪೇರೆಡ್ ಅಭ್ಯಾಸದ ವೀಕ್ಷಣೆ ಮಾಡಲಾಯಿತು. ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸುವುದು, ಸುಧಾರಿತ ತರಬೇತಿ ಶಿಬಿರಗಳ ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆ, ವಯಸ್ಕ ನಾಯಕರ ಪ್ರಗತಿ ಮಾಡಲಾಯಿತು. ನಾಯಕತ್ವ, ಜಿಲ್ಲಾ ವೈಯಕ್ತಿಕ ಕ್ರಿಯಾ ಯೋಜನೆಗಾಗಿ ತರಬೇತಿ ಮತ್ತು ಕಾರ್ಯಕ್ರಮಗಳ ವಿನ್ಯಾಸಗೊಳಿಸುವ ಬಗ್ಗೆ ಗುಂಪು ಚರ್ಚೆ ಸಮಾವೇಶಕ್ಕೆ ಆಗಮಿಸಿದ ಶಿಬಿರಾರ್ಥಿಗಳಿಗೆ ಮತ್ತು ಸಮಾವೇಶದ ಸಿಬ್ಬಂದಿ ವರ್ಗದವರಿಗೆಜಿಲ್ಲಾ ಸಂಸ್ಥೆಯ ವತಿಯಿಂದಗೌರವ ಪೂರಕವಾಗಿ ಬ್ಯಾಗ್ ಮತ್ತು ಟೀ ಷರ್ಟ್‌ಅನ್ನು ನೀಡಲಾಯಿತು.

ಅಕ್ಟೋಬರ್ 26 ರಂದು ಸರ್ವಧರ್ಮ ಪ್ರಾರ್ಥನೆ ನಂತರ ವಯಸ್ಕ ನಾಯಕರ ಪ್ರಗತಿ, ಸ್ಕೌಟಿಂಗ್‌ನಲ್ಲಿ ವಯಸ್ಕರು, ಜಿಲ್ಲಾ ಸದಸ್ಯತ್ವ ಬೆಳವಣಿಗೆ ಬಗ್ಗೆ, ನಾಯಕತ್ವ ಬಗ್ಗೆ, ತರಬೇತಿ ಶಿಬಿರದ 07 ದಿನದ ಯೋಜನಾ ಕಾರ್ಯಕ್ರಮದ ಗುಂಪು ಚರ್ಚೆ ಮಾಡಲಾಯಿತು. ಜಿಲ್ಲಾ ತರಬೇತಿ ತಂಡವನ್ನು ರಚಿಸುವ ಬಗ್ಗೆ, 2024–25ರ ಕ್ರಿಯಾಯೋಜನೆ, ಜಿಲ್ಲಾ ತರಬೇತಿ ಆಯುಕ್ತರ ಸಮಾವೇಶದ ಶಿಫಾರಸ್ಸು ಬಗ್ಗೆ, ಮುಕ್ತ ಚರ್ಚೆ ನೆಡೆಯಿತು.

ಅಕ್ಟೋಬರ್ 26 ರಂದು ಸಂಜೆ ಸಮಾರೋಪ ಸಮಾರಂಭವು ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ವಯಸ್ಕ ಸಂಪನ್ಮೂಲ ಆಯುಕ್ತರ ಅಧ್ಯಕ್ಷತೆಯಲ್ಲಿ ನೆಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಎಂ.ಎಸ್. ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿ ಹಾಗೂ ಜಿಲ್ಲಾ ಕಾರ್ಯದರ್ಶಿ, ಶ್ರೀ ಎ.ಎಸ್. ಮಧೂಸೂದನ್, ಅಪರ ಅಂತರಾಷ್ಟ್ರೀಯ ಆಯುಕ್ತರು ಮತ್ತುಜಿಲ್ಲಾ ಖಂಜಾಚಿಗಳು, ಶ್ರೀ ನಾಗೇಶ್ ಆರ್. ಶಿವಪುರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್), ಶ್ರೀ ಟಿ.ಕೆ ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್), ಕಾರ್ಯಕ್ರಮದಲ್ಲಿ ಉಪಸ್ಥಿತರಿದರು.

ಅಕ್ಟೋಬರ್ 27 ರಂದು ಅವರೋಹಣದೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

## ಅಭಿನಂದನೆಗಳು



ದಕ್ಷಿಣ ಕನ್ನಡ ಜಿ॥, ಸುರತ್ಕಲ್ ತಾ॥, ಕೃಷ್ಣಾಪುರ ಸರಕಾರಿ ಪದವಿಪೂರ್ವ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ರೋವರ್ಸ್ ಘಟಕದ ನಾಯಕ **ಶ್ರೀ ರವಿಚಂದ್ರ ಭಂಡಾರಿ,** ತಮಿಳುನಾಡಿನ ಸ್ಟಾರ್ ಇಂಟರ್ನ್ಯಾಷನಲ್ ಫೌಂಡೇಶನ್ ಫಾರ್ ರಿಸರ್ಚ್ ಮತ್ತು ಎಜುಕೇಶನ್ ಸಂಸ್ಥೆ ಸಮುದಾಯ ಸೇವೆ, ಸಂಶೋಧನೆ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಗಾಗಿ ಕೊಡಲ್ಪಡುವ ಎಸ್‌ಐಎಫ್‌ಆರ್‌ಐ ಇಂಟರ್ನ್ಯಾಷನಲ್ ಬೆಸ್ಟ್ ಟೀಚರ್ ಅವಾರ್ಡ್ 2024ನ್ನು ಪಡೆದಿದ್ದಾರೆ.

ಅದರೊಂದಿಗೆ ಚೆನ್ನೈ ವಿಮೆನ್ಸ್ ಕ್ರಿಶ್ಚಿಯನ್ ಕಾಲೇಜು ಮತ್ತು ಬೋಧಿ ಇಂಟರ್ನ್ಯಾಷನಲ್ ಜರ್ನಲ್ ಇಂಡಿಯಾ ಕೊಡಲ್ಪಡುವ ಬೋಧಿ ಇಂಟರ್ನ್ಯಾಷನಲ್ ಅಕಾಡಮಿಕ್ ಮತ್ತು ರಿಸರ್ಚ್ ಎಕ್ಸಲೆನ್ಸ್ ಅವಾರ್ಡ್ಸ್ –2024ನ್ನು ಕೂಡ ಪಡೆದಿದ್ದು ಅವರಿಗೆ ಜುಲೈ 28 ರಂದು ಈರೋಡ್ ಕೊಹಿನೂರ್ ಹೊಟೇಲ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಕರ್ನಾಟಕ ರಾಜ್ಯ ಸಂಸ್ಥೆಯ 2023-24ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರಗಳನ್ನು ಆಯೋಜಿಸಲಾಗಿತ್ತು ವಿವರಗಳು ಈ ಕೆಳಕಂಡಂತಿವೆ:

| ಕ್ರ.ಸಂ. | ದಿನಾಂಕ | ಸ್ಥಳ | ಸ್ಕೌಟ್ ವಿಭಾಗ | | ಗೈಡ್ ವಿಭಾಗ | |
|---|---|---|---|---|---|---|
| | | | ನಾಯಕರು | ಸ್ಕೌಟ್ಸ್ ಸಂಖ್ಯೆ | ನಾಯಕಿಯರು | ಗೈಡ್ಸ್ ಸಂಖ್ಯೆ |
| 1 | 23.10.2024 ರಿಂದ 25.10.2024 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ | ಶ್ರೀ ಪಿ.ಜಿ. ಆರಾಧ್ಯಮಠ್, ಎ.ಎಲ್.ಟಿ(ಸ್ಕೌ) | 182 | ಶ್ರೀಮತಿ ಕುಮಾರಿ ಹೊನ್ನಮ್ಮ ಎನ್, ಎಲ್.ಟಿ(ಗೈ) | 182 |
| 2 | 23.10.2024 ರಿಂದ 25.10.2024 | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ & ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ | ಶ್ರೀ ಆನಂದ ಅಡಿಗ, ಎಲ್.ಟಿ(ಸ್ಕೌ) | 288 | ಶ್ರೀಮತಿ ಎಂ. ರತ್ನಾ, ಎಲ್.ಟಿ(ಗೈ) | 329 |
| 3 | 23.10.2024 ರಿಂದ 25.10.2024 | ಜಿಲ್ಲಾ ಕೇಂದ್ರ ಕಛೇರಿ, ಧಾರವಾಡ ಜಿಲ್ಲೆ | ಶ್ರೀ ನಂಜುಂಡಪ್ಪ, ಎ.ಎಲ್.ಟಿ(ಸ್ಕೌ) | 103 | ಶ್ರೀಮತಿ ಅಕ್ಕಮ್ಮ ನರಗುಂದ್, ಎ.ಎಲ್.ಟಿ(ಗೈ) | 153 |
| 4 | 23.10.2024 ರಿಂದ 25.10.2024 | ವಾಸಂತಿ ಬಾಯಿ ಜಿಗಜಿನಿ ಜಿಲ್ಲಾ ತರಬೇತಿ ಕೇಂದ್ರ, ಬುರಣಾಪುರ, ವಿಜಯಪುರ ಜಿಲ್ಲೆ | ಶ್ರೀ ಮಂಜುನಾಥಪ್ಪ, ಎಲ್.ಟಿ(ಸ್ಕೌ) | 95 | ಶ್ರೀಮತಿ ಅನ್ನಪೂರ್ಣ ಯಳವಾರ್, ಎ.ಎಲ್.ಟಿ(ಗೈ) | 127 |
| 5 | 24.10.2024 ರಿಂದ 26.10.2024 | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೀದರ್ ಜಿಲ್ಲೆ | ಶ್ರೀ ಬಸವರಾಜ್ ಗೋಗಿ | 86 | ಶ್ರೀಮತಿ ರಜನಿ, ಪ್ರೀ-ಎ.ಎಲ್.ಟಿ(ಗೈ) | 76 |
| 6 | 26.10.2024 ಮತ್ತು 27.10.2024 | ಜಿಂದಾಲ್ ವಿದ್ಯಾಸಂಸ್ಥೆ, ಸಂಡೂರು, ಬಳ್ಳಾರಿಜಿಲ್ಲೆ | ಶ್ರೀ ಪ್ರಭಾಕರ ದಾಸರ್ ಎ.ಎಲ್.ಟಿ(ಸ್ಕೌ) | 134 | ಶ್ರೀಮತಿ ಮಲ್ಲೇಶ್ವರಿ ಬುಜಾರೆ ಎಲ್.ಟಿ(ಗೈ) | 142 |
| 7 | 26.10.2024 ಮತ್ತು 27.10.2024 | ಜಯಚಾಮ ರಾಜೇಂದ್ರ ಜಿಲ್ಲಾ ಸ್ಕೌಟ್ ಭವನ, ಮೈಸೂರು ಜಿಲ್ಲೆ | ಶ್ರೀ ಜನಾರ್ದನ ಚಕ್ರವರ್ತಿ, ಎಲ್.ಟಿ(ಸ್ಕೌ) | 174 | ಶ್ರೀಮತಿ ಗಾಯತ್ರಿ, ಎ.ಎಲ್.ಟಿ(ಗೈ) | 195 |
| 8 | 28.10.2024 ಮತ್ತು 29.10.2024 | ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ & ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ | ಶ್ರೀ ಶಂಕರ್ ಭಜಂತ್ರಿ, ಎ.ಎಲ್.ಟಿ(ಸ್ಕೌ) | 351 | ಶ್ರೀಮತಿ ಸಾವಿತ್ರಮ್ಮ, ಎಲ್.ಟಿ(ಗೈ) | 354 |
| | | ಒಟ್ಟು | | 1413 | | 1558 |

ಕರ್ನಾಟಕ ರಾಜ್ಯ ಸಂಸ್ಥೆಯ 2023–24ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ರೋವರ್ಸ್ ಮತ್ತು ರೇಂಜರ್ಸ್‌ಗಳ ಪರೀಕ್ಷಾ ಶಿಬಿರವನ್ನು ನವೆಂಬರ್ 14 ರಿಂದ 16ರ ವರೆಗೆ ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ವಿವರಗಳು ಕೆಳಕಂಡಂತಿವೆ:

| ಕ್ರ.ಸಂ | ಜಿಲ್ಲೆಗಳು | ರೋವರ್ ವಿಭಾಗ | | ರೇಂಜರ್ ವಿಭಾಗ | |
|---|---|---|---|---|---|
| | | ನಾಯಕರು | ರೋವರ್ಸ್ ಸಂಖ್ಯೆ | ನಾಯಕಿಯರು | ರೇಂಜರ್ಸ್ ಸಂಖ್ಯೆ |
| 1 | ಬೆಂಗಳೂರು ಪೂರ್ವ | ಶ್ರೀ ಸತ್ಯಜೀತ್, ಎ.ಎಲ್.ಟಿ (ರೋ) | 10 | ಶ್ರೀಮತಿ ಅರುಣಮಾಲ, ಎಲ್.ಟಿ(ಗೈ), ಅಡ್ವಾನ್ಸ್(ರೇಂ) | 7 |
| 2 | ಬೆಂಗಳೂರು ಉತ್ತರ | | 8 | | 9 |
| 3 | ಬೆಂಗಳೂರು ಗ್ರಾಮಾಂತರ | | 3 | | 2 |
| 4 | ಬೆಂಗಳೂರು ದಕ್ಷಿಣ | | 2 | | 4 |
| 5 | ಬೀದರ್ | | – | | 6 |
| 6 | ಚಾಮರಾಜನಗರ | | 8 | | 8 |
| 7 | ಕಲಬುರ್ಗಿ | | 16 | | 14 |
| 8 | ಕೋಲಾರ | | – | | 1 |
| 9 | ಮಧುಗಿರಿ | | – | | – |
| 10 | ಮಂಡ್ಯ | | – | | – |
| 11 | ಮೈಸೂರು | | 1 | | 11 |
| 12 | ರಾಯಚೂರು | | 5 | | 6 |
| 13 | ರಾಮನಗರ | | 1 | | – |
| 14 | ತುಮಕೂರು | | 9 | | 25 |
| 15 | ವಿಜಯಪುರ | | 7 | | 9 |
| 16 | ಯಾದಗಿರಿ | | 4 | | 10 |
| | | ಒಟ್ಟು | 74 | | 112 |

ರಾಜ್ಯ ಸಂಸ್ಥೆಯ 2023–24ನೇ ಸಾಲಿನ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ರೋವರ್ಸ್ ಮತ್ತು ರೇಂಜರ್ಸ್‌ಗಳ ಪರೀಕ್ಷಾ ಶಿಬಿರವನ್ನು ನವೆಂಬರ್ 14 ರಿಂದ 16ರ ವರೆಗೆ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ವಿವರಗಳು ಕೆಳಕಂಡಂತಿವೆ:

| ಕ್ರ.ಸಂ | ಜಿಲ್ಲೆಗಳು | ರೋವರ್ಸ್ ವಿಭಾಗ | | ರೇಂಜರ್ ವಿಭಾಗ | |
|---|---|---|---|---|---|
| | | ನಾಯಕರು | ರೋವರ್ಸ್ ಸಂಖ್ಯೆ | ನಾಯಕಿಯರು | ರೇಂಜರ್ಸ್ ಸಂಖ್ಯೆ |
| 1 | ಬೆಂಗಳೂರು ಪೂರ್ವ | ಶ್ರೀ ವಿತೇಶ್, ಹೆಚ್.ಡಬ್ಲ್ಯೂ.ಬಿ. (ರೋ) | 11 | ಕು. ದೀಪಿಕ ಪ್ರೀ–ಎ.ಎಲ್.ಟಿ(ರೇ) | 19 |
| 2 | ಬೆಳಗಾವಿ | | 61 | | 69 |
| 3 | ಬಳ್ಳಾರಿ | | 7 | | 7 |
| 4 | ಚಿತ್ರದುರ್ಗ | | 22 | | 18 |
| 5 | ದಕ್ಷಿಣ ಕನ್ನಡ | | 2 | | 16 |
| 6 | ದಾವಣಗೆರೆ | | 10 | | 9 |
| 7 | ಧಾರವಾಡ | | 13 | | 10 |
| 8 | ಗದಗ | | 19 | | 30 |
| 9 | ಹಾಸನ | | 11 | | 18 |
| 10 | ಹಾವೇರಿ | | 28 | | 30 |
| 11 | ಕೊಪ್ಪಳ | | 11 | | 21 |
| 12 | ಶಿವಮೊಗ್ಗ | | 23 | | 23 |
| 13 | ಶಿರಸಿ | | 1 | | 6 |
| 14 | ಉಡುಪಿ | | 10 | | 25 |
| 15 | ವಿಜಯನಗರ | | – | | 3 |
| | | ಒಟ್ಟು | 229 | | 304 |

# ವೀರಶೈವ ಸಹಕಾರಿ ಬ್ಯಾಂಕ್ ಲಿ.,

ನಂ.1732/32, ಎಂ.ಸಿ.ರಸ್ತೆ, ಎಂ.ಸಿ.ಬಡಾವಣೆ, ವಿಜಯನಗರ, ಬೆಂಗಳೂರು-560040.

## ದಿನಾಂಕ 31-03-2024 ರ ಅಂತ್ಯಕ್ಕಿದ್ದಂತೆ ಬ್ಯಾಂಕಿನ ಹಣಕಾಸಿನ ಅಂಕಿ-ಅಂಶಗಳ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರಗಳು | 31-03-2024 |
|---|---|---|
| 1. | ಷೇರು ಬಂಡವಾಳ | 1052.10 |
| 2. | ಆಪದ್ಧನ ಮತ್ತು ಇತರೆ ನಿಧಿಗಳು | 3024.23 |
| 3. | ಅವಕಾಶಗಳು | 847.13 |
| 4. | ಠೇವಣಿಗಳು | 35018.60 |
| 5. | ಸಾಲ ಮತ್ತು ಮುಂಗಡಗಳು | 18300.96 |
| 6. | ಹೂಡಿಕೆಗಳು | 18000.22 |
| 7. | ದುಡಿಯುವ ಬಂಡವಾಳ | 40711.74 |
| 8. | ತೆರಿಗೆಗೆ ಮುನ್ನ ಲಾಭ | 348.40 |
| 9. | ತೆರಿಗೆಯ ನಂತರ ನಿವ್ವಳ ಲಾಭ | 265.70 |
| 10. | ಎನ್.ಪಿ.ಎ ಮೊತ್ತ<br>ಒಟ್ಟು (Gross) ಎನ್.ಪಿ.ಎ (%)<br>ನಿವ್ವಳ (Net) ಎನ್.ಪಿ.ಎ (%) | 791.45<br>4.32%<br>0% |
| 11. | ಒಟ್ಟು ವ್ಯವಹಾರ | 53319.56 |
| 12. | ಬಂಡವಾಳ ಪರ್ಯಾಪ್ತ ಅನುಪಾತ(CRAR) | 19.13 |

## ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು

| | | | | | |
|---|---|---|---|---|---|
| 1. | ಶ್ರೀ ಬಿ.ಎಸ್.ಪರಮಶಿವಯ್ಯ | ಅಧ್ಯಕ್ಷರು | 12. | ಶ್ರೀ ಸದಾಶಿವಯ್ಯ | ನಿರ್ದೇಶಕರು |
| 2. | ಶ್ರೀ ಮಹದೇವ ಪ್ರಸಾದ್.ಬಿ.ಪಿ | ಉಪಾಧ್ಯಕ್ಷರು / ವ್ಯವಸ್ಥಾಪನ ಮಂಡಲಿ ನಿರ್ದೇಶಕರು | 13. | ಶ್ರೀ ಸಿ.ಸಿದ್ಧಲಿಂಗಯ್ಯ | ವ್ಯವಸ್ಥಾಪನ ಮಂಡಲಿ ನಿರ್ದೇಶಕರು |
| 3. | ಶ್ರೀ ಆರ್.ಚಂದ್ರಶೇಖರಯ್ಯ | ನಿರ್ದೇಶಕರು | 14. | ಶ್ರೀಮತಿ ಎನ್.ಗಿರಿಜ | ನಿರ್ದೇಶಕರು |
| 4. | ಶ್ರೀಮತಿ ಗಂಗಮ್ಮ.ಎಸ್ | ನಿರ್ದೇಶಕರು | 15. | ಶ್ರೀ ರಾಜು.ಹೆಚ್ | ನಿರ್ದೇಶಕರು |
| 5. | ಶ್ರೀ ಟಿ.ಎಸ್.ಗಂಗಾಧರ್ | ನಿರ್ದೇಶಕರು | 16. | ಶ್ರೀ ಶಿವಣ್ಣ.ಸಿ.ಬಿ | ನಿರ್ದೇಶಕರು |
| 6. | ಶ್ರೀ ನಟರಾಜ್.ಎಂ.ಎಸ್ | ನಿರ್ದೇಶಕರು | 17. | ಶ್ರೀಮತಿ ರುದ್ರಾಂಬ | ನಿರ್ದೇಶಕರು |
| 7. | ಶ್ರೀ ಬಿ.ಎಸ್.ಪ್ರಭುದೇವರು | ನಿರ್ದೇಶಕರು | 18. | ಶ್ರೀ ಬಿ.ಪಿ.ಶಿವಕುಮಾರಸ್ವಾಮಿ | ನಿರ್ದೇಶಕರು |
| 8. | ಶ್ರೀ ಬಿ.ಎಸ್.ಪುಟ್ಟಸ್ವಾಮಯ್ಯ | ವ್ಯವಸ್ಥಾಪನ ಮಂಡಲಿ ಅಧ್ಯಕ್ಷರು | 19. | ಶ್ರೀ CA.ಪ್ರದೀಪ್ ಕುಮಾರ್.ಜಿ | ವೃತ್ತಿಪರ ನಿರ್ದೇಶಕರು |
| 9. | ಶ್ರೀ ಪುಟ್ಟಗಂಗಯ್ಯ.ಎಸ್.ಹೆಚ್ | ನಿರ್ದೇಶಕರು | 20. | ಶ್ರೀ ಬಿ.ಎನ್.ಈಶ್ವರಯ್ಯ | ವೃತ್ತಿಪರ ನಿರ್ದೇಶಕರು |
| 10. | ಶ್ರೀ ಸಿದ್ದೇಶ್.ಬಿ.ಟಿ.ಉಮೇಶ್ | ನಿರ್ದೇಶಕರು | 21. | ಶ್ರೀ ವಿಶ್ವೇಶ್ವರ.ಜೆ.ಸಿ | ವ್ಯವಸ್ಥಾಪನ ಮಂಡಲಿ ನಿರ್ದೇಶಕರು |
| 11. | ಶ್ರೀ ಸಿ.ವಿ.ವಿಶ್ವನಾಥ್ | ನಿರ್ದೇಶಕರು | 22. | ಶ್ರೀ CA ಬಸವರಾಜ | ವ್ಯವಸ್ಥಾಪನ ಮಂಡಲಿ ನಿರ್ದೇಶಕರು |

## ಠೇವಣಿಗಳ ಮೇಲೆ ನೀಡುವ ಬಡ್ಡಿ ದರದ ವಿವರ

| ಠೇವಣಿ ಅವಧಿ | ಬಡ್ಡಿದರ |
|---|---|
| 15 ದಿನದಿಂದ 30 ದಿನಗಳವರೆಗೆ | 3.75% |
| 31 ದಿನದಿಂದ 45 ದಿನಗಳವರೆಗೆ | 4.50% |
| 46 ದಿನದಿಂದ 90 ದಿನಗಳವರೆಗೆ | 4.75% |
| 91 ದಿನದಿಂದ 180 ದಿನಗಳವರೆಗೆ | 5.50% |
| 181 ದಿನದಿಂದ 1 ವರ್ಷದವರೆಗೆ | 6.50% |
| 1 ವರ್ಷ ಮೇಲ್ಪಟ್ಟು 4 ವರ್ಷದವರೆಗೆ | 7.75% |
| 4 ವರ್ಷ ಮೇಲ್ಪಟ್ಟು 10 ವರ್ಷದವರೆಗೆ | 7.50% |

**ಆರು ತಿಂಗಳು ಮೇಲ್ಪಟ್ಟ ಅವಧಿಯ ಠೇವಣಿ ಖಾತೆ ಹೊಂದಿರುವ ಹಿರಿಯ ನಾಗರೀಕರಿಗೆ ಶೇ.0.50% ಹೆಚ್ಚಿನ ಬಡ್ಡಿದರ ನೀಡಲಾಗುವುದು**

| ಬೃಹತ್ ಠೇವಣಿಗಳು | ಬಡ್ಡಿದರ |
|---|---|
| 1 ವರ್ಷ ಮೇಲ್ಪಟ್ಟು 3 ವರ್ಷದವರೆಗೆ<br>ರೂ.15.00ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ | 8.00% |
| 1 ವರ್ಷ ಮೇಲ್ಪಟ್ಟು 3 ವರ್ಷಗಳವರೆಗೆ<br>ರೂ.25.00ಲಕ್ಷ ಮತ್ತು ಮೇಲ್ಪಟ್ಟು ಹೂಡಿಕೆ ಮಾಡುವ ಅವಧಿ ಠೇವಣಿಗಳಿಗೆ | 8.10% |

**ಹಿರಿಯ ನಾಗರಿಕರಿಗೆ ನೀಡುವ ಹೆಚ್ಚಿನ ಬಡ್ಡಿದರ ಈ ಮೇಲ್ಕಂಡ ಬೃಹತ್ ಠೇವಣಿಗಳಿಗೆ ಅನ್ವಯಿಸುವುದಿಲ್ಲ.**

## ಸಾಲಗಳ ಮೇಲೆ ವಿಧಿಸುವ ಬಡ್ಡಿ ದರಗಳ ವಿವರ

| ಕ್ರ.ಸಂ | ಸಾಲಗಳ ವಿವರ | ಬಡ್ಡಿದರ |
|---|---|---|
| 1. | ಗೃಹನಿರ್ಮಾಣ/ಖರೀದಿಸಾಲ - ನಿವೇಶನ ಖರೀದಿ 'A' ಖಾತಾ ಸ್ವತ್ತು ರೂ.140.00 ಲಕ್ಷಗಳ ಮಿತಿಯವರೆಗೆ (ಪಟ್ಟಣ ಸಹಕಾರಿ ಬ್ಯಾಂಕುಗಳನ್ನು ಹೊರತುಪಡಿಸಿ ಬೇರೆ ಬ್ಯಾಂಕುಗಳಲ್ಲಿ ಹೊಂದಿರುವ ಸಾಲಗಳನ್ನು Take Over ಪಡೆಯಲಾಗುವುದು) | ರೂ.25 ಲಕ್ಷದವರೆಗೆ – 8.25%<br>ರೂ.25 ಲಕ್ಷ ಮೇಲ್ಪಟ್ಟು ರೂ.50ಲಕ್ಷದವರೆಗೆ – 8.50%<br>ರೂ.50 ಲಕ್ಷ ಮೇಲ್ಪಟ್ಟು ರೂ.75 ಲಕ್ಷದವರೆಗೆ – 8.75%<br>ರೂ.75 ಲಕ್ಷ ಮೇಲ್ಪಟ್ಟು ರೂ.140 ಲಕ್ಷದವರೆಗೆ – 9.00% |
| 2. | ಭಾಗಶಃ ರೆಸಿಡೆನ್ಸಿಯಲ್ ಹಾಗೂ ಕಮರ್ಷಿಯಲ್ ಕಟ್ಟಡ ನಿರ್ಮಾಣ/ಖರೀದಿ ಸಾಲ | ರೂ.140.00 ಲಕ್ಷದವರೆಗೆ – 11.50% |
| 3. | ಮಾರ್ಟ್‌ಗೇಜ್ ಸಾಲ/ಸಿ.ಓ.ಡಿ/ಮದುವೆ ಸಾಲ | ರೂ.2 ಲಕ್ಷ ಮೇಲ್ಪಟ್ಟು ರೂ.25 ಲಕ್ಷದವರೆಗೆ – 9.50%<br>ರೂ.25 ಲಕ್ಷ ಮೇಲ್ಪಟ್ಟು ರೂ.50 ಲಕ್ಷದವರೆಗೆ – 10.00%<br>ರೂ.50 ಲಕ್ಷ ಮೇಲ್ಪಟ್ಟು ರೂ.1 ಕೋಟಿವರೆಗೆ – 11.00%<br>ರೂ.1 ಕೋಟಿ ಮೇಲ್ಪಟ್ಟು – 12.00% |
| 4. | ಮನೆ ರಿಪೇರಿ ಮತ್ತು ನವೀಕರಣ (ರೂ.10.00 ಲಕ್ಷಗಳವರೆಗೆ) | 9.00% |
| 5. | ವ್ಯಾಪಾರ ಸಾಲ / ದುಡಿಯುವ ಬಂಡವಾಳ | 11.00% |
| 6. | ಓ.ಡಿ/ಸಿ.ಸಿ.ಎಲ್.ಸಾಲ | 12.50% |
| 7. | ಚಿನ್ನಾಭರಣ ಸಾಲ (1 ಗ್ರಾಂ ಗೆ ರೂ.4,000/-)<br>(Bullet Repayment Scheme upto Rs.4.00 Lakhs)<br>ರೂ.4.00 ಲಕ್ಷ ಮೇಲ್ಪಟ್ಟು ರೂ.10.00 ಲಕ್ಷಗಳವರೆಗೆ | <br>8.50%<br>9.00% |
| 8. | ವಾಹನಾಧಾರ ಸಾಲ<br>(ಅ) ನಾಲ್ಕು ಚಕ್ರ ವಾಹನ(60 ತಿಂಗಳು) (ಆ) ದ್ವಿ ಚಕ್ರ ವಾಹನ(30 ತಿಂಗಳು) | 9.00% |
| 9. | ಜಾಮೀನು ಸಾಲ<br>ರೂ.50,000/-ಗಳವರೆಗೆ (36 ತಿಂಗಳು)<br>ರೂ.50,000/-ದಿಂದ ರೂ.1.00 ಲಕ್ಷಗಳವರೆಗೆ (50 ತಿಂಗಳು)<br>ರೂ.1.00 ಲಕ್ಷದಿಂದ ರೂ.2.00 ಲಕ್ಷಗಳವರೆಗೆ (60 ತಿಂಗಳು)<br>ರೂ.2.00 ಲಕ್ಷ ಮೇಲ್ಪಟ್ಟು ರೂ.5.00 ಲಕ್ಷಗಳವರೆಗೆ - (ಸ್ಥಿರಾಸ್ತಿ ಅಡಮಾನ ಮಾಡಿದ ಸಾಲಗಳಿಗೆ) - (60 ತಿಂಗಳು) | <br>14.00%<br>14.00%<br>14.00%<br>12.00% |
| 10. | Education Loan (ಶಿಕ್ಷಣ ಸಾಲ) - 50 ಲಕ್ಷದವರೆಗೆ<br>ಇಂಜಿನಿಯರಿಂಗ್/ವೈದ್ಯಕೀಯ ವಿದ್ಯಾಭ್ಯಾಸಕ್ಕೆ - ಭಾರತದಲ್ಲಿ /ವಿದೇಶದಲ್ಲಿ | 9.00% |
| 11. | ಎಸ್.ಎಸ್.ಐ (SSI) ಸಣ್ಣ ಕೈಗಾರಿಕಾ ಘಟಕ ಅವಧಿ & ಓ.ಡಿ/ಸಿಸಿಎಲ್ | 9.50% |
| 12. | ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಆದ್ಯತಾವಲಯದ ಸಾಲಗಳು | 9.00% |

**Free RTGS / NEFT / Cheque Book Charges for all SB/CA/OD CCL account holders where Rs.10 Lakhs or more credit balance is maintained for more than 30 days.**

ನಾಮಮಾತ್ರ ಸದಸ್ಯರಿಗೆ ರೂ.1.00ಲಕ್ಷಗಳವರೆಗೆ ಮತ್ತು ಸದಸ್ಯರಿಗೆ ರೂ.10.00ಲಕ್ಷಗಳವರೆಗೆ ಚಿನ್ನಾಭರಣ ಸಾಲ ಪಡೆಯಲು ಅವಕಾಶವಿರುತ್ತದೆ.

**ಶ್ರೀಮತಿ ಬಿ.ಸಿ.ವಿಜಯಕುಮಾರಿ**
ಪ್ರಧಾನ ವ್ಯವಸ್ಥಾಪಕರು



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಬಾಗಲಕೋಟೆ ಜಿಲ್ಲಾ ಸಂಸ್ಥೆ ವತಿಯಿಂದ ಅಕ್ಟೋಬರ್ 16 ರಂದು ವಾರ್ಷಿಕ ಮಹಾಸಭೆಯು ಜಿಲ್ಲಾ ಕೇಂದ್ರ ಕಚೇರಿಯಲ್ಲಿ ಜಿಲ್ಲಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ ರವರು ಸ್ವಾಗತವನ್ನು ಮಾಡಿದರು. ವಾರ್ಷಿಕ ವರದಿಯನ್ನು ಸಂಘಟಕರಾದ ಶ್ರೀ ಪ್ರಮೋದ ಚೌಗುಲೆರವರು ಮಂಡಿಸಿದರು. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಉಪನಿರ್ದೇಶಕರು (ಅಭಿವೃದ್ಧಿ) ಶ್ರೀ ಬಿ.ಕೆ. ನಂದನೂರ ರವರು ಮಾತನಾಡಿ ಇಲಾಖೆ ಸಂಪೂರ್ಣ ಸಹಕಾರ ಇರುತ್ತದೆ ಎಂದು ತಿಳಿಸಿದರು. ಜಿಲ್ಲೆಯ ಉಪಾಧ್ಯಕ್ಷರಾದ ಶ್ರೀ ಜಿ.ಎನ್. ಪಾಟೀಲ್‌ರವರು ಸಕ್ರಿಯವಾಗಿ ಪದಾಧಿಕಾರಿಗಳು ಕಾರ್ಯನಿರ್ವಹಿಸಲು ತಿಳಿಸಿದರು. ಅಧ್ಯಕ್ಷೀಯ ಭಾಷಣದಲ್ಲಿ ಜಿಲ್ಲಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ್‌ರವರು ಮಾತನಾಡಿ ಶಿಕ್ಷಕರಿಗೆ ಸ್ಕೌಟ್ ಗೈಡ್‌ನಲ್ಲಿ ಪಾಲ್ಗೊಳ್ಳಲು ಒಂದು ಒಳ್ಳೆಯ ಅವಕಾಶ, ಹುಟ್ಟಿದ ಮಗು ವಿಶ್ವಮಾನವನಾಗಬೇಕೆಂದು ಮತ್ತು ಎಲ್ಲರೂ ಕೂಡ ಮುಂದಿನ ಪೀಳಿಗೆಗಾಗಿ ಶ್ರಮಿಸೋಣ ಎಂದು ತಿಳಿಸಿದರು.



* ನವೆಂಬರ್ 07 ರಂದು ಬಾಗಲಕೋಟೆ ಜಿಲ್ಲಾ ಸಂಸ್ಥೆ ವತಿಯಿಂದ ಸಂಸ್ಥಾಪನಾ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ ಶ್ರೀಮತಿ ಕೆ.ಎಂ. ಜಾನಕಿ, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಾಗಲಕೋಟೆ, ಶ್ರೀ ಶಶಿಧರ ಕುರೇರ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬಾಗಲಕೋಟೆ, ಶ್ರೀ ಸಂತೋಷ್ ಜಗಲಾ, ಉಪವಿಭಾಗಾಧಿಕಾರಿಗಳು ಬಾಗಲಕೋಟೆ, ಶ್ರೀ ಮಹಾಂತೇಶ್ವರ ಜಿದ್ದಿ, ಹೆಚ್ಚುವರಿ ಪೊಲೀಸ್ ಅಧಿಕ್ಷಕರು ಬಾಗಲಕೋಟೆ, ಶ್ರೀ ಅಮರೇಶ ಪಮ್ಮಾರ, ತಹಶೀಲ್ದಾರರು, ಬಾಗಲಕೋಟೆರವರು ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿ ಎಲ್ಲ ಶಾಲಾ–ಕಾಲೇಜುಗಳಲ್ಲಿ ಸಕ್ರಿಯವಾಗಿ ಘಟಕಗಳನ್ನು ಪ್ರಾರಂಭಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲೆಯ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಕೆ. ನಂದನೂರ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಪಿ.ಎಸ್. ಬದ್ನೂರ, ಸಂಘಟಕರಾದ ಕು.ಪ್ರಮೋದ್ ಚೌಗುಲೆ, ತಾಲೂಕ ಕಾರ್ಯದರ್ಶಿಗಳಾದ ಶ್ರೀ ಎನ್.ಬಿ. ಗೌಡರ, ಶ್ರೀಮತಿ ಉಮಾದೇವಿ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





## ಬೆಳಗಾವಿ

* ನವೆಂಬರ್ 05 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ರಾಯಬಾಗ ಇವರ ಸಹಯೋಗದಲ್ಲಿ 2024–25ನೇ ಸಾಲಿನ ಘಟಕಗಳ ನವೀಕರಣ ಮತ್ತು ತಾಲೂಕು ಮಟ್ಟದ ದೇಶಭಕ್ತಿ ಗೀತಗಾಯನ ಕಾರ್ಯಕ್ರಮವು ನಗರದ ಕೆ. ಪಿ.ಎಸ್ ಶಾಲೆಯಲ್ಲಿ ಜರುಗಿತು. ಸಮಾರಂಭದ ಮುಖ್ಯ ಅತಿಥಿಯಾಗಿ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಆದ ಶ್ರೀ ಬಸವರಾಜಪ್ಪ. ಆರ್. ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿ 'ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಸ್ಕೌಟ್ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ' ಎಂದು ಹೇಳಿದರು. ಇದೇ ವೇಳೆ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಹಾಗೂ ರಾಯಬಾಗ ತಾಲೂಕಿನ ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳನ್ನು ಗೌರವಿಸಲಾಯಿತು. ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀಎನ್.ಜಿ. ಪಾಟೀಲ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರೋಪ ಸಮಾರಂಭದಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಂ. ಪಿ. ಜೇರಗ್ಯಾಳ, ಬಿ.ಐ.ಇ.ಆರ್.ಟಿ. ಶ್ರೀ ಹುಲಗಬಾಳಿ, ಉಪಸ್ಥಿತರಿದ್ದು ವಿಜೇತ ಮಕ್ಕಳಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರ ಪ್ರದಾನ ಮಾಡಿದರು. ಶ್ರೀ ಟಿ.ಜಿ. ದಾಸಪ್ಪನವರ ನಿರೂಪಿಸಿದರು. ಕಾರ್ಯದರ್ಶಿ ಶ್ರೀ ವೈ.ಕೆ. ಭಜಂತ್ರಿ ವಂದಿಸಿದರು. ಕಾರ್ಯಕ್ರಮದ ಉಸ್ತುವಾರಿಯನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಶಬಾನಾ ದೇಸಾಯಿ ವಹಿಸಿದ್ದರು. 80ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, 40 ಸ್ಕೌಟ್ ಮತ್ತು ಗೈಡ್‌ಗಳು ಭಾಗವಹಿಸಿದ್ದರು.



* ನವೆಂಬರ್ 13 ರಂದು ಚಿಕ್ಕೋಡಿಯ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಶ್ರೀ ಆರ್.ಎಸ್. ಸೀತಾರಾಮು, ಚಿಕ್ಕೋಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಬಿ. ಎ. ಮೇಕನ ಮರಡಿ, ಶಿಕ್ಷಣಾಧಿಕಾರಿಗಳು ಉಪನಿರ್ದೇಶಕರ ಕಾರ್ಯಾಲಯ, ಚಿಕ್ಕೋಡಿಯ ಶ್ರೀ ಆರಿಫ್ ಬಿರಾದಾರ ಇವರನ್ನು ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚೀಟಿಗಳನ್ನು ಬಿಡುಗಡೆಗೊಳಿಸಲಾಯಿತು. ನಂತರ ಗ್ರಾಮ ಪಂಚಾಯ್ತಿ ತನಣದಿ ಮತ್ತು ಹಿರೇಕೋಡಿ ಇಲ್ಲಿಗೆ ಭೇಟಿ ನೀಡಿ ಕರ್ನಾಟಕ ಪಂಚಾಯತ್ ರಾಜ್ ಹಾಗೂ ಗ್ರಾಮೀಣ ಅಭಿವೃದ್ಧಿ ಇಲಾಖೆಯವರ ಆದೇಶವನ್ನು ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಕೊಟ್ಟು 5,000 ರೂ.ಗಳ ಅನುದಾನ ಬಿಡುಗಡೆ ಮಾಡಲು ಮನವಿ ಪತ್ರ ಸಲ್ಲಿಸಲಾಯಿತು. ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಎನ್.ಜಿ. ಪಾಟೀಲ, ಶ್ರೀ ಕೆ.ಎನ್. ಖೋತ, ಶ್ರೀ ಎಸ್.ಎಸ್. ಕೋಳಿ ಉಪಸ್ಥಿತರಿದ್ದರು.




* ನವೆಂಬರ್ 12 ರಂದು ಜಿಲ್ಲಾ ಸಂಸ್ಥೆ ವತಿಯಿಂದ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮ ಪಂಚಾಯಿತಿ ಅನುದಾನ ಬಿಡುಗಡೆಗಾಗಿ ಮನವಿ ಪತ್ರ ಸಲ್ಲಿಸಲಾಯಿತು. ಚಿಂಚಣಿ ಮತ್ತು ಕೋಥಳಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಅನುದಾನ ಬಿಡುಗಡೆಗಾಗಿ ಮನವಿ ಪತ್ರ ಸಲ್ಲಿಸಲಾಯಿತು. ಇದೇ ವೇಳೆ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಲಾಯಿತು. ನಂತರ ನಿಪ್ಪಾಣಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ.ಎ. ನಾಯಕ ಇವರೊಂದಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜಚೀಟಿಗಳನ್ನು ಬಿಡುಗಡೆಗೊಳಿಸಲಾಯಿತು. ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀಎನ್.ಜಿ. ಪಾಟೀಲ, ಶ್ರೀಮತಿ ಶಾಖಾಂಬರಿ ದೇಶಪಾಂಡೆ, ಕಾರ್ಯದರ್ಶಿ ಶ್ರೀ ಟಿ.ಬಿ. ಲೋಕರೆ, ಖಜಾಂಚಿ ಶ್ರೀ ಎಸ್.ಎಂ. ಜಗದಾಳೆ, ಶ್ರೀ ಎ.ಎ. ಪಾಟೀಲ, ಶ್ರೀ ಡಿ. ಬಿ. ಅತ್ತಾರ ಉಪಸ್ಥಿತರಿದ್ದರು.

* ನವೆಂಬರ್ 15 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾರ್ಗದರ್ಶನದಂತೆ ಹುಕ್ಕೇರಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಭೇಟಿ ಮಾಡಿ ತಾಲೂಕು ಪಂಚಾಯತ ಮತ್ತು ಗ್ರಾಮ ಪಂಚಾಯತಿಗಳಿಂದ ಸರ್ಕಾರದ ಆದೇಶದಂತೆ 10000 ಮತ್ತು 5000 ರೂ.ಗಳ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಲಾಯಿತು. ತಾಲೂಕಿನ ಹುಲ್ಲೋಳಿ, ಸಾರಪುರ, ಬೆಲ್ಲದ ಬಾಗೇವಾಡಿ, ಗುಡಸ ಹಾಗೂ ಕೋಟ ಬಾಗಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕಾರ್ಯದರ್ಶಿ ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಪಂಚಾಯಿತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗೆ ಅನುದಾನ ನೀಡುವಂತೆ ಮನವಿಸಲ್ಲಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಎನ್.ಬಿ. ಗುಡಸಿ, ಎಸ್.ಬಿ. ಪರಿವೀಕ್ಷಕರಾದ ಶ್ರೀ ಎ.ಐ. ಕೋತಟವಾಲೆ ಇವರುಗಳು ಸಹ ಕಾರ್ಯದರ್ಶಿ ಶ್ರೀ ಎ.ಬಿ. ನಾಯಕ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಹಾಗೂ ಪ್ರಭಾವಿ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎ.ಐ. ಕೋತಟವಾಲೆ ಇವರುಗಳು ಸದರಿ ಮನವಿ ಪತ್ರಸಲ್ಲಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ಬೆಂಗಳೂರು ಗ್ರಾಮಾಂತರ

* ನವೆಂಬರ್ 07 ರಂದು ನಡೆದ ಸಂಸ್ಥಾಪನಾ ದಿನಾಚರಣೆ ಹಾಗೂ ಧ್ವಜ ದಿನಾಚರಣೆಯ ಪ್ರಯುಕ್ತ ಕಾರ್ಮೆಲ್ ಜ್ಯೋತಿ ಶಾಲೆಯಲ್ಲಿ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿ ಅದರ ಮಹತ್ವ ಹಾಗೂ ಸಂಸ್ಥಾಪನ ದಿನಾಚರಣೆ ಮಹತ್ವವನ್ನು ತಿಳಿಸಲಾಯಿತು. ತದನಂತರ ನಗರದ ಬೀದಿಗಳಲ್ಲಿ ಸ್ಕೌಟ್ ಚಳವಳಿ ಬಗ್ಗೆ ಜಾಥಾವನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀಮತಿ ನೀಮ ಕೊಪ್ಪಲ್, ಮುಖ್ಯ ಶಿಕ್ಷಕರಾದ ರೇಣುಕಾ ಎಸ್.ಎಸ್. ಉಪಸ್ಥಿತರಿದ್ದರು



* ನವೆಂಬರ್ 08 ರಂದು ನಡೆದ ಸಂಸ್ಥಾಪನಾ ದಿನಾಚರಣೆ ಹಾಗೂ ಧ್ವಜ ದಿನಾಚರಣೆಯ ಪ್ರಯುಕ್ತ ಶ್ರೀಗಂಧ ಇಂಟರ್ನ್ಯಾಷನಲ್ ಶಾಲೆಯಲ್ಲಿ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿ ಅದರ ಮಹತ್ವ ಹಾಗೂ ಸಂಸ್ಥಾಪನ ದಿನಾಚರಣೆ ಮಹತ್ವವನ್ನು ತಿಳಿಸಲಾಯಿತು. ಮುಖ್ಯ ಶಿಕ್ಷಕರಾದ ಶ್ರೀಮತಿ ಅನ್ನಪೂರ್ಣ ಹಾಗೂ ಎಸ್.ಎಸ್.ಜಿ.ಎ. ನಿಹಾಲ್ ಎಸ್.ಎಸ್. ಉಪಸ್ಥಿತರಿದ್ದರು.



* ನವೆಂಬರ್ 12. ರಂದು ನಡೆದ ಜಿಲ್ಲಾಮಟ್ಟದ ಗೀತ ಗಾಯನ ಸ್ಪರ್ಧೆ, ಸಂಸ್ಥಾಪನ ದಿನ ಹಾಗೂ ಧ್ವಜ ದಿನವನ್ನು ಲಯನ್ಸ್ ಕ್ಲಬ್ ಸಭಾಂಗಣ ದೇವನಹಳ್ಳಿ ಇಲ್ಲಿ ನಡೆಸಲಾಯಿತು. ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್, ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ್ ಪ್ರಸಾದ್, ಜಂಟಿ ಕಾರ್ಯದರ್ಶಿಗಳಾದ ಶ್ರೀ ಜ್ಯೋತಿ ಕುಮಾರ್ ಎಡಿಸಿ ಶ್ರೀ ವೆಂಕಟರಾಜು ಉಪಸ್ಥಿತರಿದ್ದರು.



* ನವೆಂಬರ್ 16 ರಿಂದ 17ರ ವರೆಗೆ ನಂದಿನಿ ವಸತಿಯುತ ಶಾಲೆ ವಿಜಯಪುರ ದೇವನಹಳ್ಳಿ ತಾ॥ ಇಲ್ಲಿ ಸ್ಕೌಟ್ಸ್‌ಗಳಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀಮತಿ ಉಮಾದೇವಿ ಕೋಲಾರ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಬಿ.ವಿ. ಶಿವಕುಮಾರ, ನಂದಿನಿ ವಿದ್ಯಾನಿಕೇತನ ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಶ್ರೀ ಪಿ.ಆರ್. ಕೃಷ್ಣನ್ ಕೌಶಿಕ್ ಹಾಗೂ ನಂದಿನಿ ವಿದ್ಯಾನಿಕೇತನ ವಸತಯುತ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಮೋಹನ್ ಕುಮಾರ್, ವೃಂದದವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ಹಾಗೂ ವಿಡಿಯಾ ಪೂರ್ಣಪ್ರಜ್ಞಾ ಪದವಿಪೂರ್ವ ಕಾಲೇಜು ಇವರ ಜಂಟಿ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಅಗ್ರಗಾಮಿ ಹಾಗೂ ಗುಡಾರ ಕಟ್ಟುವಿಕೆ ಶಿಬಿರವನ್ನು ವಿಡಿಯಾ ಪೂರ್ಣಪ್ರಜ್ಞಾ ಪದವಿಪೂರ್ವ ಕಾಲೇಜು ನಾಗಸಂದ್ರ ಇಲ್ಲಿ ಅಕ್ಟೋಬರ್ 19 ಮತ್ತು 20 ರಂದು ನಡೆಸಲಾಯಿತು.



ಅಕ್ಟೋಬರ್ 19 ರಂದು 10 ಗಂಟೆಗೆ ಧ್ವಜಾರೋಹಣ ಮಾಡಲಾಯಿತು. ಮುಖ್ಯ ಅತಿಥಿಯಾಗಿ ವಿಡಿಯಾ ಪೂರ್ಣಪ್ರಜ್ಞಾ ಶಾಲೆಯ ಪ್ರಾಂಶುಪಾಲರಾದ ಶ್ರೀ ರವಿಕುಮಾರ್ ಇವರು ಆಗಮಿಸಿ ಶುಭ ಹಾರೈಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮ ಉದ್ಘಾಟನೆಯನ್ನು ಶಾಲಾ ಪ್ರಾಂಶುಪಾಲರಾದ ಶ್ರೀ ಎಮ್.ವಿ. ಉಮೇಶ್ ಕುಮಾರ್ ಇವರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಪ್ರವೀಣ್ ಪದವಿಪೂರ್ವ ಕಾಲೇಜಿನ ಆಡಳಿತ ಅಧಿಕಾರಿಗಳು ಹಾಗೂ ವಿಡಿಯಾ ಪೂರ್ಣಪ್ರಜ್ಞಾ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಭುವನೇಶ್ವರಿ ಹಾಗೂ ಶಿಬಿರ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಷ್ಣುಪ್ರಸಾದ್ ಹಾಗೂ ಶಿಬಿರದ ನಾಯಕರಾದ ಲೇಡಿ ಸ್ಕೌಟ್ಸ್ ಮಾಸ್ಟರ್ ಶ್ರೀಮತಿ ಶೋಭ ಇವರು ಉಪಸ್ಥಿತರಿದ್ದರು. ಶಿಬಿರದಲ್ಲಿ ಗುಡಾರ ಹಾಕುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಧ್ವಜಸ್ತಂಭ ರಚನೆ, ಮಾಡುವ ಬಗ್ಗೆ ತಿಳಿಸಲಾಯಿತು. ಶಿಬಿರಾಗ್ನಿ ನಡೆಸಲಾಯಿತು. ಶಿಬಿರದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್ ಇವರು ಭಾಗವಹಿಸಿ ಶಿಕ್ಷಕರಿಗೂ ಮತ್ತು ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳಿಗೆ ಶುಭ ಕೋರಿ ಅಯೋಜಕರಿಗೆ ವಂದನೆಸಲ್ಲಿಸಿದರು.



ಅಕ್ಟೋಬರ್ 20 ರಂದು ಸರ್ವಧರ್ಮ ಪ್ರಾರ್ಥನೆ ಮಾಡಲಾಯಿತು. ಧ್ವಜ ಸ್ತಂಭ ರಚನೆಯ ಸ್ಪರ್ದೆ ಮಾಡಲಾಯಿತು. ವಿಜೇತರಿಗೆ ಸಮಾರೋಪ ಕಾರ್ಯಕ್ರಮದಲ್ಲಿ ಕಾಲೇಜು ಪ್ರಾಂಶುಪಾಲರಾದ ಶ್ರೀ ಎಮ್.ವಿ. ಉದಯಕುಮಾರ್ ಇವರು ಪದಕಗಳನ್ನು ವಿತರಿಸಿದರು.

* ಬೆಂಗಳೂರು ಉತ್ತರ ಜಿಲ್ಲೆಯ ಅರ್.ಟಿ.ನಗರ ಸ್ಥಳೀಯ ಸಂಸ್ಥೆಯ ದ್ವಿತಿಯ ಸೋಪಾನ ಪರೀಕ್ಷಾ ಶಿಬಿರವನ್ನು ಅಕ್ಟೋಬರ್ 26 ಆರ್.ಟಿ. ನಗರ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆಸಲಾಯಿತು. ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಬಿ.ಅರ್. ಪ್ರಸನ್ನಕುಮಾರ್ ಇವರು ನೆರವೇರಿಸಿ ಶುಭಹಾರೈಸಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಗಣಪತಿ ಹೆಗ್ದೆ ಇವರು ಸ್ಕೌಟ್ಸ್ ಗೈಡ್ಸ್ ಪರೀಕ್ಷಾ ಶಿಬಿರದಲ್ಲಿ ಎಲ್ಲರೂ ಉತ್ತಮವಾಗಿ ಮಾಡಿ ಎಂದು ಕರೆ ನೀಡಿದರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಸುನೀತ ಇವರು ಶಿಬಿರವನ್ನು ಸಂಘಟಿಸಿದರು.



* ಅಕ್ಟೋಬರ್ 19 ಮತ್ತ 20 ರಂದು ಜೋಟ ಜೋಟಿ ಕಾರ್ಯಕ್ರಮವನ್ನು ಚಾಮುಂಡಿ ಮುಕ್ತದಳದ ಸಹಕಾರದಿಂದ ಆಯೋಜಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಎಮ್.ಇ.ಎಸ್. ಮಲ್ಲೇಶ್ವರಮ್ ಇಲ್ಲಿಯ ರೋವರ್ ರೇಂಜರ್ ಜೋಟಜೋಟಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.




* ಶೃಗೇರಿ ಮಠದ ಸ್ವಾಮಿಜಿಯವರು ಮಠಾಧೀಶರಾಗಿ 50 ವರ್ಷ ಪೂರೈಸಿದ ನೆನಪಿಗಾಗಿ ಅರಮನೆ ಮೈದಾನದಲ್ಲಿ ನಡೆದ ಬೃಹತ್ಪೂಜಾಸಮಾರಂಭದಲ್ಲಿ ಬೆಂಗಳೂರುಉತ್ತರಜಿಲ್ಲೆಯ 326 ಸ್ಕೌಟ್ಸ್ ಗೈಡ್ಸ್ ರೋವರ್ ರೇಂಜರ್ ಸೇವೆಯನ್ನು ನೀಡಿ ಅಯೋಜಕರ ಹಾಗೂ ಸಭಿಕರ ಪ್ರಶಂಸೆಗೆ ಪಾತ್ರರಾದರು.



* ಬೆಂಗಳೂರು ಉತ್ತರ ಜಿಲ್ಲೆಯ ಯೆಲಹಂಕ ಸ್ಥಳೀಯ ಸಂಸ್ಥೆಯ ದ್ವಿತಿಯ ಸೋಪಾನ ಪರೀಕ್ಷಾ ಶಿಬಿರವನ್ನು ಅಕ್ಟೋಬರ್ 26 ರಂದು ಡಿಪಿಎಸ್ ಸ್ಕೂಲ್ ಯೆಲಹಂಕ ಇಲ್ಲಿ ನಡೆಸಲಾಯಿತು. ಶಿಬಿರದಲ್ಲಿ 200 ಸ್ಕೌಟ್ಸ್ ಗೈಡ್ಸ್ ಭಾಗವಹಿಸಿದರು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮೋಹನ್ ಇವರು ಶಿಬಿರವನ್ನು ಸಂಘಟಿಸಿದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ ಅಕ್ಟೋಬರ್ 17 ರಂದು ಗಂಟಿಗಾನಹಳ್ಳಿಯಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಿಡಗಳ ಬುಡಗಳಲ್ಲಿ ಕಳೆಗಳನ್ನು ತೆಗೆದು ಸ್ವಚ್ಛಗೊಳಿಸಿ ಗಿಡಗಳಿಗೆ ನೀರನ್ನು ನೀಡಲಾಯಿತು ಗಂಟಿಗಾನಹಳ್ಳಿಯ. ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು ಹಾಗು ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 62 ಭಾಗವಹಿಸಿದ್ದರು. ಕಾರ್ಯಕ್ರಮವು ತಿಂಗಳಿಗೊಮ್ಮೆ ನಡೆಯಲಿದೆ.



## ಬೆಂಗಳೂರು ಪೂರ್ವ

* ನವೆಂಬರ್ 08 ರಂದು ಆನೇಕಲ್‌ನ ಗುರುಭವನದಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಮಟ್ಟದ ದೇಶ ಭಕ್ತಿ ಗೀತೆಗಳ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎನ್. ವೆಂಕಟೇಶ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಖಜಾಂಚಿ ಶ್ರೀ ಸಿ. ಲಕ್ಷ್ಮೀಕಾಂತರಾಜು, ಸಹ ಕಾರ್ಯದರ್ಶಿ ಶ್ರೀ ಜಿ. ನಾಗರಾಜು, ಜಂಟಿ ಕಾರ್ಯದರ್ಶಿ ಶ್ರೀಮತಿ ಆರ್. ಸುಮಾ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಕೆ. ಚಂದ್ರಶೇಖರ್, ಸಿ.ಆರ್.ಪಿ.ಗಳಾದ ಶ್ರೀಮತಿ ಕೆ. ಪರಿಮಳ, ಶ್ರೀ ಮುನಿಕೃಷ್ಣಪ್ಪ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಡಿ.ಆರ್. ಮೋಹನ್‌ರಾವ್, ಶ್ರೀ ರಾಮಕೃಷ್ಣಯ್ಯ, ಎಸ್.ಜಿ.ವಿ., ಶ್ರೀ ಮನು ಮೊದಲಾದವರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಶ್ರೀಮತಿ ವಿದ್ಯಾರಾಣಿ, ಶ್ರೀ ಯು. ಶರಣಪ್ಪ, ಶ್ರೀ ಜಯರಾಮ್, ಕಾರ್ಯ ನಿರ್ವಹಿಸಿದರು.



* ನವೆಂಬರ್ 07 ರಂದು ಸರ್ಜಾಪುರದ ಸೆಂಟ್ ಫಿಲೋಮಿನಾಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಶಾಲೆಯ ಎಲ್ಲಾ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್ ಸುಮಾರು 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸ್ಕೌಟ್, ಗೈಡ್ ಸಮವಸ್ತ್ರ ಧರಿಸಿ ಧ್ವಜಾರೋಹಣ, ಧ್ವಜ ಚೀಟಿಗಳ ಬಿಡುಗಡೆ ಸಾಂಸ್ಕೃತಿಕ ಕಾರ್ಯಕ್ರಮಇನ್ನೂ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಶಾಲಾ ಪ್ರಾಂಶುಪಾಲೆ ಶ್ರೀಮತಿ ಎಸ್.ಆರ್. ಮಮತಾ, ಉಪಪ್ರಾಂಶುಪಲೆ ಹಾಗೂ ಸಹಾಯಕ ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಬಿ.ಎಸ್. ಪದ್ಮಜಾ, ಸ್ಕೌಟ್ ಮಾಸ್ಟರ್ ಶ್ರೀ ಕೆ.ವಿ. ಹರೀಶ್, ಗೈಡ್ ಕ್ಯಾಪ್ಟನ್ ಶ್ರೀಮತಿ ಧನಲಕ್ಷ್ಮಿ ಮೊದಲಾದವರುಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

* ನವೆಂಬರ್ 18 ರಂದು ಎಸ್.ಎಫ್.ಎಸ್. ಕಾಲೇಜಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ರೋವರ್ ಸ್ಕೌಟ್ ಲೀಡರ್ ಶ್ರೀ ಆರ್. ಸಂಪತ್ ಕುಮಾರ್ ನೇತೃತ್ವದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ರೋವರ್ ಮತ್ತು ರೇಂಜರ್‌ಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರಶಸ್ತಿ ಪತ್ರಗಳ ವಿತರಣೆ, ಕಾಲೇಜಿನ ರೋವರ್, ರೇಂಜರ್ ಟೀ ಷರ್ಟ್ ಬಿಡುಗಡೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಡಿ.ಆರ್. ಮೋಹನ್‌ರಾವ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.




## ಬೆಂಗಳೂರು ದಕ್ಷಿಣ

* ನವೆಂಬರ್ 08 ರಿಂದ 10ರ ವರಗೆ ಡಾ|| ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಸವನಗುಡಿ ಸ್ಥಳಿಯ ಸಂಸ್ಥೆಯ ವತಿಯಿಂದ ಕಬ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್‌ಗಳಿಗೆ 2024-25ನೇ ಸಾಲಿನ ದ್ವಿತೀಯ ಸೋಪಾನ ಮತ್ತು ದ್ವಿತಿಯ ಚರಣ್, ರಜತ್ ಪಂಕ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತ್ತು. ಈ ಪರೀಕ್ಷಾ ಶಿಬಿರಕ್ಕೆ ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ(ಸ್ಕೌಟ್ಸ್) ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್) ಸ್ಕೌಟ್ಸ್ ವಿಭಾಗದ ನಾಯಕರು, ಶ್ರೀಮತಿ ಗಾಯತ್ರಿಗೌಡ .ಎಲ್.ಟಿ(ಗೈಡ್) ಮತ್ತು ಶ್ರೀಮತಿ ರಾಜೇಶ್ವರಿ ಹೆಚ್.ಡಬ್ಲ್ಯೂ.ಬಿ(ಗೈಡ್ಸ್) ಗೈಡ್ ವಿಭಾಗದ ನಾಯಕಿಯರು, ಶ್ರೀ ಕೃಷ್ಣಪ್ರಸಾದ್, ಕಬ್ ವಿಭಾಗಕ್ಕೆ, ಕುಮಾರಿ ಅನುಷ ಬುಲ್-ಬುಲ್ ವಿಭಾಗಕ್ಕೆ ನಾಯಕರಾಗಿದರು. ಶ್ರೀ ಎಂಎಸ್ ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಚಂದ್ರು .ಪಿ ಎ.ಎಸ್.ಓ.ಸಿ. (ಸ್ಕೌಟ್ಸ್) ಶಿಬಿರಕ್ಕೆ ಭೇಟಿ ನೀಡಿದರು. ಈ ಶಿಬಿರದಲ್ಲಿ ಶ್ರೀ ಬಿ.ವಿ. ಶೇಖರ್ಎ.ಎಲ್.ಟಿ(ಸ್ಕೌಟ್ಸ್), 71 ಸ್ಕೌಟ್ಸ್, 50 ಗೈಡ್ಸ್, 09 ಕಬ್, 07 ಬುಲ್-ಬುಲ್ಸ್ ಮತ್ತು 14 ದಳನಾಯಕ-ನಾಯಕಿಯರು ಒಟ್ಟು 137 ಶಿಬಿರಾರ್ಥಿಗಳು ಭಾಗವಹಿಸಿದರು.



* ನವೆಂಬರ್ 07 ರಂದು 75ನೇ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ವತಿಯಿಂದ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ಟೌನ್ ಹಾಲ್‌ನಿಂದ ರಾಜ್ಯ ಕೇಂದ್ರ ಕಚೇರಿ ಬೈಕ್ ರ‍್ಯಾಲಿಯನ್ನು ಆಯೋಜಿಸಿಲಾಯಿತು. ಬೈಕ್ ರ‍್ಯಾಲಿಯನ್ನು ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ರ‍್ಯಾಲಿಯನ್ನು ಉದ್ಘಾಟಿಸಿದರು, ಬೈಕ್ ರ‍್ಯಾಲಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಪದಾಧಿಕಾರಿಗಳು, ವಿಜಯನಗರ ಮತ್ತು ಕೆ.ಆರ್. ಪುರಂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ರೋವರ್ಸ್‌ಗಳು ಮತ್ತು ದಳನಾಯಕರುಗಳು ಭಾಗವಹಿಸಿದರು.





# ಬೀದರ್

* ನವೆಂಬರ್ 01 ರಂದು ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಬೀದರ ಜಿಲ್ಲೆ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಶ್ರೀ ಈಶ್ವರ ಬಿ. ಖಂಡ್ರೆ ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ ಇವರು ನೆಹರು ಜಿಲ್ಲಾ ಕ್ರೀಡಾಂಗಣ ಬೀದರ ಇಲ್ಲಿ ಧ್ವಜಾರೋಹಣವನ್ನು ನೆರವೇರಿಸಿದರು. ನಂತರ ಪಥಸಂಚಲನದಲ್ಲಿ  ಭಾಗವಹಿಸಿದ ಬೀದರ ಜಿಲ್ಲೆಯ ಸ್ಕೌಟ್ಸ್ ತಂಡಕ್ಕೆ ಪ್ರಮಾಣ ಪತ್ರವನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ರಹೀಮ್ ಖಾನ್ ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಕರ್ನಾಟಕ ಸರ್ಕಾರ, ಶ್ರೀ ಸಾಗರ ಈಶ್ವರ ಖಂಡ್ರೆ ಮಾನ್ಯ ಲೋಕಸಭಾ ಸದಸ್ಯರು, ಬೀದರ, ಶ್ರೀಮತಿ ಶಿಲ್ಪಾ ಶರ್ಮಾ ಜಿಲ್ಲಾಧಿಕಾರಿಗಳು, ಡಾ: ಗೀರಿಶ್ ದಿಲೀಪ್ .ಬಿ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರ, ಶ್ರೀ ಪ್ರದೀಪ್ ಗುಂಟಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಶ್ರೀ ಸಲೀಮ್ ಪಾಷ, ಉಪನಿರ್ದೇಶಕರು (ಆ) ಶಾಲಾ ಶಿಕ್ಷಣ ಇಲಾಖೆ, ಶ್ರೀ ಚಂದ್ರಕಾಂತ ಶಾಹಬಾದ್ ಕರ್, ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಡಾ॥ ಭರಶೆಟ್ಟಿ ಎಚ್., ಜಿಲ್ಲಾ ಆಯುಕ್ತರು(ಸ್ಕೌ), ಸ್ಕೌಟ್ ಮಾಸ್ಟರ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.



* ನವೆಂಬರ್ 07 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಯೂನಿಕ್ ಪಬ್ಲಿಕ್ ಶಾಲೆ, ಬೀದರ ಇಲ್ಲಿ ಸರ್ವ ಧರ್ಮ ಪ್ರಾರ್ಥನೆಯನ್ನು ಆಯೋಜನೆ ಮಾಡಲಾಯಿತು. ತದನಂತರ ಕಾಲ್ನಡಿಗೆ ಜಾಥಾ ಮಾಡಿ, ಮಹಾದೇವ ದೇವಾಲಯದಲ್ಲಿ ಸ್ವಚ್ಛತೆಯನ್ನು ಮಾಡಲಾಯಿತು. ಇದೇ ಸಂದರ್ಭದಲ್ಲಿ ಡಾ॥ ಭರಶೆಟ್ಟಿ ಎಚ್., ಜಿಲ್ಲಾ ಆಯುಕ್ತರು(ಸ್ಕೌ), ಶ್ರೀ ರಮೇಶ ತಿಬಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ಸ್ಕೌಟ್ಸ್, ಗೈಡ್ಸ್‌ಗಳು ಉಪಸ್ಥಿತರಿದ್ದರು.

* ನವೆಂಬರ್ 07 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ರವರ ಮಾರ್ಗದರ್ಶನದಲ್ಲಿ ಸಂಸ್ಥಾಪನಾ ದಿನಾಚರಣೆ ಅಮೃತ ಮಹೋತ್ಸವ ಅಂಗವಾಗಿ ಧ್ವಜ ಚೀಟಿಗಳನ್ನು ಶ್ರೀ ಶಿವಕುಮಾರ ಶೀಲವಂತ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೀದರ, ಶ್ರೀ ಪ್ರದೀಪ್ ಗುಂಟಿ ಜಿಲ್ಲಾ ಅಧೀಕ್ಷಕರು, ಬೀದರ, ಶ್ರೀ ಶಕೀಲ್ ಸಹಾಯಕ ಆಯುಕ್ತರು, ಜಿಲ್ಲಾಡಳಿತ ಬೀದರ, ಶ್ರೀ ಚಂದ್ರಕಾಂತ ಬಿ. ಶಾಹಾಬಾದಕರ್ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೀದರ, ಶ್ರೀ ಸಲೀಮ್ ಪಾಷ, ಉಪನಿರ್ದೇಶಕರು (ಆ) ಶಾಲಾ ಶಿಕ್ಷಣ ಇಲಾಖೆ ಬೀದರ, ಡಾ॥ ಟಿ.ಆರ್. ದೊಡ್ಡೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೀದರ, ಶ್ರೀ ರಾಜೇಂದ್ರ, ಜಿಲ್ಲಾ ಅಂಚೆ ಅಧಿಕಾರಿಗಳುರವರು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಮಂಗಳಾ, ಉಪಾಧ್ಯಕ್ಷರು, ಡಾ॥ ಭರಶೆಟ್ಟಿ ಎಚ್., ಜಿಲ್ಲಾ ಆಯುಕ್ತರು (ಸ್ಕೌ), ಸ್ಕೌಟ್ಸ್ ಮತ್ತು ಗೈಡ್ಸ್, ರೇಂಜರ್‌ಗಳು ಉಪಸ್ಥಿತರಿದ್ದರು.



* ನವೆಂಬರ್ 09 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ 75ನೇ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನಾಚರಣೆ ಅಮೃತ ಮಹೋತ್ಸವ ಅಂಗವಾಗಿ ಅಕ್ಕಮಹಾದೇವಿ ವೃದ್ಧಾಶ್ರಮ, ಮಹೇಶ ನಗರ ಬೀದರ ಈ ಆಶ್ರಮಕ್ಕೆ ಭೇಟಿ ನೀಡಿ ಸ್ವಚ್ಛತಾ ಕಾರ್ಯಕ್ರಮವನ್ನು ಮಾಡಿ ಹಿರಿಯನಾಗರಿಕರಿಗೆ ಹಣ್ಣು ಹಂಪಲು ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಸುಜಾತ ಪೂಜಾರಿ, ಡಿ.ಓ.ಟಿ, ಶ್ರೀ ಚಂದ್ರಕಾಂತ ಬೆಳಕುಣೆ, ಸ್ಕೌಟ್ ಮಾಸ್ಟರ್, ಶ್ರೀ ಅಂಬಣ್ಣ, ನಾಯಕ ಎಸ್.ಜಿ.ವಿ. ಹಾಗೂ ಶ್ರೀ ಸಿದ್ಧಾರೂಢ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.

* ನವೆಂಬರ್ 12 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ನೂತನವಾಗಿ ಬೀದರ ಜಿಲ್ಲೆಗೆ ಆಗಮಿಸಿದ ಶ್ರೀ ಪ್ರಸನ್ನಕುಮಾರ, ಎಸ್.ಎಲ್ ಉಪನಿರ್ದೇಶಕರು (ಅ), ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ, ಡಯಟ್ ಬೀದರ ರವರಿಗೆ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ  ಶ್ರೀ ಡಾ: ಭರಶೆಟ್ಟಿ ಬಿ.ಎಚ್ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ ರವರು ಕಂಠವಸ್ತ್ರದೊಂದಿಗೆ  ಸನ್ಮಾನಿಸಿ ಗೌರವಿಸಲಾಯಿತು.



* ನವೆಂಬರ್ 14 ರಂದು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ 75ನೇ ಸಂಸ್ಥಾಪನಾ ದಿನಾಚರಣೆ ಅಮೃತ ಮಹೋತ್ಸವ ಹಾಗೂ ಮಕ್ಕಳ ದಿನಾಚರಣೆ ಮತ್ತು ದಿ. ಶ್ರೀ ಕೊಂಡಜ್ಜಿ ಬಸಪ್ಪ ಅವರ ಪುಣ್ಯ ಸ್ಮರಣೆಯ ಅಂಗವಾಗಿ ಸ್ವಚ್ಛತಾ ಹಾಗೂ ದೀಪೋತ್ಸವ ಕಾರ್ಯಕ್ರಮವನ್ನು ಬೀದರ ಕೋಟೆ ಇಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ನಾಗೇಶ, ಅಧ್ಯಕ್ಷರು ಫ್ಯಾಮಿಲಿ ಪ್ಲಾನಿಂಗ್ ಬೀದರ ಇವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ಮಂಗಲ ಭಗವತ್, ಉಪಾಧ್ಯಕ್ಷರು, ಶ್ರೀ ರಮೇಶ ತಿಬಶೆಟ್ಟಿ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಸ್ಕೌಟ್ಸ್, ಗೈಡ್ಸ್ ಮತ್ತು ಪೋಷಕರು ಭಾಗವಹಿಸಿದ್ದರು.



* ನವೆಂಬರ್ 20 ರಂದು ಶ್ರೀ ಈಶ್ವರ ಬಿ. ಖಂಡ್ರೆ, ಸನ್ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ 2024–25ನೇ ಸಾಲಿನ, ತ್ರೈಮಾಸಿಕ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಪರಿಶೀಲನಾ (ಕೆ.ಡಿ.ಪಿ) ಸಭೆಯನ್ನು ಜಿಲ್ಲಾ ಪಂಚಾಯತ್



ಸಭಾಂಗಣ, ಬೀದರ ಇಲ್ಲಿ ಆಯೋಜನೆ ಮಾಡಲಾಯಿತು. ಸದರಿಸಭೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆಬೀದರ 2024-25ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್ ವಂತಿಕೆ ರೂ. 50,000/- ಅನುದಾನವನ್ನು ನೀಡಲಾಯಿತು. ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ಇವರ ಮಾರ್ಗದರ್ಶನದಂತೆ ಶ್ರೀ ರಾಚಯ್ಯನಾ ಸಿ., ಜಿಲ್ಲಾ ಸಹಾಯಕ ಕಾರ್ಯದರ್ಶಿಗಳು, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ. ಇವರು ಈ ಸಭೆಯಲ್ಲಿ ಭಾಗವಹಿ ಅನುದಾನದ ರೂ. 50,000/- ಸ್ವೀಕರಿಸಿದರು.

## ಚಿತ್ರದುರ್ಗ

* ಜಿಲ್ಲಾ ಸಂಸ್ಥೆ ಚಿತ್ರದುರ್ಗ ವತಿಯಿಂದ ನವೆಂಬರ್ 07 ರಂದು ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಸೈಕಲ್ ಜಾಥಾ ಹಾಗೂ ಧ್ವಜಚೀಟಿ ಬಿಡುಗಡೆ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಮಾನ್ಯ ಶ್ರೀ ಕುಮಾರಸ್ವಾಮಿಯವರು ನೆರವೇರಿಸಿದರು. ತದ ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಮಾನ್ಯ ಶ್ರೀ ರಂಜಿತ್ ಕುಮಾರ್ ಭಂಡಾರ್‌ರವರು ಧ್ವಜ ಚೀಟಿಯನ್ನು ಬಿಡುಗಡೆಗೊಳಿಸಿದರು. ನಂತರ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಪರವಾಗಿ ಶ್ರೀಮತಿ ಗಾಯಿತ್ರಿರವರು ಧ್ವಜ ಚೀಟಿಗಳನ್ನು ಬಿಡುಗಡೆ ಗೊಳಿಸಿದರು. ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ ಇಲ್ಲಿನ ಪ್ರಾಂಶುಪಾಲರಾದ ಶ್ರೀ ಬಿ.ಟಿ. ತಿಪ್ಪೇರುದ್ರಸ್ವಾಮಿ, ರೋವರ್ ಲೀಡರ್ ಡಾ॥ ಗಂಗಾಧರ್ ಆರ್., ರೇಂಜರ್ ಲೀಡರ್ ಡಾ॥ ಲೀಲಾವತಿ ಕೆ. ರವರು ಭಾಗವಹಿಸಿ ಧ್ವಜ ಚೀಟಿ ಬಿಡುಗಡೆ ಕಾರ್ಯಕ್ರಮ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳ ಹೊಸ ಘಟಕವನ್ನು ಉದ್ಘಾಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಉಜ್ಜಿನಪ್ಪ, ಉಪಾಧ್ಯಕ್ಷರು ಶ್ರೀ ಎಸ್. ಪರಮೇಶ್ವರ್, ಉಪಾಧ್ಯಕ್ಷರು ಶ್ರೀಮತಿ ಶೀಲಾ ಮಂಜುನಾಥ್ ಉಪಾಧ್ಯಕ್ಷರು ಶ್ರೀಮತಿ ಸವಿತಾ ಶಿವಕುಮಾರ್, ಗೈಡ್ ಆಯುಕ್ತರು ಡಾ॥ ರಹಮತ್ ಉಲ್ಲಾ ಸಹ ಭಾಗವಹಿಸಿದ್ದರು.





## ದಕ್ಷಿಣ ಕನ್ನಡ

* ನವೆಂಬರ್ 07 ರಂದು ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ವಜ್ರಮಹೋತ್ಸವ ಪ್ರಾರಂಭದ ಅಂಗವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನಾಚರಣೆಯನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಯು ಸಹಕಾರದೊಂದಿಗೆ ಆಚರಿಸಲಾಯಿತು. ಡಾ. ಎಂ. ಮೋಹನ್ ಆಳ್ವ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್ ಧ್ವಜ ಚೀಟಿಯನ್ನು ಬಿಡುಗಡೆಗೊಳಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಕ್ಕಳು ಪರಿಸರ ಸ್ನೇಹಿಗಳಾಗಬೇಕೆಂದು, ಪರಿಸರದೊಟ್ಟಿಗೆ ನಮ್ಮ ಬಾಂಧವ್ಯ ಉತ್ತಮವಾಗಿರಬೇಕೆಂದು ಕಿವಿ ಮಾತನ್ನು ಹೇಳಿದರು. ದಿನದ ಮಹತ್ವದ ಬಗ್ಗೆ ಪ್ರಾಸ್ತಾವಿಕ ಮಾತುಗಳಲ್ಲಿ ಕು. ಕವಿತಾ ಎಂ. ಹೆಚ್.ಡಬ್ಲ್ಯೂ.ಬಿ. (ಸಿ) ತಿಳಿಸಿದರು. ಕಾರ್ಯಕ್ರಮದಲ್ಲಿ ಆಳ್ವಾಸ್ ಶಾಲೆಗಳ ಆಡಳಿತ ಅಧಿಕಾರಿಗಳಾದ ಶ್ರೀ ಪ್ರೀತಮ್ ಕುಂದರ್ ಹಾಗೂ ಸಹ ಆಡಳಿತ ಅಧಿಕಾರಿಗಳಾದ ಶ್ರೀ ನಿತೇಶ್ ಅವರು ಉಪಸ್ಥಿತರಿದ್ದರು. ಸಂಸ್ಥೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಗೀತಾರವರು ಸ್ವಾಗತಿದರು. ವಂದನಾಪಣೆಯನ್ನು ಸ್ಕೌಟ್ಸ್ ಮಾಸ್ಟರ್ ಶ್ರೀಮತಿ ದೀಪರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಸಂಧ್ಯಾ ಹೆಚ್.ಡಬ್ಲ್ಯೂ.ಬಿ. ನೆರವೇರಿಸಿದರು. ಕಾರ್ಯಕ್ರಮದ ಕೊನೆಯ ಸ್ಕೌಟ್ಸ್-ಗೈಡ್ಸ್‌ಗಳಿಂದ ಸಂಸ್ಥಾಪನಾ ದಿನದ ಅರಿವಿನ ಜಾಥಾವನ್ನು ಮಾಡಿ ಸಾರ್ವಜನಿಕರಿಗೆ ಅರಿವು ಮೂಡಿಸಲು ಸ್ಕೌಟ್ಸ್-ಗೈಡ್ಸ್‌ಗಳಿಗೆ ಧ್ವಜ ಚೀಟಿಯನ್ನು ನೀಡಲಾಯಿತು.




* ಎಸ್.ಡಿ.ಎಂ. ಬೆಳ್ತಂಗಡಿಯಲ್ಲಿ ಧ್ವಜದಚೀಟಿಯ ಬಿಡುಗಡೆಯನ್ನು ಧರ್ಮಸ್ಥಳ ಶ್ರೀಮತಿ ಸುಪ್ರಿಯಾ ಹರ್ಷೇಂದ್ರಕುಮಾರ್ ಬಿಡುಗಡೆಗೊಳಿಸಿದರು.



* ಸ್ಥಳೀಯ ಸಂಸ್ಥೆ ಪಂಜ ಇದರ ವತಿಯಿಂದ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ ಸುಬ್ರಹ್ಮಣ್ಯ ಇವರ ಸಹಯೋಗದಲ್ಲಿ ಸ್ಕೌಟ್-ಗೈಡ್ ವಾರ್ಷಿಕ ಮೇಳ 8 ಮತ್ತು 9 ನವೆಂಬರ್ 2024ರಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾ ವಿದ್ಯಾಲಯದಲ್ಲಿ ಜರುಗಿತು. ವಾರ್ಷಿಕ ಮೇಳ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಆಶಾ ನಾಯಕ್ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಸುಳ್ಯ, ಶ್ರೀ ದೇವಳದ ಕಾರ್ಯನಿರ್ವಹಣಾಧಿಕಾರಿಯಗಳಾದ ಶ್ರೀ ಅರವಿಂದ ಅಯ್ಯಪ್ಪ ಸುತಗುಂಡಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಮಹಮ್ಮದ್ ತುಂಬೆ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲ ರಂಗಯ್ಯ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್, ನಿಕಟಪೂರ್ವ ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ಸ್ಥಳೀಯ ಸಂಸ್ಥೆಯ ಎ.ಡಿ.ಸಿ ಶ್ರೀ ದೇವಿಪ್ರಸಾದ್ ಜಾಕೆ, ಸಂಸ್ಥೆಯ ಪ್ರಾಚಾರ್ಯರಾದ ಡಾ. ದಿನೇಶ್ ಪಿ.ಟಿ, ಶಿಕ್ಷಣ ಸಂಯೋಜಕಿ ಶ್ರೀಮತಿ ಸಂಧ್ಯಾಕುಮಾರಿ, ರ‍್ಯಾಲಿಯ ನಿರ್ದೇಶಕರದ ಶ್ರೀ ದಾಮೋದರ ನೇರಳ



ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. 12 ಕಬ್, 12 ಬುಲ್‌ಬುಲ್, 220 ಸ್ಕೌಟ್, 243 ಗೈಡ್, 48 ರೋವರ್ಸ್, 52 ರೇಂಜರ್ಸ್ ಹಾಗೂ 51 ಮಂದಿ ಶಿಕ್ಷಕರು ಒಟ್ಟು ಸೇರಿ 638 ಮಂದಿ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಮಾಧವ ಬಿ.ಕೆ ಸ್ವಾಗತಿಸಿ, ಉಪಾಧ್ಯಕ್ಷ ಶ್ರೀ ಸೋಮಶೇಖರ್ ನೇರಳೆ ವಂದಿಸಿದ ಈ ಕಾರ್ಯಕ್ರಮವನ್ನು ಕಾರ್ಯದರ್ಶಿ ಶ್ರೀ ಉದಯಕುಮಾರ್ ರೈ ಬಾಳಿಲ ನಿರೂಪಿಸಿದರು. ತದ ನಂತರ ಸ್ಕೌಟರ್–ಗೈಡರ್ಸ್‌ಗಳ ಸಮಾಲೋಚನ ಸಭೆ ನಡೆಯಿತು. ದಿನಚರಿಯಂತೆ ಸ್ಕೌಟ್ ಮತ್ತು ಗೈಡ್ ಚಟುವಟಿಕೆಗಳು ಜರುಗಿದವು. ಸಂಜೆ ನಗರ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸುಬ್ರಹ್ಮಣ್ಯ ಠಾಣಾಧಿಕಾರಿ ಶ್ರೀ ಕಾರ್ತಿಕ್ ಇವರು ನೆರವೇರಿಸಿದರು. ರಾತ್ರಿ 6 ರಿಂದ ಕಾಲೇಜಿನ ಸಾಂಸ್ಕೃತಿಕ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಅನಂತರ ಶಿಬಿರಾಗ್ನಿ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮವನ್ನು ಶ್ರೀ ರಾಜೇಶ್ ಎನ್.ಎಸ್. ಅಧ್ಯಕ್ಷರು ಕಾಲೇಜಿನ ಲಯನ್ಸ್ ಕ್ಲಬ್ ಕುಕ್ಕೆ ಸುಬ್ರಹ್ಮಣ್ಯ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ಗಣೇಶ್ ನಾಯರ್ ಅಧ್ಯಕ್ಷರು, ಹಿರಿಯ ವಿದ್ಯಾರ್ಥಿ ಸಂಘ ಕೆಎಸ್‌ಎಸ್ ಕಾಲೇಜ್ ಸುಬ್ರಹ್ಮಣ್ಯ ಇವರು ಆಗಮಿಸಿದ್ದರು. ದಿನಾಂಕ 09 ರಂದು ಸರ್ವಧರ್ಮ ಪ್ರಾರ್ಥನೆ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ಯಶವಂತ ರೈ, ನಿವೃತ್ತ ಮುಖ್ಯ ಶಿಕ್ಷಕರು, ಶ್ರೀ ಸುಬ್ರಹ್ಮಣ್ಯೇಶ್ವರ ಪ್ರೌಢಶಾಲೆ ಸುಬ್ರಹ್ಮಣ್ಯ, ಧರ್ಮ ಗುರುಗಳಾದ ಫಾದರ್ ಹೆನ್ರೀಜೋಸೆಫ್ ನೆಟ್ಟಣ ಹಾಗೂ ಶ್ರೀ ಮಹಮ್ಮದ್ ಜಾಕೀರ್ ಸಾಹೇಬ್ ಆಗಮಿಸಿ ತಮ್ಮ ಧರ್ಮಗಳ ಬಗ್ಗೆ ವಿವರಣೆಯನ್ನು ನೀಡಿದರು. ನಂತರ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಮಧ್ಯಾಹ್ನ ಊಟದ ನಂತರ ಸಮಾರೋಪ ಸಮಾರಂಭವು ನಡೆಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಾಧವ ಬಿ.ಕೆ., ಅಧ್ಯಕ್ಷರು, ಸ್ಕೌಟ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಪಂಜ ವಹಿಸಿದರು. ಪ್ರೊಫೆಸರ್ ಶ್ರೀ ರಂಗಯ್ಯ ಶೆಟ್ಟಿಗಾರ್, ವಿಶ್ರಾಂತ ಪ್ರಾಂಶುಪಾಲರು, ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ ಶ್ರೀ ಸುಬ್ರಹ್ಮಣ್ಯ ಇವರು ಸಮಾರೋಪ ಭಾಷಣ ಮಾಡಿದರು. ಶ್ರೀಮತಿ ವಿಮಲಾ ರಂಗಯ್ಯ ಸ್ವಾಗತಿಸಿದರು. ಶ್ರೀ ಉದಯಕುಮಾರ್ ಬಾಳಿಲ, ಪ್ರಧಾನ ಕಾರ್ಯದರ್ಶಿ, ಸ್ಥಳೀಯ ಸಂಸ್ಥೆ ಪಂಜ ಇವರು ಧನ್ಯವಾದಗಳು ಸಮರ್ಪಿಸಿದರು. ಸ್ಕೌಟ್ ಶಿಕ್ಷಕಿ ಸುಜಯಶ್ರೀ, ಗೈಡ್ ಶಿಕ್ಷಕಿ ಶ್ರೀಮತಿ ಶುಭ ಕಾರ್ಯಕ್ರಮ ನಿರೂಪಿಸಿದರು. ಧ್ವಜ ಅವರೋಹಣದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

* ದಕ್ಷಿಣ ಕನ್ನಡ ಜಿಲ್ಲಾ 100ನೇ ವರ್ಷಾಚರಣೆ ಸಂದರ್ಭದಲ್ಲಿ ಸ್ಕೌಟರ್–ಗೈಡರ್ ಸಮಾವೇಶವನ್ನು ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರ, ಶಿವನಗರ, ಅರ್ಬಿ ರಸ್ತೆ, ಪಿಲಿಕುಳದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರು ನವೆಂಬರ್ 19 ರಂದು ಪೂರ್ವಾಹ್ನ ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ರಾಜ್ಯ ಕಾರ್ಯದರ್ಶಿಶ್ರೀ ಗಂಗಪ್ಪ ಗೌಡ, ರಾಜ್ಯ ಸಂಘಟನಾ ಆಯುಕ್ತರು ಶ್ರೀ ಎಂ. ಪ್ರಭಾಕರ್ ಭಟ್, ರಾಷ್ಟ್ರೀಯ ಆಯುಕ್ತರು (ವಯಸ್ಕ ಸಂಪನ್ಮೂಲ) ಶ್ರೀ ಸುಕುಮಾರ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ವಿಭಾಗೀಯ ಮಟ್ಟದ ಗೀತ ಗಾಯನ ಸ್ಪರ್ಧೆಯಲ್ಲಿ ಸಮಗ್ರ ಪ್ರಶಸ್ತಿ ಪಡೆದ ಕಬ್, ಬುಲ್‌ಬುಲ್, ಸ್ಕೌಟ್, ಗೈಡ್, ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಜಿಲ್ಲೆಯ ಹಿರಿಯ ಸ್ಕೌಟರ್–ಗೈಡರ್‌ಗಳ ಸೇವೆಯನ್ನು ಗುರುತಿಸಿ ಗೌರವಿಸಲಾಯಿತು. ರಾಜ್ಯ ಸಂಸ್ಥೆಯಿಂದ ನೀಡಿದ ಸೇವಾ ಪದಕವನ್ನು ಸ್ಕೌಟರ್–ಗೈಡರ್‌ಗಳಿಗೆ ನೀಡಲಾಯಿತು. ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಶಾಂತರಾಮ್ ಪ್ರಭು ಸ್ವಾಗತಿಸಿದರು. ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಜಯಶ್ರೀ ಧನ್ಯವಾದ ನೀಡಿದರು. ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಬಿ.ಎಂ. ತುಂಬೆ ಕಾರ್ಯಕ್ರಮ ನಿರೂಪಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಜಿಲ್ಲಾ ತರಬೇತಿ ಕೇಂದ್ರದ ನೂತನ ಸಭಾಭವನದ ಸಾಂಕೇತಿಕ ಉದ್ಘಾಟನೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಶತಮಾನೋತ್ಸವ ಕಾರ್ಯಕ್ರಮಗಳ ಚಾಲನೆ ನವೆಂಬರ್ 19 ರಂದು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತ ಡಾ. ಎಂ. ಮೋಹನ್ ಆಳ್ವ 'ಸ್ಕೌಟ್ಸ್ ಮತ್ತು ಗೈಡ್ಸ್ ಜಗತ್ತಿನದ್ಯಾಂತ ಇರುವ ದೊಡ್ಡ ಆಂದೋಲನ. ಇದು ಭಾರತಕ್ಕೆ ಆಗಮಿಸಿ 115 ವರ್ಷ ಸಂದಿವೆ ದಕ್ಷಿಣ ಕನ್ನಡ ಜಿಲ್ಲೆಗೆ ಸ್ಕೌಟ್ಸ್ ಮತ್ತು ಗೈಡ್ ಆಗಮಿಸಿ 100 ವರ್ಷ ಸಂದಿವೆ. ಮಾನವ ಸಂಪತ್ತಿನಲ್ಲೇ ಮುಖ್ಯವಾದದ್ದು ಯುವ ಸಂಪತ್ತು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲೂ ಸಹಕಾರ ನೀಡಬೇಕು. ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಕಾದ ಮೂಲ ಸೌಲಭ್ಯಗಳನ್ನು ನೀಡಲು ಪಿಲಿಕುಳದಲ್ಲಿ 12 ಕೋಟಿ ವೆಚ್ಚದಲ್ಲಿ ಜಿಲ್ಲಾ ತರಬೇತಿ ಕೇಂದ್ರದ ನೂತನ ಸಭಾಭವನ ನಿರ್ಮಾಣವಾಗಿದೆ' ಎಂದರು. ಶ್ರೀ ಕಾರ್ಣಿಕ್ ಮಾತನಾಡಿ "ಕರ್ನಾಟಕದ ಯಾವುದೇ ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲೂ ಆಗದಷ್ಟು ಕೆಲಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿದೆ. ದೇಶಕ್ಕೆ ಬೆಳಕು ನೀಡಬಹುದಾದ ಶಕ್ತಿ ನಮ್ಮಲ್ಲಿದ್ದರು ದೀಪದ ಕೆಳಗೆ ಉಳಿಯುವ ಕತ್ತಲೆಯಂತೆ ಉಳಿದು ಹೋಗಬಾರದು ಎಂದರು. ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್ ಸಿಂಧ್ಯ ಮಾತನಾಡಿ 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ 100 ವರ್ಷ ತುಂಬಿದ್ದು ಹೆಮ್ಮೆಯ ವಿಚಾರ. ಈಗಿನ ಕಾಲದಲ್ಲಿ ವಿಶ್ವ ಶಾಂತಿಗೆ, ಪ್ರಪಂಚದ ಸಸ್ಯ, ಪ್ರಾಣಿ, ಭೂಮಿ, ನೀರಿನ ರಕ್ಷಣೆಯ ಜೊತೆಗೆ ಎಲ್ಲರನ್ನೂ ಒಗ್ಗೂಡಿಸುವ ಕೆಲಸವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಯಶಸ್ವಿಯಾಗಿ ನಡೆಸಿದೆ' ಎಂದರು. ಜಿಲ್ಲಾ ಸ್ಕೌಟ್ಸ್ ಕೇಂದ್ರದ ಶತಮಾನೋತ್ಸವದ ಕಾರ್ಯಕ್ರಮಗಳಿಗೆ ಚಾಲನೆಯನ್ನು ಲೋಗೋ ಬಿಡುಗಡೆ ಮಾಡುವ ಮೂಲಕ ಮಾಡಲಾಯಿತು. 2024–25ರಲ್ಲಿ 100 ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆ ಮಾಡಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರನ್ನು ಗೌರವಿಸಲಾಯಿತು. ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲೆಯ 19 ಸ್ಥಳೀಯ ಸಂಸ್ಥೆಗಳಲ್ಲಿ ಗಣನೀಯ ಸೇವೆ ನೀಡಿದ ಸಾಧಕರನ್ನು ಗೌರವಿಸಲಾಯಿತು. ಶ್ರೀಮತಿ ಅನ್ನಾ ವಿಜಯ ಕೈರನ್ನ ಅವರನ್ನು ಸನ್ಮಾನಸಿಲಾಯಿತು. ಶ್ರೀ ಎಂ.ಎನ್ ಮಹೇಶ್, ಅಧ್ಯಕ್ಷರು, ರಾಜ್ಯ ಪರಿಸರ ತಜ್ಞರು ಮೌಲ್ಯಮಾಪನ ಸಮಿತಿ, ಭಾರತ ಸರಕಾರ ಮತ್ತು ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ, ಎಂಆರ್‌ಪಿಎಲ್‌ನ ಗ್ರೂಪ್ ಮ್ಯಾನೇಜರ್ ಶ್ರೀ ಕೃಷ್ಣ ಹೆಗ್ಡೆ, ಎನ್‌ಸಿಸಿ ಗ್ರೂಪ್ ಕಮಾಂಡರ್ ಕರ್ನಲ್ ಶ್ರೀ ವಿರಾಜ್ ಕಾಮತ್, ಕರ್ನಲ್ ಶ್ರೀ ರೋಹಿತ್ ರೈ, ಉಡುಪಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತರು ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಮಡಿಕೇರಿಯ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಆಯುಕ್ತರು ಶ್ರೀಮತಿ ಬೇಬಿ ಮ್ಯಾಥ್ಯು, ಡಾ. ಕೆ. ಸುಕುಮಾರ ರಾಷ್ಟ್ರೀಯ ವಯಸ್ಕ ಸಂಪನ್ಮೂಲ ಆಯುಕ್ತರು, ನ್ಯೂಡೆಲ್ಲಿ, ರಾಜ್ಯ ಸಂಘಟನಾ ಆಯುಕ್ತರು, ಎಂ. ಪ್ರಭಾಕರ್ ಭಟ್, ಪದ್ಮಶ್ರೀ ಪುರಸ್ಕೃತೆ ಶ್ರೀಮತಿ ರಾಣಿ ಮಾಚಯ್ಯ, ಉಡುಪಿ ಜಿಲ್ಲಾ ಸಂಸ್ಥೆಯ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಜೆ.ಪೈ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ. ಕೆ.ವಿ. ರಾವ್, ಶ್ರೀಮತಿ ಅನ್ನಾ ವಿಜಯ ಕೈರನ್ನ, ಉಪಾಧ್ಯಕ್ಷ ಶ್ರೀ ವಸಂತರಾವ್, ಜಿಲ್ಲಾ ಆಯುಕ್ತರು ಶ್ರೀ ಬಿ.ಎಂ ತುಂಬೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಇದ್ದರು. ಶ್ರೀ ನವೀನ್ ಅಂಬೂರಿ ಕಾರ್ಯಕ್ರಮ ನಿರೂಪಿಸಿದರು.





## ದಾವಣಗೆರೆ

* ಅಕ್ಟೋಬರ್ 14 ರಿಂದ 16ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಮೂರು ದಿನಗಳ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಆಯೋಜಿಸಲಾಗಿತ್ತು. ಶಿಬಿರದ ನಾಯಕರಾಗಿ ಶ್ರೀ ರವೀಂದ್ರಸ್ವಾಮಿ .ಟಿ.ಎಂ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯನಿರ್ವಹಿಸಿದರು. ಶ್ರೀಮತಿ ಅಶ್ವಿನಿ .ಜೆ, ಎಸ್.ಜಿ.ವಿ ಇವರು ಜಿಲ್ಲಾ ಸಂಸ್ಥೆಯಿಂದ ನಿಯೋಜಿಸಲ್ಪಟ್ಟಿದ್ದರು. ಶಿಬಿರದಲ್ಲಿ ತರಳಬಾಳು ಜಗದ್ಗುರು ವಸತಿಯುತ ಶಾಲೆ, ಮಾಗನೂರು ಬಸಪ್ಪ ಶಾಲೆ, ಬಾಪೂಜಿ ಶಾಲೆ, ಅನ್‌ಮೋಲ್ ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ವಿಜಯ್ ಕುಮಾರ್, ಶ್ರೀ ಮಹೇಶ್, ಶ್ರೀ ಹನುಮಂತಪ್ಪ, ಗೈಡ್ ಕ್ಯಾಪ್ಟನ್ಸ್ ಶ್ರೀಮತಿ ರಜಿನಿ ಹೆಚ್.ಎಂ, ಶ್ರೀಮತಿ ಅನಿತಾ, ಶ್ರೀಮತಿ ಸುಜಾತ ಭಾಗವಹಿಸಿದ್ದರು.



* ಅಕ್ಟೋಬರ್ 27 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರು ಹಾಗೂ ಆರ್.ವಿ.ಜಿ.ಕೆ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಸಿ. ನಿರಂಜನ್‌ರವರು ನೆರವೇರಿಸಿದರು.

* ಅಕ್ಟೋಬರ್ 30 ರಂದು ಹರಿಹರ ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕಾಳಿದಾಸ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ನಿಜಲಿಂಗಪ್ಪ.ಕೆ ನೆರವೇರಿಸಿದರು.

* ಅಕ್ಟೋಬರ್ 30 ರಂದು ಹಾಸನ ಜಿಲ್ಲೆಯ ಹಾಸನಾಂಬೆ ತಾಯಿಯ ದರ್ಶನ ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸಿದ ದಾವಣಗೆರೆ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್‌ಗಳನ್ನು ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ .ಜೆ, ಎಸ್.ಜಿ.ವಿ ಭೇಟಿ ಮಾಡಿ ಅವರ ಸೇವೆಗೆ ಅಭಿನಂದನೆ ಸಲ್ಲಿಸಿದರು.

* ನವೆಂಬರ್ 07 ರಂದು 75ನೇ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆಯ ಅಮೃತ ಮಹೋತ್ಸವದ ಪ್ರಯುಕ್ತ ದಾವಣಗೆರೆ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಶ್ರೀ ಗಂಗಾಧರಸ್ವಾಮಿ, ಸಹಯಾಕ ಅಧಿಕಾರಿಗಳಾದ ಶ್ರೀ ಎನ್.ಪಿ. ಲೋಕೇಶ್, ಜಿಲ್ಲಾ ಪಂಚಾಯತ್ ಸಿ.ಇ.ಓ ಶ್ರೀ ಸುರೇಶ್ ಹಿಟ್ನಾಳ್, ಶ್ರೀ ಜಿ. ಕೊಟ್ರೇಶ್ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಶ್ರೀ ಎಸ್.ಪಿ. ಮಲ್ಲೇಶ್ ದೊಡ್ಡಮನಿ ಡಿ.ವೈ.ಎಸ್.ಪಿ ಇವರುಗಳನ್ನು ಭೇಟಿ ಮಾಡಿ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಹಾಗು ಇತರ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.











* ನವೆಂಬರ್ 07 ರಂದು 75ನೇ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆಯ ಅಮೃತ ಮಹೋತ್ಸವವನ್ನು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಆಚರಿಸಲಾಯಿತು. ಶ್ರೀ ಮಹೇಶ್ 'ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಸಂಸ್ಥಾಪನಾ ದಿನಾಚರಣೆ ಮಹತ್ವವನ್ನು' ವಿವರಿಸಿದರು. ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸಮವಸ್ತ್ರದಲ್ಲಿ ನಗರದ ಡಾಂಗೆ ಪಾರ್ಕ್‌ನಲ್ಲಿ ಸ್ವಚ್ಛತಾ ಅಭಿಯಾನವನ್ನು ನಡೆಸಿಕೊಟ್ಟರು.

* ನವೆಂಬರ್ 07 ರಂದು 75ನೇ ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಮದರ್ ಮೇರಿ ಮೇಮೋರಿಯಲ್ ಶಾಲೆಯಲ್ಲಿ ಧ್ವಜ ದಿನಾಚರಣೆಯನ್ನು ಆಚರಿಸಲಾಯಿತು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿರದೋಣಿಯಲ್ಲಿ ಜಾಥಾ ಮತ್ತು ರಸ ಪ್ರಶ್ನೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಿಮ್ಲಾಪುರದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗ್ರಾಮದ ಪ್ರಮುಖ ದೇವಸ್ಥಾನಗಳಲ್ಲಿ ಸ್ವಚ್ಛತಾ ಆಂದಲೋನ ನಡೆಸಿದರು.

* ನವೆಂಬರ್ 08 ರಂದು ದಾವಣಗೆರೆ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾಗೈಡ್

ಆಯುಕ್ತರು, ಶ್ರೀ ಡಿ. ಹಾಲಪ್ಪ ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್, ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ. ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.

* ನವೆಂಬರ್ 09 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯಲ್ಲಿ ಬುಕ್ ಬೈಂಡರ್ ಪದಕ ತರಬೇತಿ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಶಾಲೆಯ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಪೇಪರ್‌ಗಳಿಂದ ಯಾವ ರೀತಿಯಾಗಿ ಬುಕ್ ಬೈಂಡ್ ಮಾಡುವುದು ಎಂಬುದನ್ನು ತಿಳಿದುಕೊಂಡರು.

* ನವೆಂಬರ್ 10 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ತರಳಬಾಳು ವಸತಿಯುತ ಶಾಲೆಯಲ್ಲಿ ಕ್ರಾಫ್ಟ್ಸ್ ತಯಾರಿಕ ತರಬೇತಿಯನ್ನು ಆಯೋಜಿಸಲಾಗಿತ್ತು.

## ಧಾರವಾಡ

* ನವೆಂಬರ್ 08 ರಂದು ಸಂಸ್ಥಾಪನಾ ದಿನಾಚರಣೆಯನ್ನು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮಕ್ಕೆ ಹೆಚ್ಚುವರಿ ಪೋಲೀಸ ಅಧಿಕ್ಷಕರಾದ ಶ್ರೀ ನಾರಾಯಣ ಬರಮನಿಯವರು ಉದ್ಘಾಟಕರಾಗಿ ಭಾಗವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿ.ವಿ. ಕಟ್ಟಿ, ಜಿಲ್ಲಾ ಉಪಾಧ್ಯಕ್ಷರು ವಹಿಸಿಕೊಂಡಿದ್ದರು. ಸದರಿ ಕಾರ್ಯಕ್ರಮದ ಪ್ರಯುಕ್ತ ಜಾಥಾ ಹಮ್ಮಿಕೊಳ್ಳಲಾಗಿತ್ತು. ಇದರ ಉದ್ಘಾಟನೆಯನ್ನು ಹೆಚ್ಚುವರಿ ಪೋಲಿಸ ಅಧೀಕ್ಷಕರಾದ ಶ್ರೀ ನಾರಾಯಣ ಬರಮನಿಯವರು ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಮತ್ತು 250 ಕ್ಕಿಂತ ಹೆಚ್ಚು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್, ಸ್ಕೌಟರ್ಸ್ ಗೈಡರ್ಸ್‌ಗಳು ಭಾಗವಹಿಸಿದರು.



* ನವೆಂಬರ್ 13 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ನಡೆದ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ 4 ಕಬ್ಸ್ ತಂಡ, 5 ಬುಲ್‌ಬುಲ್ಸ್ ತಂಡ, 6 ಸ್ಕೌಟ್ಸ್ ತಂಡ, 6 ಗೈಡ್ಸ್ ತಂಡ, 2 ರೋವರ್ಸ್ ತಂಡ, 2 ರೇಂಜರ್ಸ್ ತಂಡ ಒಟ್ಟು 175 ಮಕ್ಕಳು 50 ಸ್ಕೌಟರ್ಸ್ ಗೈಡರ್ಸ್‌ಗಳು ಭಾಗವಹಿಸಿದರು. ಸದರ ಕಾರ್ಯಕ್ರಮಕ್ಕೆ ಜಿಲ್ಲಾ ಪದಾಧಿಕಾರಿಗಳು ಸಹ ಭಾಗವಹಿಸಿದರು.



* ನವೆಂಬರ್ 14 ರಿಂದ 16ರ ವರೆಗೆ ಜಿಲ್ಲಾ ಸಂಸ್ಥೆಯ ಆವರಣದಲ್ಲಿ ತೃತೀಯ ಸೋಪಾನ ತರಬೇತಿ ಶಿಬಿರ ಹಮ್ಮಿಕೊಳ್ಳಲಾಯಿತು. ಶಿಬಿರದಲ್ಲಿ ಸ್ಕೌಟ್ಸ್, ಗೈಡ್ಸ್ ಒಟ್ಟು ಭಾಗವಹಿಸಿದ್ದರು.

## ಹಾಸನ

* ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ, ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಪೂರ್ಣಿಮಾ ಬಿ.ಆರ್., ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀಮತಿ ಶಕುಂತಲ, ಮಾನ್ಯ ಉಪವಿಭಾಗಧಿಕಾರಿಗಳಾದ ಶ್ರೀ ಮಾರುತಿ ಹಾಗೂ ಪೋಲಿಸ್ ಅಧಿಕಾರಿ ಮೋಹನ್ ಕೃಷ್ಣ ಯುನಜನ ಕ್ರೀಡಾ ಇಲಾಖೆಯ ಅಧಿಕಾರಿಗಳು, ಶ್ರೀ ಹರೀಶ್‌ರವರು ಸಂಸ್ಥೆಯ 75ನೇ ವರ್ಷದ ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಹಾಸನಾಂಬ ಜಾತ್ರ ಮಹೋತ್ಸವ ಸಮಯದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಸಲ್ಲಿಸಿದ ಸೇವೆಗೆ ಶ್ಲಾಘನೆ ಹೇಳಿದರು ಈ ಸಂಧರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳಾದ ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಆಯುಕ್ತರು(ಸ್ಕೌ) ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಆಯುಕ್ತರು (ಗೈ), ಶ್ರೀಮತಿ ಜಯರಮೇಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್, ಶ್ರೀಮತಿ ಕಾಂಚನ ಮಾಲ, ಹಿರಿಯ ಗೈಡ್ ಶಿಕ್ಷಕಿ, ಶ್ರೀ ವೈ.ಡಿ. ಪದ್ಮ, ಎ.ಎಸ್.ಓ.ಸಿ ಶ್ರೀಮತಿ ಪ್ರಿಯಾಂಕ, ಸ್ಕೌಟ್ ಮಾಸ್ಟರ್ ಶ್ರೀ ಸದಶಿವ ಹಾಗೂ ಬಸವರಾಜೇಂದ್ರ ಶಾಲೆಯ ಸ್ಕೌಟ್ ವಿದ್ಯಾರ್ಥಿಗಳು ಭಾಗವಹಿಸಿದರು.



## ಕಾರವಾರ (ಉ.ಕ.)

* ಅಕ್ಟೋಬರ್ 26 ರಂದು ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಹೊನ್ನಾವರ ತಾಲ್ಲೂಕಿನ ಕರ್ಕಿಯಲ್ಲಿಯ ಶ್ರೀ ಚೆನ್ನಕೇಶವ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದು. ಈ ಸಮಾರಂಭವನ್ನು ಶಾಲೆಯ ಅಧ್ಯಕ್ಷರು ಉದ್ಘಾಟಿಸಿ, ಬಂದಂತಹ ಮಕ್ಕಳಿಗೆ ಶುಭಕೋರಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ|| ಜಿ.ಜಿ. ಸಭಾಹಿತ್‌ರವರು ವಹಿಸಿದ್ದರು. ಈ ಸಮಾರಂಭದಲ್ಲಿ ಹಿರಿಯರಾದ ಶ್ರೀ ಜಿ.ಎಸ್. ಭಟ್, ಉಪಾಧ್ಯಕ್ಷರಾದ ಶ್ರೀಮತಿ ಲಲಿತಾ ಹೆಗಡೆ, ಶಾಲೆಯ ಮುಖ್ಯೋಪಾಧ್ಯಾಯರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ ಮೂರು ಜನ ತಿರ್ಪುಗಾರರು, ಪದಾಧಿಕಾರಿಗಳು ಸ್ಕೌಟರ್ಸ್ ಗೈಡರ್ಸ್ ಗಳು ಉಪಸ್ಥಿತರಿದ್ದರು.



* ನವೆಂಬರ್ 01 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ನಗರ ಶಾಲೆಯ ಸ್ಕೌಟ್ಸ್ ಗೈಡ್ಸ್‌ಗಳು ತಮ್ಮ ತಮ್ಮ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಮುಗಿಸಿ ಪೋಲಿಸ್ ಪೆರೆಡ್ ಗ್ರೌಂಡ್‌ನಲ್ಲಿ ನಡೆದ ಉತ್ಸವದಲ್ಲಿ ಪಾಲ್ಗೊಂಡು ನಗರದಲ್ಲಿ ಹಮ್ಮಿಕೊಂಡಿದ್ದ ಪಥ ಸಂಚಲನದಲ್ಲಿ ಪಾಲ್ಗೊಂಡರು.

* ನವೆಂಬರ್ 04 ರಿಂದ 10 ವರೆಗೆ ಜಿಲ್ಲಾ ಮಟ್ಟದ ಮೂಲ ತರಬೇತಿ ಶಿಬಿರವನ್ನು ಹವ್ಯಕ ಕಲ್ಯಾಣ ಮಂಟಪ, ಕರ್ಕಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದರ ಉದ್ಘಾಟನಾ ಸಮಾರಂಭಕ್ಕೆ ಹೊನ್ನಾವರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿ ಭಟ್ ಆಗಮಿಸಿ ಎಲ್ಲರಿಗೂ ಶುಭಕೋರಿದರು. ಹೊನ್ನಾವರ ತಾಲ್ಲೂಕು ಪರಿವೀಕ್ಷಕರಾದ



ಶ್ರೀ ಅರುಣ ಕುಮಾರ ರವರು ಮಾತನಾಡುತ್ತಾ ತರಬೇತಿಗೆ ಬಂದವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಹೊನ್ನಾವರ ಪ್ರಾಥಮಿಕ ಸಂಘದ ಅಧ್ಯಕ್ಷರಾದ ಎಂ.ಜಿ.ನಾಯ್ಕ ರವರು ಮಾತನಾಡಿ 'ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದು ಕೆಲಸ ನಿರ್ವಹಿಸಿದ್ದಲ್ಲಿ ಸ್ಕೌಟಿಂಗ್ ಇನ್ನು ಎತ್ತರೆತ್ತರಕ್ಕೆ ತಲುಪಿಸಬಹುದು' ಎಂದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡುತ್ತಾ 'ತರಬೇತಿಗೆ ಲೀಡರ್‌ಗಳು ಅನುಭವಸ್ಥರೆ ಇರುವುದರಿಂದ ಅದರ ಪ್ರಯೋಜನ ಪಡೆದುಕೊಳ್ಳಿ' ಎಂದರು. ಗೈಡ್ ವಿಭಾಗದ ನಾಯಕಿಯಾದ ಶ್ರೀಮತಿ ಭಾರತಿ ಡಾಯಸ್ ರವರು ಪ್ರಾಸ್ತಾವಿಕ ನುಡಿ ನುಡಿದು ವರದಿಯನ್ನು ನೀಡಿದರು ಹಾಗೂ ನಿರೂಪಣೆಯನ್ನು ನಿರ್ವಹಿಸಿದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ ರವರು ನಿರ್ವಹಿಸಿದರು. ವಂದನೆಯನ್ನು ಡಿ.ಸಿ(ಜಿ) ಶ್ರೀಮತಿ ಶೋಭಾ ಕುಲಕರ್ಣಿ ರವರು ನಿರ್ವಹಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಲಲಿತಾ ಹೆಗಡೆ, ಶ್ರೀ ಎಸ್.ಎಸ್. ಭಟ್ಟ, ಜಿಲ್ಲಾ ಪ್ರಾಥಮಿಕ ಸಂಘದ ಗೌರವಾಧ್ಯಕ್ಷರಾದ ಶ್ರೀ ಸುದೀಶ ನಾಯ್ಕರವರು, ಖಜಾಂಚಿ ಶ್ರೀ ಜಿ.ಆರ್. ಮಡಿವಾಳ, ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಬಿ.ಡಿ. ಫರ್ನಾಂಡಿಸ್, ಕಬ್ ವಿಭಾಗದ ನಾಯಕರಾಗಿ ಶ್ರೀ ಎಮ್.ಎನ್. ಗೌಡ, ಪ್ಲಾಕ್ ವಿಭಾಗಕ್ಕೆ ಶ್ರೀಮತಿ ಶಾರದಾ ಹೆಗಡೆ ಹಾಜರಿದ್ದರು. ಜಿಲ್ಲಾ ಮಟ್ಟದ ಮೂಲ ತರಬೇತಿಗೆ ಕುಮಟಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಜಿ.ಎಸ್. ಭಟ್ಟರವರು ಭೇಟಿ ನೀಡಿ ಶಿಬಿರಾರ್ಥಿಗಳೊಂದಿಗೆ ಮಾತನಾಡಿ ಧ್ವಜಚೀಟಿಯನ್ನು ಬಿಡುಗಡೆ ಮಾಡಿದರು. ಜಿಲ್ಲಾ ಪ್ರಾಥಮಿಕ ಸಂಘದ ಅಧ್ಯಕ್ಷರಾದ ಶ್ರೀ ಆನಂದ ಗಾಂವ್ಕರ್, ಜಿಲ್ಲಾ ಗೌರವಾಧ್ಯಕ್ಷರು, ಹೊನ್ನಾವರ ಪ್ರಾ.ಸಂ. ಅಧ್ಯಕ್ಷರು, ಕುಮಟಾ ಪ್ರಾ.ಸಂ. ಕಾರ್ಯದರ್ಶಿಗಳು ಬಂದು ತರಬೇತಿಗೆ ಭೇಟಿ ನೀಡಿ ಶಿಬಿರಾರ್ಥಿಗಳೊಂದಿಗೆ ಮಾತನಾಡಿ ಶಿಬಿರಾರ್ಥಿಗಳಿಗೆ ಒಂದು ಹೊತ್ತಿನ ಊಟಕ್ಕಾಗಿ ಚೆಕ್‌ನ್ನು ನೀಡಿ ಶುಭಕೋರಿದರು.



* ನವೆಂಬರ್ 11 ರಂದು ಹೋಲಿ ರೋಸರಿ ಕಾನ್ವೆಂಟ್ ಶಾಲೆ, ಹೊನ್ನಾವರ ಸ್ಕೌಟ್ಸ್–ಗೈಡ್ಸ್‌ಗಳು ತಮ್ಮ ದಳ ನಾಯಕ ನಾಯಕಿಯರೊಂದಿಗೆ ಗೋಲ್ಡನ್ ಜ್ಯುಬಲಿ ಧ್ವಜ ಸಪ್ತಾಹದ ಅಂಗವಾಗಿ ಹೊನ್ನಾವರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳನ್ನು ಭೇಟಿ ಮಾಡಿ ಅವರೊಂದಿಗೆ ಮಾತನಾಡಿ ಹಣ್ಣು ಹಂಪಲಗಳನ್ನು ಕೊಟ್ಟು ಬೇಗ ಗುಣಮುಖರಾಗಿ ಬರುವಂತೆ ಹಾರೈಸಿದರು.



* ನವೆಂಬರ್ 19 ರಂದು ಕಾರವಾರ ಭಾರತೀಯ ನೌಕಾಪಡೆಯವರ ಮಾರ್ಗದರ್ಶನದಂತೆ ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್ ರವರು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಕಾರವಾರದ ರೋವರ್ಸ್–ರೇಂಜರ್ಸ್‌ಗಳೊಂದಿಗೆ ಓಲ್ಡ್ ಸರ್ಕ್ಯೂಟ್ ಹೌಸ್‌ನಲ್ಲಿ "ಸೀ–ವಿಜಿಲ್ 24"ರ ಕಾರ್ಯಾಚರಣೆಯ ಬಗ್ಗೆ ಕಮಾಂಡರ್ ಶ್ರೀ ಶರತ್ ಕುಮಾರ ಹಾಗೂ ಕಮಾಂಡರ್ ಶ್ರೀ ಶಶಾಂಕರವರಿಂದ ಮಾಹಿತಿ ಪಡೆದರು. ವಾಚಿಂಗ್ ಟವರಿನ ಇಂಜಿನಿಯರ್ ರವರು ಮಷಿನ್‌ಗಳನ್ನು ತೋರಿಸಿ ಹಡಗು ಬೋಟುಗಳು ಬರುವ ಬಗ್ಗೆ ತಿಳಿಸಿ ವಿವರಿಸಿದರು. ಎ.ಎಲ್.ಟಿ. ಶ್ರೀ ಮನ್ಸೂರ್ ಮುಲ್ಲಾರವರಿದ್ದರು.

* ನವೆಂಬರ್ 20 ರಂದು ಹೊನ್ನಾವರದ ಕರಾವಳಿ ಕಾವಲು ಪೋಲಿಸ್ ಠಾಣೆಯ ಪಿ.ಎಸ್.ಐ ಶ್ರೀ ವಿಠಲ್ ವಡವಾಣಿ ರವರ ಮಾರ್ಗದರ್ಶನದಂತೆ ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್ ರವರು ಹೊನ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೇಂಜರ್ಸ್, ಕುಮಟಾದ ಹನುಮಂತ ಬೆಣ್ಣೆ ಕಾಲೇಜಿನ ರೋವರ್ಸ್ ಗಳೊಂದಿಗೆ "ಸೀ–ವಿಜಿಲ್ 24"ರ ಕಾರ್ಯಾಚರಣೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಕಾರ್ಯಾಚರಣೆ ಬಗ್ಗೆ ಪಿ.ಎಸ್.ಐ.ರವರು ಮಕ್ಕಳಿಗೆ ವಿವರವಾಗಿ ತಿಳಿಸಿಕೊಟ್ಟರು.

* ನವೆಂಬರ್ 21 ರಂದು "ಸೀ–ವಿಜಿಲ್ 24"ರ ಕಾರ್ಯಾಚರಣೆಯ ಕಾರ್ಯಕ್ರಮದಲ್ಲಿ ಹೊನ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಕೊಡಗು

* ನವೆಂಬರ್ 11 ರಿಂದ 13ರ ವರೆಗೆ ಕೊಡಗು ಜಿಲ್ಲಾ ಸಂಸ್ಥೆ ಇದರ ವತಿಯಿಂದ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ 3 ದಿನದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಜಿಲ್ಲಾ ಸ್ಕೌಟ್ ಆಯುಕ್ತರು ಆಗಿರುವ ಶ್ರೀ ಜಿಮ್ಮಿ ಸಿಕ್ವೇರಾ, ಎಲ್.ಟಿ. (ಎಸ್) ಇವರ ನಾಯಕತ್ವದಲ್ಲಿ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ಸ್ ಗೈಡ್ಸ್ ಭವನದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ ಬೇಬಿ ಮ್ಯಾಥ್ಯೂರವರು ಗಿಡಕ್ಕೆ ನೀರು ಹಾಕುವುದರ ಮೂಲಕ ನೆರವೇರಿಸಿ 'ಸ್ಕೌಟ್ಸ್ ಗೈಡ್ಸ್ ಸಂಸ್ಥೆಯು ಅಂತರಾಷ್ಟ್ರೀಯ ಸಮವಸ್ತ್ರದಾರಿ ಸಂಸ್ಥೆಯಾಗಿದ್ದು. ಇದು ಮಕ್ಕಳಿಗೆ ಜೀವನ ಮೌಲ್ಯದ ಪಾಠವನ್ನು ಕಲಿಸಿಕೊಡುತ್ತದೆ. ಈ ಸಂಸ್ಥೆಯು ಸೇವಾ ಸಂಸ್ಥೆಯಾಗಿದ್ದು, ಮಕ್ಕಳನ್ನು ಉತ್ತಮ ಪ್ರಜೆಯಾಗಿ ರೂಪಿಸುವಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಸಂಸ್ಥೆಯು ಸೇವೆ ಸಲ್ಲಿಸುತ್ತಿದೆ' ಎಂದು ನುಡಿದರು.




ಸರಕಾರಿ ಪ್ರಥಮ ದರ್ಜೇ ಕಾಲೇಜಿನ ಉಪನ್ಯಾಸಕರು ಹಾಗೂ ರೋವರ್ ಲೀಡರ್ ಶ್ರೀ ಎವರೆಸ್ಟ್ ರೋಡ್ರಿಗಸ್‌ರವರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತ "ಹಲವಾರು ಸಂಸ್ಥೆಗಳು ಇರುತ್ತದೆ. ನಾವು ಯಾವುದೇ ಸಂಸ್ಥೆಗೆ ಸೇರಿಗೊಂಡರೆ ಅದಕ್ಕೊಂದು ನಿರ್ದಿಷ್ಟ



ಕಾಲವಾಧಿ ಇರುತ್ತದೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ಜೀವನ ಪರ್ಯಾತರ ಸೇವೆ ಸಲ್ಲಿಸಬಹುದು" ಎಂದು ನುಡಿದರು. ಜಿಲ್ಲಾ ಸ್ಕೌಟ್ ಆಯುಕ್ತರು ಆಗಿರುವ ಶ್ರೀ ಜಿಮ್ಮಿ ಸಿಕ್ವೇರಾ ಎಲ್.ಟಿ.(ಎಸ್) ಮಾತನಾಡುತ್ತ 3 ದಿನಗಳ ಕಾಲ ತಮಗೆ ಸ್ಕೌಟ್ ಗೈಡ್ ಚರಿತ್ರೆ ಬಗ್ಗೆ ಮತ್ತು ಜೀವನ ಕೌಶಲ್ಯಗಳಾದ, ಸ್ವಯಂರಕ್ಷಣೆ, ಪರಸೇವೆ, ಪ್ರಥಮ ಚಿಕಿತ್ಸೆ ಸಹಾಸಮಯ ಕ್ರೀಡೆಗಳ ಬಗ್ಗೆ, ಪೈನಾಂರಿಗ್ ಮತ್ತು ಎಸ್ಟಿಮೇಷನ್, ಕಂಪಾಸ್ ಮತ್ತು ಮ್ಯಾಪಿಂಗ್, ಪ್ರತಿಜ್ಞೆನಿಯಮ, ಎಡಗೈ ಹಸ್ತಲಾಂಘವ, ರಾಷ್ಟ್ರ ಧ್ವಜ, ಸ್ಕೌಟ್ ಗೈಡ್ ಧ್ವಜ ಇವುಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ ಎಂದು ಮಾಹಿತಿಯನ್ನು ನೀಡಿದ್ದರು.

ನವೆಂಬರ್ 13 ರಂದು ತರಬೇತಿಯ ಸಮಾರೋಪ ಸಮಾರಂಭವು ಸಂಜೆ 3.00 ಗಂಟೆಗೆ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ ಬೇಬಿಮ್ಯಾಥ್ಯೂರವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಹಕಾರ್ಯದರ್ಶಿ ಶ್ರೀ ಬೊಳ್ಳಜಿರ ಅಯ್ಯಪ್ಪ, ಗೈಡ್ ವಿಬಾಗದ ಸಹಕಾರ್ಯದರ್ಶಿ ಶ್ರೀಮತಿ ಈರಮಂಡ ಹರಿಣಿ ವಿಜಯ್, ಬುಲ್ ಬುಲ್ ವಿಭಾಗದ ಶ್ರೀಮತಿ ಡೈಸಿ, ಶಿಬಿರದ ನಾಯಕರಾದ ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ತರಬೇತಿ ಆಯುಕ್ತರಾದ ರಂಜಿತ್ ಕೆ.ಯು, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾಗಿರುವ ಶ್ರೀಮತಿ ಸುಲೋಚನರವರು ಇದ್ದರು. ಜಿಲ್ಲಾ ಸಂಘಟಕಿ ಶ್ರೀಮತಿ ಯು.ಸಿ ದಮಯಂತಿ ಸೇರಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಲಾಯಿತ್ತು.

* ನವೆಂಬರ್ 01 ರಂದು ಜಿಲ್ಲಾಡಳಿತ ವತಿಯಿಂದ ಕೋಟೆ ಆವರಣದಲ್ಲಿ ನಡೆದ 69ನೇ ಕನ್ನಡ ರಾಜ್ಯೋತ್ಸವದಲ್ಲಿ ಭಾಗವಹಿಸಲಾಯಿತು. ಇದೇ ಸಂದರ್ಭ ಸ್ಕೌಟ್ಸ್–ಗೈಡ್ಸ್ ವತಿಯಿಂದ ಆಕರ್ಷಕ ಪಥಸಂಚಲನ ನಡೆಯಿತು. ಸ್ಕೌಟ್ಸ್–ಗೈಡ್ಸ್‌ನ 13 ತುಕಡಿಗಳು ಭಾಗವಹಿಸಿದ್ದವು. ಮೆರವಣಿಗೆಯನ್ನು ಆಪರ ಜಿಲ್ಲಾಧಿಕಾರಿಯವರಾದ ಶ್ರೀಮತಿ ಐಶ್ವರ್ಯರವರು ಹಸಿರು ನಿಶಾನೆ ತೋರಿಸುವುದರ ಮೂಲಕ ಉದ್ಘಾಟಿಸಿದರು. ಈ ವೇಳೆ ಮಡಿಕೇರಿ ತಾಲ್ಲೂಕು ತಹಶೀಲ್ದಾರಾದ ಶ್ರೀ ಪ್ರವೀಣ್ ಕುಮಾರ್, ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನ, ಜಿಲ್ಲಾ ಸಂಘಟಕಿ ಶ್ರೀಮತಿ ಯು.ಸಿ. ದಮಯಂತಿ ಅಲ್ಲದೇ ಸ್ಕೌಟ್ಸ್–ಗೈಡ್ಸ್ ಶಿಕ್ಷಕ ಶಿಕ್ಷಕಿಯರು ಭಾಗವಹಿಸಿದ್ದರು. ಇದೇ ದಿನ ಬೆಳಿಗ್ಗೆ 7.30ಕ್ಕೆ ಪೊನ್ನಮ್ಮ ಕುಶಾಲಪ್ಪ ಸ್ಕೌಟ್ಸ್–ಗೈಡ್ಸ್ ಭವನದಲ್ಲಿ ಸ್ಕೌಟ್ ವಿಭಾಗದ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್‌ರವರು ಕನ್ನಡ ಧ್ವಜಾರೋಹಣ ನೆರವೇರಿಸಿದ್ದರು. ಈ ಸಂದರ್ಭ ಜಿಲ್ಲಾ ಸಂಘಟಕಿಯವರಾದ ಶ್ರೀಮತಿ ಯು.ಸಿ. ದಮಯಂತಿ ಇದ್ದರು.



* ನವೆಂಬರ್ 07ರಂದು ಕುಶಾಲನಗರ ಸ್ಥಳೀಯ ಸಂಸ್ಥೆಯಿಂದ ತಹಶೀಲ್ದಾರ ಕಛೇರಿ ಆವರಣದಲ್ಲಿ ನಡೆದ ಸಂಸ್ಥಾಪನ ದಿನಾಚರಣೆ ಪ್ರಯುಕ್ತ ತಹಶೀಲ್ದಾರ ಶ್ರೀ ಕಿರಣ್ ಗೌರಯ್ಯ, ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಿದರು.



## ಕೋಲಾರ

* ಅಕ್ಟೋಬರ್ ರಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಜಿಲ್ಲಾ ಜನ ಜಾಗೃತಿ ವೇದಿಕೆ ಮತ್ತು ಸ್ಕೌಟ್ಸ್ ಗೈಡ್ಸ್ ಸಂಸ್ಥೆ ವತಿಯಿಂದ ಕೋಲಾರ ನಗರದ ರಂಗಮಂದಿರದಲ್ಲಿ ಗಾಂಧೀ ಸ್ಮೃತಿ ಮತ್ತು ಜನಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಹಿರಿಯ ನ್ಯಾಯಾಧೀಶರಾದ ಶ್ರೀ ಸುನಿಲ ಹೊಸಮನಿ, ನಾಗಲಾಪುರ ವೀರ ಸಂಹಾಸನ ಮಠದ ಪೀಠಾಧಿಪತಿ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮಿಜಿ, ಸಮಾಜ ಸೇವಕರಾದ ಸಿ.ಎಂ.ಆರ್. ಶ್ರೀನಾಥ್, ಸಂಘದ ಪಧಾದಿಕಾರಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.



* ಅಕ್ಟೋಬರ್ 21 ರಿಂದ 23 ರವರೆಗೆ ಸ್ಕೌಟ್ ಭವನದಲ್ಲಿ ರಾಜ್ಯ ಪುರಸ್ಕಾರ ಪರೀಕ್ಷಾರ್ಥಿಗಳಿಗೆ ಅಂತಿಮ ಹಂತದ ಪೂರ್ವಸಿದ್ಧತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರವನ್ನು ಜಿಲ್ಲಾ ಅಧ್ಯಕ್ಷರಾದ ಶ್ರೀ ಬಿಸಪ್ಪಗೌಡರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಶ್ರೀಮತಿ ನವೀನಾ ಮುಂತಾದವರು ಉಪಸ್ಥಿತರಿದ್ದರು.



* ಅಕ್ಟೋಬರ್ 24 ರಂದು ಸ್ಕೌಟ್ಸ್ ಗೈಡ್ಸ್ ಕೋಲಾರ ಜಿಲ್ಲಾ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಮುಳಬಾಗಿಲು ತಾಲ್ಲೂಕಿನ ಬೇವಹಳ್ಳಿ ಶಾಲೆ ಮತ್ತು ದಳಸನೂರು ಶಾಲಾ ವಿಧ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

* ಅಕ್ಟೋಬರ್ 26 ರಂದು ಸ್ಕೌಟ್ಸ್–ಗೈಡ್ಸ್ ಕೋಲಾರ ಜಿಲ್ಲಾ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಕೋಲಾರ ತಾಲ್ಲೂಕಿನ ಕೋಡಿ ಕಣ್ಣೂರು ಹಿರಿಯ ಪ್ರಾಥಮಿಕ ಮತ್ತು ಮಾತೃಭೂಮಿ ಪ್ರೌಢ ಶಾಲಾ ವಿಧ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

* ಅಕ್ಟೋಬರ್ 26 ರಂದು ಕೋಲಾರ ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ಗೀತಗಾಯನ ಸ್ವರ್ಧೆಗಳನ್ನು ಆಯೋಜನೆ ಮಾಡಲಾಗಿತ್ತು. ಈ ಕಾರ್ಯಕ್ರಮವನ್ನು ಸ್ಥಾನಿಕ ಆಯುಕ್ತೆ ಶ್ರೀಮತಿ ರತ್ನಮ್ಮ ರವರು ಉದ್ಘಾಟಿಸಿ ಶುಭಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

* ಅಕ್ಟೋಬರ್ 27 ರಂದು ಕೋಲಾರ ಜಿಲ್ಲಾ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ಕೋಲಾರ ತಾಲ್ಲೂಕಿನ ಅರುಣೋಧಯ ಹಿರಿಯ ಪ್ರಾಥಮಿಕ ಮತ್ತು ಶ್ರೀನಿವಾಸಪುರ ತಾಲ್ಲುಕಿನ ಗಾಂಡ್ಲಹಳ್ಳಿ ಶಾಲಾ ವಿಧ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

* ಅಕ್ಟೋಬರ್ 28 ರಂದು ಬಂಗಾರಪೇಟೆ ತಾಲ್ಲೂಕಿನ ಜೈನ್ ಗ್ಲೋಬಾಲ್ ಶಾಲೆಯಲ್ಲಿ ಸ್ಕೌಟ್ಸ್ ಗೈಡ್ಸ್, ಕಬ್ಸ್ ಬುಲ್ ಬುಲ್‌ಗಳಿಗೆ ಪದಕ ತರಬೇತಿ ಕಾರ್ಯಗಾರವನ್ನು ಸ್ಕೌಟ್ಸ್ ಮಾಸ್ಟರ್ ಶ್ರೀ ಆಥೋಣಿ ಜಯಕುಮಾರ್ ರವರ ನಾಯಕತ್ವದಲ್ಲಿ ಆಯೋಜನೆ ಮಾಡಲಾಗಿತ್ತು.

* ಅಕ್ಟೋಬರ್ 30 ರಂದು ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ಮಕ್ಕಳ ವೈದ್ಯರಾದ ಡಾ॥ ಅರವಿಂದ್ ರವರು ಉದ್ಘಾಟಿಸಿ 'ಮಕ್ಕಳು ತಮ್ಮ ಬಾಲ್ಯದ ಜೀವನದಿಂದಲೇ ಉತ್ತಮ ಹವ್ಯಾಸಗಳನ್ನು ಮೈಗೂಡಿಸಿಕೊಂಡು ಸಮಾಜಕ್ಕೆ ಹಾಗೂ ತಮ್ಮ ಪೋಷಕರಿಗೆ ಸಹಾಯವಾಗುವ ಚಟುವಟಿಕೆಗಳಲ್ಲಿ ತೊಡಗಿದಾಗ ನಿಮ್ಮ ಮುಂದಿನ ಭವಿಷ್ಯ ಉತ್ತಮವಾಗಿ ರೂಪಗೊಳ್ಳಲಿದೆ' ಎಂದು ನುಡಿದರು.



* ಅಕ್ಟೋಬರ್ 31 ರಂದು ಜಿಲ್ಲಾ ಪರಿಸರ ಪ್ರೇಮಿಗಳ ಬಳಗ, ಸ್ಕೌಟ್ಸ್ ಗೈಡ್ಸ್ ಸಂಸ್ಥೆ, ರೋಟರಿ ಕೋಲಾರ ನಂದಿನಿ ವತಿಯಿಂದ ದೀಪಾವಳಿ ಹಬ್ಬದ ಪ್ರಯುಕ್ತ ಸಾರ್ವಜನಿಕರಲ್ಲಿ ಹಸಿರು ಬೆಳೆಸುವ ಜಾಗೃತಿಯ ಆರನೇ ವರ್ಷದ ಆಚರಣೆ ಪ್ರಯುಕ್ತ 6000 ಗಿಡಗಳನ್ನು ಸಾರ್ವಜನಿಕರಿಗೆ ವಿತರಿಸಿ, ಜಿಲ್ಲೆಯಲ್ಲಿ ಹಸಿರೀಕರಣಕ್ಕೆ ಎಲ್ಲರೂ ಕೈ ಜೋಡಿಸಿ ಎಂದು ಮನವಿ ಮಾಡಲಾಯಿತು.

* ನವೆಂಬರ್ 01 ರಂದು ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು. ಈ ವರ್ಷ ಭೂಮಿ ನಮ್ಮೆಲ್ಲರ ಮನೆ, ಬನ್ನಿ ಸಂರಕ್ಷಿಸೋಣ ಎಂಬ ಸಂದೇಶ ಸಾರುವ ಸ್ತಬ್ಧ ಚಿತ್ರವನ್ನು ಸಂಸ್ಥೆಯ ವತಿಯಿಂದ ಪ್ರದರ್ಶನ ಮಾಡಲಾಯಿತು. ಸ್ತಬ್ಧಚಿತ್ರದ ವಾಹನಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಚಾಲನೆ ನೀಡಿ ಶುಭಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್ ಮುಂತಾದವರು ಉಪಸ್ಥಿತರಿದ್ದರು.

* ನವೆಂಬರ್ 05 ರಂದು ಕೋಲಾರ ತಾಲ್ಲುಕಿನ ಚೌಡದೇನಹಳ್ಳಿ ಗ್ರಾಮದ ವಿಧ್ಯಾ ಬೋಧಿನಿ ಶಾಲೆಯ ಸ್ಕೌಟ್ಸ್ ಗೈಡ್ಸ್‌ಗಳಿಗೆ ಹೈಕಿಂಗ್ ಶಿಬಿರವನ್ನು ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ಶ್ರೀದೇವಿ ಮತ್ತು ಫ್ಲಾಕ್ ಲೀಡರ್ ಹೇಮಾವತಿ ರವರ ನಾಯಕತ್ವದಲ್ಲಿ ಆಯೋಜನೆ ಮಾಡಲಾಗಿತ್ತು.

* ನವೆಂಬರ್ 6 ರಂದು ಬಂಗಾರಪೇಟೆ ತಾಲ್ಲುಕಿನ ಕಾಮಸಮುದ್ರಂ ಗ್ರಾಮದ ಶ್ರೀ ಆತ್ರೇಯ ಶಾಲೆಯ ಆವರಣದಲ್ಲಿ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಧ್ವಜ ದಿನಾಚರಣೆಯನ್ನು ಆಚರಿಸಿ ಸಂಸ್ಥೆಯ ಧ್ವಜಗಳನ್ನು ಬಿಡುಗಡೆ ಮಾಡಿ ದಿನದ ಮಹತ್ವವನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಆತ್ರೇಯ ಶಾಲೆಯ ಅಧ್ಯಕ್ಷರಾದ ಶ್ರೀ ಸುರೇಶ್, ಕಾರ್ಯದರ್ಶಿ ಶ್ರೀಮತಿ ಕಾವ್ಯ, ಮುಖ್ಯ ಶಿಕ್ಷಕಿ ಶ್ರೀಮತಿ ಚೈತ್ರ, ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಶ್ರೀ ಸುರೇಶ್, ಶ್ರೀಮತಿ ಉಮಾದೇವಿ, ಸ್ಕೌಟ್ ಶ್ರೀ ಬಾಬು, ಶ್ರೀ ತೇಜೋನಂದ, ಗೈಡ್ ಶಿಕ್ಷಕಿ ಶ್ರೀಮತಿ ವರಲಕ್ಷ್ಮೀ ಮುಂತಾದವರು ಉಪಸ್ಥಿತರಿದ್ದರು.

* 'ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಕಾರ್ಯಕರ್ತರು ಸ್ವಯಂ ಪ್ರೇರಿತರಾಗಿ ಸೇವಾ ಮನೋಭಾವದಿಂದ ಸಲ್ಲಿಸುವ ಸೇವೆ ಶ್ಲಾಘನೀಯ' ಎಂದು ಕೋಲಾರ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿಸಪ್ಪಗೌಡ ಅಭಿಪ್ರಾಯಪಟ್ಟರು. ನಗರದ ಮಹಿಳಾ ಸಮಾಜ ಶಾಲಾ ಆವರಣದಲ್ಲಿ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಸಂಸ್ಥಾಪನಾ ದಿನ ಮತ್ತು ಧ್ವಜ ದಿನಾಚರಣೆ ಅಂಗವಾಗಿ ಸ್ಕೌಟ್-ಗೈಡ್ ಧ್ವಜಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ 'ಸ್ಕೌಟ್ಸ್-ಗೈಡ್ಸ್ ಸಂಸ್ಥೆ 1907ರಲ್ಲಿ ಪ್ರಾರಂಭವಾಗಿ ವಿಶ್ವದ 246ಕ್ಕೂ ಹೆಚ್ಚು ದೇಶಗಳು ಒಪ್ಪಿಕೊಂಡಿದ್ದು, ನಮ್ಮ ದೇಶದಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಂಯೋಜನೆಗೊಂಡು ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಬೇಕಾದ ಶಿಕ್ಷಣವನ್ನು ನೀಡುತ್ತಾ ಬಂದಿದೆ. 1950 ನವೆಂಬರ್ 7 ರಂದು ದೇಶದ ಎಲ್ಲಾ ಸ್ಕೌಟ್ಸ್-ಗೈಡ್ಸ್ ಸಂಸ್ಥೆಗಳು ಒಂದೇ ಹೆಸರು ಮತ್ತು ಸಂಸ್ಥೆಯ ಅಡಿಯಲ್ಲಿ ಸೇವೆ ಸಲ್ಲಿಸುವ ಉದ್ದೇಶದಿಂದ ಭಾರತ್ ಸ್ಕೌಟ್ಸ್-ಗೈಡ್ಸ್ ಎಂದು ನಾಮಕರಣ ಮಾಡಿ ದೇಶದ ಎಲ್ಲಾ ಸ್ಕೌಟ್ಸ್-ಗೈಡ್ಸ್ ಸಂಸ್ಥೆಗಳು ಒಂದುಗೂಡಿದ ದಿನದ ನೆನಪಿಗಾಗಿ ಇಡೀ ವಾರ ಸ್ಕೌಟ್ ಗೈಡ್ ಸಪ್ತಾಹವನ್ನು ಆಚರಿಸುತ್ತಾ ಅದರ ಅಂಗವಾಗಿ ಧ್ವಜಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಹಾಗೂ ಸಮಾಜಕ್ಕೆ ಕೈಲಾದಷ್ಟು ಮಟ್ಟಿಗೆ ಸೇವೆ ಸಲ್ಲಿಸುವ ಉದ್ದೇಶ ಹೊಂದಿದೆ' ಎಂದು ತಿಳಿಸಿದರು.



ಜಿಲ್ಲಾ ಆಯುಕ್ತರಾದ ಶ್ರೀಮತಿ ನವೀನಾರವರು ಮಾತನಾಡಿ 'ಮುಂದಿನ ದಿನಗಳಲ್ಲಿ ತಿಂಗಳಿಗೆ ಒಂದು ಅಥವಾ ಎರಡು ದಿನ ಸೇವಾ ಕಾರ್ಯಕ್ರಮಗಳಲ್ಲಿ ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್‌ಗಳು ಗಿಡಗಳ ಪೋಷಣೆ, ಸ್ವಚ್ಚತೆ, ಸಾರ್ವಜನಿಕ ಉದ್ಯಾನವನಗಳ ನಿರ್ವಹಣೆ, ಅಗತ್ಯವಿರುವವರಿಗೆ ಸಹಾಯ ಮಾಡುವುದು, ವರ್ಷಕ್ಕೆ ಒಂದು ಪಾರ್ಕ ಅನ್ನು ಹಸಿರಿಕರಣ ಮಾಡುವುದು, ಸರ್ಕಾರಿ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ, ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಮುಂತಾದ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ ಇಂತಹ ಸೇವಾ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಎಲ್ಲರೂ ಕೈ ಜೋಡಿಸಬೇಕು' ಎಂದು ತಿಳಿಸಿದರು. ಪ್ರಾಸ್ತಾವಿಕವಾಗಿ ಶ್ರೀಮತಿ ಉಮಾದೇವಿ ಮತ್ತು ಸ್ಕೌಟ್ ಬಾಬುರವರು ಮಾತನಾಡಿದರು, ಈ ಸಂದರ್ಭದಲ್ಲಿ ಪಧಾದಿಕಾರಿಗಳು ಉಪಸ್ಥಿತರಿದ್ದರು. ಇದೇ ದಿನದಂದು ಮುಳಬಾಗಿಲು ತಾಲ್ಲೂಕಿನ ನಗವಾರ ಶಾಲೆಯಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಲತಾ ರವರ ನಾಯಕತ್ವದಲ್ಲಿ, ಮಾಲೂರು ತಾಲ್ಲೂಕಿನ ಗೊಲ್ಲಹಳ್ಳಿ ಶಾಲೆಯಲ್ಲಿ ಕಬ್ ಮಾಸ್ಟರ್ ರಾಜಪ್ಪ ರವರ ನಾಯಕತ್ವದಲ್ಲಿ, ಶ್ರೀನಿವಾಸಪುರ ತಾಲ್ಲುಕಿನ ಸೋಮಯಾಜಲಹಳ್ಳಿಯಲ್ಲಿ ರೆಡ್ಡೆಮ್ಮ, ಅರುಣ ಕುಮಾರಿ ರವರ ನಾಯಕತ್ವದಲ್ಲಿ ಧ್ವಜ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

* ನವೆಂಬರ್ 11 ರಂದು ಮುಳಬಾಗಿಲು ತಾಲ್ಲೂಕಿನ ಬ್ರಿಲಿಯಂಟ್ ಶಾಲೆ, ಜೈನ್ ಇಂಟರ್ ನ್ಯಾಷನಲ್ ಶಾಲೆ, ತಾಲ್ಲೂಕ್ ಪಂಚಾಯತ್, ಬಿ.ಆರ್.ಸಿ. ಕೇಂದ್ರ, ಸರ್ಕಾರಿ ಬಾಲಕಿಯರ ಕಾಲೇಜುಗಳಲ್ಲಿ ಧ್ವಜ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

* ನವೆಂಬರ್ 12 ರಂದು ಕೋಲಾರ ತಾಲ್ಲೂಕಿನ ಅರ್ಕಾ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಪ್ರವೇಶ ಮತ್ತು ಪ್ರಥಮ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರದಲ್ಲಿ ಗೈಡ್ ಕ್ಯಾಪ್ಟನ್ ಶ್ರೀಮತಿ ಉಮಾದೇವಿ, ಸ್ಕೌಟ್ಸ್ ಮಾಸ್ಟರ್ ಶ್ರೀ ನಿರಂಜನ್, ಶ್ರೀ ಹರೀಶ್, ಶ್ರೀ ತೇಜೋನಂದ, ಫ್ಲಾಕ್ ಲೀಡರ್ ಶ್ರೀಮತಿ ಹೇಮಾವತಿ, ಶ್ರೀಮತಿ ಶ್ರೀದೇವಿ, ಶ್ರೀಮತಿ ರಾಧಮ್ಮ, ಸೇವೆ ಸಲ್ಲಿಸಿದರು. ಇದೇ ದಿನ ತಾಲ್ಲೂಕಿನ ವಿದ್ಯಾ ಬೋಧಿನಿ ಶಾಲೆಯಲ್ಲಿ ಶ್ರೀದೇವಿ ಸ್ಕೌಟ್ಸ್ ಮಾಸ್ಟರ್ ರವರ ನಾಯಕತ್ವದಲ್ಲಿ ಧ್ವಜ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.

* ನವೆಂಬರ್ 13 ರಂದು ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಸ್ಕೌಟ್ಸ್ ಗೈಡ್ಸ್ ಸಂಸ್ಥೆ ವತಿಯಿಂದ ಮಕ್ಕಳ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜನೆ ಮಾಡಿ ಪ್ರಶಸ್ತಿಗಳನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಹಿರಿಯ ನ್ಯಾಯಾದೀಶರಾದ ಶ್ರೀ ಸುನಿಲ ಹೊಸಮನಿರವರು ಪ್ರಮಾಣ ಪತ್ರಗಳನ್ನು ವಿತರಿಸಿದರು. ಇದೇ ದಿನ ಬಂಗಾರಪೇಟೆಯ ಜೈನ್ ಇಂಟರ್ ನ್ಯಾಷನಲ್ ಶಾಲೆ ಮತ್ತು ಕೋಲಾರ ನಗರದ ರವಿ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಧ್ವಜ ದಿನಾಚರಣೆಯನ್ನು ಆಚರಣೆ ಮಾಡಲಾಯಿತು.



* ನವೆಂಬರ್ 14 ರಂದು ಕೋಲಾರ ಜಿಲ್ಲಾ ಸಂಸ್ಥೆ, ಜೀವನ್ ಪ್ರಗತಿ ಗೋಲ್ಡನ್ ಇಂಟರ್ ನ್ಯಾಷನಲ್ ಶಾಲೆ ನಲ್ಲಗುಟ್ಟಹಳ್ಳಿ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗೆ ವಿವಿಧ ಆಟಗಳನ್ನು ಆಡಿಸಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ಶಾಲಾ ಅಧ್ಯಕ್ಷರಾದ ಶ್ರೀ ಜಯಣ್ಣ, ಪ್ರಾಂಶುಪಾಲರಾದ ಶ್ರೀ ವರದರಾಜು, ಮುಖ್ಯ ಶಿಕ್ಷಕಿ ಶ್ರೀಮತಿ ಶಾಂತಮ್ಮ, ಟ್ರಸ್ಟಿ ಶ್ರೀ ಸುರೇಶ್, ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಜಿಲ್ಲಾ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಂಟಿ ಕಾರ್ಯದರ್ಶಿ ಶ್ರೀಮತಿ ಉಮಾದೇವಿ ಮುಂತಾದವರು ಉಪಸ್ಥಿತರಿದ್ದರು.

## ಕೊಪ್ಪಳ

* ನವಂಬರ್ 07 ರಂದು ಸಂಸ್ಥಾಪನ ಧ್ವಜ ದಿನಾಚರಣೆಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಕೊಪ್ಪಳದಲ್ಲಿ ಆಚರಿಸಲಾಯಿತು, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕೊಪ್ಪಳ ಶ್ರೀ ನಲಿನ ಅತುಲ್, ಐ.ಎ.ಎಸ್.ರವರು ಮತ್ತು ಶ್ರೀ ಮಲ್ಲಿಕಾರ್ಜುನ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳು, ಕೊಪ್ಪಳ ಶ್ರೀ ಜಗದೀಶ್ ಜಿ.ಹೆಚ್. ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ, ಶ್ರೀ ಎಸ್.ಎಸ್. ಬೀರಾದರ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ಶ್ರೀ ಸುರೇಶ್, ಜಿಲ್ಲಾ ವಾರ್ತಾಧಿಕಾರಿಗಳು ಜಿಲ್ಲಾ ಸಂಸ್ಥೆಯ ಸರ್ವಪದಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಜೊತೆಯಲ್ಲಿ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಿದರು. ನಂತರ ಜಿಲ್ಲೆಯ ರೋವರ್ಸ್‌ಗಳಿಂದ ಸ್ವಚ್ಛತಾ ಮತ್ತು ಆರೋಗ್ಯ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಶ್ರೀ ನಲಿನ ಅತುಲ್ ಐ.ಎ.ಎಸ್. ಮಾನ್ಯ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು, ಶ್ರೀ ಎಚ್.ಎಮ್. ಸಿದ್ದರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಮತ್ತು ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಶ್ರೀ ಮಲ್ಲಿಕಾರ್ಜುನ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ, ಸ್ಕೌಟ್-ಗೈಡ್ಸ್ ಚಳುವಳಿಯ ಕುರಿತು ಮಾತನಾಡಿ ಸರ್ವರಿಗೂ ಶುಭ ಕೋರಿದರು. ಕಾರ್ಯಕ್ರಮಕ್ಕೆ ನಿರ್ಣಾಯಕರಾಗಿ ಶ್ರೀ ಯಮನೂರಪ್ಪ, ಸಂಗೀತ ಶಿಕ್ಷಕರು, ಶ್ರೀ ಶರಣಪ್ಪ, ಸಂಗೀತ ಶಿಕ್ಷಕರು, ಉಪಸ್ಥಿತರಿದ್ದರು, ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಎಸ್.ಹೆಚ್. ಹತ್ತಿಮತ್ತೂರ ಎ.ಎಸ್.ಓ.ಸಿ.ರವರು ಮಾತನಾಡಿದರು, ಶ್ರೀ ಎಚ್.ಎಮ್. ಸಿದ್ದರಾಮ್ ಸ್ವಾಮಿ ಜಿಲ್ಲಾ ಮುಖ್ಯ ಆಯುಕ್ತರು ಅಧ್ಯಕ್ಷೀಯ ನುಡಿಗಳನ್ನು ಆಡಿದರು, ಕೊನೆಯಲ್ಲಿ ಶ್ರೀ ಬಸವರಾಜ್ ಚಿತ್ತಾಪುರ ಸ್ಕೌಟ್ ಶಿಕ್ಷಕರು ಸರ್ವರನ್ನ ವಂದನಾಪಣೆ ಮಾಡಿದರು.







* ನವೆಂಬರ್ 11 ರಂದು ಕೊಪ್ಪಳ ತಾಲೂಕಾ ಮಟ್ಟದ ವತಿಯಿಂದ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಕರ್ನಾಟಕ ಪಬ್ಲಿಕ್ ಶಾಲೆ ಹಿರೇಸಿಂದೋಗಿಯಲ್ಲಿ ಏರ್ಪಡಿಸಲಾಯಿತು. ಶ್ರೀ ಬಸಣ್ಣ ಹಂಚಿನಾಳ, ಹಿರಿಯ ಶಿಕ್ಷಕರು, ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿ ಸ್ಥಾನವನ್ನು ಶ್ರೀ ಮಲ್ಲಪ್ಪ ಗುಡದಣ್ಣವರ, ತಾಲೂಕ ಸ್ಕೌಟ್ ಗೈಡ್ ಕಾರ್ಯದರ್ಶಿ ವಹಿಸಿ ಪ್ರಾಸ್ತವಿಕ ನುಡಿಗಳನ್ನಾಡಿದರು. ಶ್ರೀಮತಿ ಮಮತಾ ಹಾಗೂ ಕು.ಕೀರ್ತಿರಡ್ಡಿ ಅವರು ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ಶ್ರೀ ಪರಶುರಾಮ ಶಾಹಪೂರ ಶಿಕ್ಷಕರು ಕಾರ್ಯಕ್ರಮ ನಿರೂಪಿಸಿದರು.

* ನವೆಂಬರ್ 08 ರಂದು ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಧ್ವಜ ಚೀಟಿ ಬಿಡುಗಡೆ ಕಾರ್ಯಕ್ರಮವನ್ನು ಜಿಲ್ಲಾ ಸಂಸ್ಥೆಯ ಪ್ರಧಾನ ಆಯುಕ್ತರು ಹಾಗೂ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎಚ್.ಎಂ. ಸಿದ್ದರಾಮಸ್ವಾಮಿರವರ ನೇತೃತ್ವದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ತಾಲೂಕು ಪಂಚಾಯಿತಿ ಕಾರ್ಯಾಲಯ, ನ್ಯಾಯಾಲಯಗಳ ಸಂಕೀರ್ಣ, ನಗರ ಪೊಲೀಸ್ ಠಾಣೆ, ಹಾಗೂ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ವಿವಿಧ ಅಧಿಕಾರಿಗಳಿಂದ, ವೈದ್ಯರಿಂದ, ನ್ಯಾಯವಾದಿಗಳು ರವರಿಂದ ಹಾಗೂ ಜನಪ್ರಿಯ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಪರಣ್ಣ ಮುನವಳ್ಳಿ ಅವರಿಂದ ಧ್ವಜ ಚೀಟಿ ಬಿಡುಗಡೆಗೊಳಿಸಲಾಯಿತು.

## ರಾಯಚೂರು

* ನವೆಂಬರ್ 14 ರಂದು ರೋವರಿಂಗ್ – ರೇಂಜರಿಂಗ್ ತರಬೇತಿ ಹೊಂದಿರುವ ಮತ್ತು ತರಬೇತಿ ಹೊಂದದೆ ಇರುವ ಉಪನ್ಯಾಸಕ ಉಪನ್ಯಾಸಕರಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಆರ್ & ಡಿ ಸಭಾಂಗಣ, ಸರಕಾರಿ ಪ್ರಥಮ ದರ್ಜೆ ಕಾಲೇಜ್, ರಾಯಚೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಮಾಹಿತಿ ಕಾರ್ಯಾಗಾರದ ಉದ್ಘಾಟನೆಯನ್ನು ರಾಯಚೂರು ನಗರದ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಯಂಕಣ್ಣರವರು ಸಸಿಗೆ ನೀರು ನೀಡುವುದರ ಮೂಲಕ ನೆರವೇರಿಸಿದರು. ಈ ಮಾಹಿತಿ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಭರಶೆಟ್ಟಿರವರು ಮಾಹಿತಿ ನೀಡಿದರು ಮತ್ತು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಸವರಾಜ ಬೋರೆಡ್ಡಿರವರು ಎಲ್ಲ ಉಪನ್ಯಾಸಕ ಉಪನ್ಯಾಸಕಿಯರು ಕಡ್ಡಾಯವಾಗಿ ತಮ್ಮ ತಮ್ಮ ಕಾಲೇಜಿನಲ್ಲಿ ದಳಗಳನ್ನು ಪ್ರಾರಂಭಿಸಬೇಕು ಎಂದು ತಿಳಿಸಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಾಗರ್‌ರವರು ಸಹ ಮಾಹಿತಿಯನ್ನು ನೀಡಿದರು ರೋವರ್ಸ್ ಆಯುಕ್ತರಾದ ಡಾ. ಪ್ರಾಣೇಶ್ ಕುಲಕರ್ಣಿರವರು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯನಿರ್ವಹಿಸಿದರು.



* ನವೆಂಬರ್ 07 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ 75ನೇ ಸಂಸ್ಥಾಪನಾ ದಿನ ಮತ್ತು ಧ್ವಜ ದಿನಾಚರಣೆಯ ಅಮೃತ ಮಹೋತ್ಸವದ ಅಂಗವಾಗಿ ಸಿರವಾರ ನಗರದ ಶಾಂತಿ ನಿಕೇತನ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಸರ್ವಧರ್ಮ ಪ್ರಾರ್ಥನೆ, ಜಾಥಾ ನಡೆಸಿ, ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು. ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗಾಗಿ ನಿಧಿ ಸಂಗ್ರಹಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ಹಾಗೂ ಗೈಡ್ಸ್ ಕ್ಯಾಪ್ಟನ್‌ರಾದ ಶ್ರೀಮತಿ ಅನುರಾಧರವರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಕಾರ್ಯನಿರ್ವಹಿಸಿದರು.

* ನವೆಂಬರ್ 07 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ 75ನೇ ವರ್ಷದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್



ಸಂಸ್ಥಾಪನಾ ಮತ್ತು ಧ್ವಜ ದಿನಾಚರಣೆಯ ಅಂಗವಾಗಿ ರಾಯಚೂರುನಗರದ ಶಾಸಕರಾದ ಸನ್ಮಾನ್ಯ ಡಾ. ಶಿವರಾಜ್ ಪಾಟೀಲ್‌ವರು, ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಪುಟ್ಟಮಾದಯ್ಯ ಮತ್ತು ರಾಯಚೂರು ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಹಾಗೂ ರಾಯಚೂರು ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಶ್ರೀ ಶಶಿಕಾಂತ್ ಶಿವಪುರೆರವರು ಧ್ವಜಚೀಟಿಗಳನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಗದಗಿನ ಕಾರ್ಯನಿರ್ವಹಿಸಿದರು

* ನವೆಂಬರ್ 01 ರಂದು ರಾಯಚೂರು ಜಿಲ್ಲಾಡಳಿತ ವತಿಯಿಂದ 69ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯನ್ನು ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ರಾಷ್ಟ್ರ ಧ್ವಜಾರೋಹಣವನ್ನು ಡಾ. ಶರಣ ಪ್ರಕಾಶ್ ಪಾಟೀಲ್, ಸನ್ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಇವರು ನೆರವೇರಿಸಿದರು. ತದನಂತರ ಪರೇಡ್‌ನಲ್ಲಿ ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು, ಸರ್ಕಾರಿ ಪ್ರೌಢ ಶಾಲೆ ಜಯಿರಾಬಾದ್ (ಗೈಡ್ಸ್) ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೊಲೀಸ್ ಕಾಲೋನಿ ರಾಯಚೂರು (ಗೈಡ್ಸ್) ಈ ಶಾಲೆಗಳಿಂದ ಮಕ್ಕಳು ಭಾಗವಹಿಸಿದ್ದರು. ಈ ಮಕ್ಕಳಿಗೆ ಮಾನ್ಯ ಸಚಿವರು ಟ್ರೋಫಿಗಳನ್ನು ನೀಡಿ ಅಭಿನಂದಿಸಿದರು.





* ರಾಯಚೂರು ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಮಾನ್ವಿ ಅಡಿಯಲ್ಲಿ ಶಾಂತಿ ನಿಕೇತನ ಪ್ರೌಢಶಾಲೆ ಸಿರವಾರ ಘಟಕದ ಸ್ಕೌಟ್ಸ್ ಗೈಡ್ಸ್‌ಗಳು ಸ್ವಚ್ಛತಾ ಸೇವಾ ಕಾರ್ಯಕ್ರಮದ ಅಡಿಯಲ್ಲಿ ಸಿರವಾರದ ವಿವಿಧ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರು ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಅನುರಾಧ ಉಪಸ್ಥಿತರಿದ್ದರು.

## ರಾಮನಗರ

* ನವೆಂಬರ್ 05 ರಿಂದ 11ರ ವರೆಗೆ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ರಾಮನಗರ, ಇಲ್ಲಿ ನಡೆದ ಮೂಲ ತರಬೇತಿ ಶಿಬಿರದಲ್ಲಿ ಎಲ್ಲಾ ವಿಭಾಗಗಳಿಂದ 42 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಈ ಶಿಬಿರವನ್ನು ರಾಜ್ಯ ವಯಸ್ಕ ನಾಯಕರ ತರಬೇತಿ ಆಯುಕ್ತರಾದ ಶ್ರೀ ಚಿನ್ನಸ್ವಾಮಿ ರೆಡ್ಡಿರವರು ಉದ್ಘಾಟಿಸಿದರು. ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಹೆಚ್.ವಿ. ಕೃಷ್ಣಯ್ಯ ನಾಯಕರಾಗಿ, ಗೈಡ್ ವಿಭಾಗಕ್ಕೆ ಶ್ರೀಮತಿ ಪದ್ಮ ಶ್ರೀನಿವಾಸ್ ನಾಯಕಿಯಾಗಿ ಹಾಗೂ ಕಬ್ ವಿಭಾಗಕ್ಕೆ ಶ್ರೀ ನಾರಾಯಣಸ್ವಾಮಿ ನಾಯಕರಾಗಿ ಕಾರ್ಯನಿರ್ವಹಿಸಿದರು. ಜಿಲ್ಲಾ ಖಜಾಂಚಿ ಶ್ರೀ ಭುವನೇಶ್ವರಪ್ಪ ಮತ್ತು ಶ್ರೀ ಎಚ್. ಶಿವಣ್ಣರವರು ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿರುತ್ತಾರೆ. ಶ್ರೀ ಶಿವಕುಮಾರ್ ಮತ್ತು ಶ್ರೀ ಭೀಮಾ ನಾಯಕ್ ಸೀನಿಯರ್ ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರು ಶಿಬಿರದಲ್ಲಿ ಧ್ವಜಚೀಟಿ ಬಿಡುಗಡೆ ಮಾಡಿ ಶಿಬಿರಾರ್ಥಿಗಳಿಗೆ ಹಾಗೂ ಜಿಲ್ಲಾ ಸಂಸ್ಥೆಗೆ ಹಾರೈಸಿರುತ್ತಾರೆ. ಪ್ರಾಂಶುಪಾಲರಾದ ಮಾನ್ಯ ಶ್ರೀ ಎಂ.ಜಿ. ಪ್ರಭುಸ್ವಾಮಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರು ಶಿಬಿರ ಹೊರಸಂಚಾರ ಚಟುವಟಿಕೆಯನ್ನು ಉದ್ಘಾಟಿಸಿದ್ದಲ್ಲದೆ ನವೆಂಬರ್ 08 ರಿಂದ 11ರ ವರೆಗೆ ಜೊತೆಯಲ್ಲಿದ್ದು ಶಿಬಿರದ ಯಶಸ್ಸಿಗೆ ಸಹಕರಿಸಿರುತ್ತಾರೆ.



## ಶಿವಮೊಗ್ಗ

* ಅಕ್ಟೋಬರ್ 23 ರಂದು ಜಿಲ್ಲಾ ಸ್ಕೌಟ್ಸ್ ಭವನ, ಶಿವಮೊಗ್ಗಲ್ಲಿ 2024–25ನೇ ಸಾಲಿನ ಸ್ಕೌಟ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್, ರೋವರ್ಸ್–ರೇಂಜರ್ಸ್ ಹಾಗೂ ದಳನಾಯಕರುಗಳಿಗೆ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಸ್ಕೌಟ್ಸ್–ಗೈಡ್ಸ್ ಪ್ರಾರ್ಥನೆಯೊಂದಿಗೆ ಬೆಳಿಗ್ಗೆ 11–00 ಗಂಟೆಗೆ ಪ್ರಾರಂಭವಾಯಿತು. ಶ್ರೀ ವೈ.ಆರ್. ವೀರೇಶಪ್ಪ. ಸಹಕಾರ್ಯದರ್ಶಿ, ಜಿಲ್ಲಾ ಸಂಸ್ಥೆ ಇವರು ಎಲ್ಲರನ್ನೂ ಸ್ವಾಗತಿಸಿದರು. ನಂತರ ದೀಪಬೆಳಗುವುದರೊಂದಿಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಜಿಲ್ಲಾ ಗೈಡ್ ಆಯುಕ್ತರು ಇವರು ಉದ್ಘಾಟಿಸಿದರು. ವಿವಿಧ ದಳಗಳಿಂದ ಕಾರ್ಯಕ್ರಮಕ್ಕೆ ಭಾಗವಹಿಸಿರುವ ಎಲ್ಲಾ "ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ, ಸ್ಕೌಟ್ಸ್ ಗೈಡ್ ಚಳುವಳಿಯನ್ನು ಯಶಸ್ವಿಗೊಳಿಸುವುದು ಬಹಳ ಮುಖ್ಯವಾಗಿರುತ್ತದೆ" ಎಂದು ತಿಳಿಸಿದರು. ಶ್ರೀ ಚಂದ್ರಶೇಖರಯ್ಯ .ಕೆ.ವಿ, ಜಿಲ್ಲಾ ಕಾರ್ಯದರ್ಶಿ ಇವರು ವಂದನಾರ್ಪಣೆ ಕಾರ್ಯಕ್ರಮ ನೆರವೇರಿಸಿದರು. ಶ್ರೀ ರಾಜೇಶ್ ಎ.ವಿ., ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಸಭಾ ಕಾರ್ಯಕ್ರಮವನ್ನು ನಿರೂಪಿಸಿದರು.



ಈ ಕಾರ್ಯಕ್ರಮಕ್ಕೆ ತೀರ್ಪುಗಾರರಾಗಿ ಶ್ರೀಮತಿ ಉಮಾದೇವಿ, ಶ್ರೀಮತಿ ಸಿಂಚನಾ. ಎನ್. ಮತ್ತು ಶ್ರೀಮತಿ ಶಾಂಭವಿ. ಕೆ. ಭಾಗವಹಿಸಿದ್ದರು. ಮಧ್ಯಾಹ್ನ 3.00 ಗಂಟೆಗೆ



ಸರಿಯಾಗಿ ಸಮಾರೋಪ ಸಮಾರಂಭ ಪ್ರಾರಂಭವಾಯಿತು. ಶ್ರೀ ವೈ.ಆರ್ ವೀರೇಶಪ್ಪ ಇವರು ಸ್ವಾಗತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ.ಪಿ. ಬಿಂದುಕುಮಾರ್. ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಸಂಸ್ಥೆ, ಶಿವಮೊಗ್ಗ ಇವರು ವಹಿಸಿಕೊಂಡಿದ್ದು, ಸ್ಪರ್ಧೆಯ ವಿಜೇತರಿಗೆ ಪ್ರಮಾಣಪತ್ರ, ಬಹುಮಾನ ವಿತರಿಸಿದರು. ಶ್ರೀ ರವಿ.ಕೆ. ಜಿಲ್ಲಾ ಆಯುಕ್ತರು (ರೋವರ್ಸ್) ಇವರು ಎಲ್ಲರನ್ನೂ ವಂದಿಸಿದರು.

* ನವೆಂಬರ್ 07 ರಂದು ಬೆಳಿಗ್ಗೆ 10.00 ಗಂಟೆಗೆ ಶಿವಮೊಗ್ಗದ ವಿವಿಧ ಕಛೇರಿಗಳಲ್ಲಿ ಅಧಿಕಾರಿಗಳಿಂದ ಧ್ವಜ ಚೀಟಿ ಬಿಡುಗಡೆ ಮಾಡುವ ಮೂಲಕ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು. ಶ್ರೀ ಹೇಮಂತ್. ಎನ್. ಐ.ಎ.ಎಸ್. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ ಇವರು ಧ್ವಜಚೀಟಿಗಳನ್ನು ಬಿಡುಗಡೆ ಮಾಡಿದರು. ಶ್ರೀ ಎಸ್.ಆರ್. ಮಂಜುನಾಥ್, ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಇವರು ಧ್ವಜಚೀಟಿಗಳನ್ನು ಬಿಡುಗಡೆ ಮಾಡಿದರು.



* ನವೆಂಬರ್ 07 ರಂದು ಸ್ಥಳೀಯ ಸಂಸ್ಥೆ ಸೊರಬ ವತಿಯಿಂದ ಸಂಸ್ಥಾಪನ ದಿನಾಚರಣೆಯನ್ನು ಆಚರಿಸಲಾಯಿತು. ಸೊರಬ ತಾಲೂಕು ತಹಸಿಲ್ದಾರ್ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಧ್ವಜ ಚೀಟಿ ಬಿಡುಗಡೆಗೊಳಿಸಲಾಯಿತು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಾಣಿ ರಾಜಪ್ಪ ಮತ್ತು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯಾಗಿರುವಂತ ಶ್ರೀ ಶೇಖರಪ್ಪ ಆರ್.ಟಿ. ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿಯ ಸಿಬ್ಬಂದಿ ವರ್ಗ, ಪೋಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಇತರೆ ಇಲಾಖೆಯ ಅಧಿಕಾರಿಗಳು ಜಿ.ಪಿ.ಯು.ಸಿ. ಕಾಲೇಜಿನ ಗೈಡ್ ಲೀಡರ್ ಗಿರಿಜಮ್ಮ .ಎಸ್. ಹಾಗೂ ಗೈಡ್ಸ್ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.




## ತುಮಕೂರು

* ನವೆಂಬರ್ 09 ರಂದು ಜಿಲ್ಲಾ ಮಟ್ಟದ ದೇಶಭಕ್ತಿ ಗೀತೆಗಳು ಸ್ಪರ್ಧೆ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಆಶಾ ಪ್ರಸನ್ನ ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ರೇಣುಕಾ ವಿದ್ಯಾಪೀಠ ಶಾಲೆಯ ಪ್ರಾಂಶುಪಾಲರುಗಳಾದ ಶ್ರೀ ಚಿದಾನಂದ, ಶ್ರೀಮತಿ ದೇವಿಕ ರವರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಅಂಜನಪ್ಪ ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಕೆಂಪ ರಂಗಯ್ಯ, ಶ್ರೀ ಹುಚ್ಚಯ್ಯ ಜಿಲ್ಲಾ ಸಹಾಯಕ ಆಯುಕ್ತರುಗಳು ಉಪಸ್ಥಿತರಿದ್ದರು ಶ್ರೀಮತಿ ಭಾಗ್ಯಲಕ್ಷ್ಮಿ ಹಾಗೂ ಶ್ರೀಮತಿ ಮಮತಾ ರವರು ತೀರ್ಪುಗಾರರಾಗಿ ಆಗಮಿಸಿದ್ದರು.



* ನವೆಂಬರ್ 07ರಂದು ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಧ್ವಜ ಚೀಟಿ ಬಿಡುಗಡೆ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಆಶಾ ಪ್ರಸನ್ನಕುಮಾರ್ ನೆರವೇರಿಸಿದರು. ತದನಂತರ ನಗರದ ಪ್ರಮುಖ ಬೀದಿಗಳಲ್ಲಿ ಸ್ಕೌಟ್ ಚಳುವಳಿಯ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮವನ್ನು ನಡೆಸಲಾಯಿತು. ಇದೇ ಸಂದರ್ಭದಲ್ಲಿ ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಉದ್ದೇಶಗಳು ಇದರ ಕಾರ್ಯಾತ್ಮಕ ಚಟುವಟಿಕೆ ಸ್ಕೌಟಿಂಗ್ ನಲ್ಲಿನ ವಿಶೇಷ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಿ ಈ ದಿನದ ವಿಶೇಷ ಧ್ವಜಗಳನ್ನು ಸಾರ್ವಜನಿಕರಿಗೆ ನೀಡಿ ಸ್ಕೌಟಿಂಗ್ ಮಹತ್ವದ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಸುಭಾಷಿಣಿ ಆರ್ ಕುಮಾರ್, ಜಿಲ್ಲಾ ಆಯುಕ್ತರು (ಗೈಡ್), ಶ್ರೀ ಸುರೇಂದ್ರ ಷಾ, ಜಿಲ್ಲಾ ಕಾರ್ಯದರ್ಶಿ, ಶ್ರೀ ಅಂಜನಪ್ಪ ಹಾಗೂ 500ಕ್ಕೂ ಹೆಚ್ಚು ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ದೀಕ್ಷಾ ಹೆರಿಟೇಜ್ ಶಾಲೆ ತಿಪಟೂರು ತಾಲೂಕಿನ ಕಬ್–ಬುಲ್‌ಬುಲ್‌ಗಳು ಹಸಿರು ದೀಪಾವಳಿ ಆಚರಣೆ ಪ್ರಯುಕ್ತ ಮಣ್ಣಿನ ದೀಪಗಳನ್ನು ಸಿದ್ಧಪಡಿಸಿ ಪರಿಸರ ದೀಪಾವಳಿ ಆಚರಿಸೋಣ ಎಂದು ಕರೆ ನೀಡಿದರು. ಹಸಿರು ದೀಪಾವಳಿ ಆಚರಣೆಯ ಪ್ರಯುಕ್ತ ಬಿಷಪ್ ಸರ್ಜೆಂಟ್ ಶಾಲೆಯ ವಿದ್ಯಾರ್ಥಿಗಳು ಗ್ರೀಟಿಂಗ್ ಕಾರ್ಡ್‌ಗಳನ್ನು ತಯಾರಿಸಿದರು.

* ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ತುಮಕೂರಿನಲ್ಲಿ ಪದವಿ ಮುಗಿಸಿ ರಾಜ್ಯ ಪುರಸ್ಕಾರ ಪ್ರಶಸ್ತಿ ಪಡೆದಿರುವ ಕು. ವಿದ್ಯಾಶ್ರೀ ಕೆ.ಎಲ್ ಇವರು 2024–25 ಸಾಲಿನಲ್ಲಿ ಪ್ರಥಮ ಬಾರಿಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಕೋಟಾದಡಿಯಲ್ಲಿ ಎಂ.ಕಾಂ (ಇನ್ಫಾರ್ಮಶನ್ ಸಿಸ್ಟಮ್) ಸ್ನಾತಕೋತ್ತರ ಪದವಿಯ ಪ್ರವೇಶ ಪಡೆದುಕೊಂಡಿರುತ್ತಾರೆ.

* ನವೆಂಬರ್ 01 ರಂದು 69ನೇ ಕನ್ನಡ ರಾಜ್ಯೋತ್ಸವ ಆಚರಣೆಯ ಪ್ರಯುಕ್ತ ಜಿಲ್ಲಾ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ಪರೇಡ್ ಕವಾಯಿತು ಪ್ರದರ್ಶನ ನಡೆಯಿತು. ಈ ಪಥಸಂಚನದಲ್ಲಿ ಸ್ಕೌಟ್ ಗೈಡ್, ರೋವರ್ಸ್ ಮತ್ತು ರೇಂಜರ್ಸ್ 04 ತಂಡಗಳು



ಭಾಗವಹಿಸಿದ್ದವು. ಉತ್ತಮ ಕವಾಯಿತು ಪ್ರದರ್ಶನ ನೀಡಿದ ಕಲ್ಪತರು ರೋವರ್ ಮುಕ್ತ ದಳ ತಂಡಕ್ಕೆ ಪ್ರಥಮ ಬಹುಮಾನ ಲಭಿಸಿತು. ದ್ವಿತೀಯ ಬಹುಮಾನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ ಮತ್ತು ರೇಂಜರ್ಸ್ ತಂಡಕ್ಕೆ ದೊರಕಿತ್ತು, ತೃತೀಯ ಬಹುಮಾನ ಅಂಕಿತ ಪ್ರೌಢಶಾಲೆ ಸ್ಕೌಟ್ ತಂಡಕ್ಕೆ ಬಹುಮಾನ ಲಭಿಸಿತು. ಮಾನ್ಯ ಡಾ. ಜಿ. ಪರಮೇಶ್, ಗೃಹ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಇವರು ಬಹುಮಾನಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿದರು.

* ಅಕ್ಟೋಬರ್ 24 ರಂದು "ವಿಶ್ವ ಪೋಲಿಯೋ ದಿನಾಚರಣೆ" ಪ್ರಯುಕ್ತ ರೋಟರಿ ಸಂಘ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ನಗರದ ವಿವಿಧ ರಸ್ತೆಗಳಲ್ಲಿ ಸಾರ್ವಜನಿಕರಿಗೆ ಜಾಗೃತಿ ಜಾಥಾ ನಡೆಸಿ ಅರಿವು ಮೂಡಿಸಲಾಯಿತು.

## ಉಡುಪಿ

* ಅಕ್ಟೋಬರ್ 21 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 76ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಮೌಂಟ್ ರೋಸರಿ ಆಂಗ್ಲ ಮಾಧ್ಯಮ ಶಾಲೆ ಕಲ್ಯಾಣಪುರ ಇಲ್ಲಿಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು, ಶಿಕ್ಷಕರು ಭಾಗವಹಿಸಿದ್ದರು.



* ಅಕ್ಟೋಬರ್ 22 ರಂದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಪತ್ರಕರ್ತರ ಕ್ರೀಡೋತ್ಸವ ಅಜ್ಜರ ಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಿತು, ಈ ಸಂದರ್ಭದಲ್ಲಿ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಅಜ್ಜರಕಾಡು ಇಲ್ಲಿಯ ರೇಂಜರ್‌ಗಳಿಂದ ಧ್ವಜಾರೋಹಣ ಸಂದರ್ಭದಲ್ಲಿ ವಾದ್ಯ ವೃಂದ ಬಾರಿಸುವುದು ಹಾಗೂ ಸೈಂಟ್ ಸಿಸಿಲಿ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ ಗೈಡ್ಸ್‌ಗಳಿಂದ ಪಥಸಂಚಲನ ಹಾಗೂ ಸೇವಾ ಶಿಬಿರ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜನಾರ್ಧನ್ ಕೊಡವೂರು ಹಾಗೂ ಜಿಲ್ಲಾ ಖಜಾಂಚಿ ಆಗಿರುವ ಶ್ರೀ ಹರಿಪ್ರಸಾದ್ ರೈ ಉಪಸ್ಥಿತರಿದ್ದರು.




* ಅಕ್ಟೋಬರ್ 23 ಮತ್ತು 24 ರಂದು ಜಿಲ್ಲಾ ಕ್ರೀಡಾಂಗಣ ಅಜ್ಜರಕಾಡು ಇಲ್ಲಿ ಉಡುಪಿ ಮತ್ತು ಕಾಪು ವಲಯದ ಕ್ರೀಡಾಕೂಟ ನಡೆದಿದ್ದು ಸುಮಾರು 4000 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕ್ರೀಡಾಕೂಟದಲ್ಲಿ ಸ್ವಯಂಸೇವಕರಾಗಿ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಅಜ್ಜರಕಾಡು ಇಲ್ಲಿಯ ರೇಂಜರ್ಸ್ ಹಾಗೂ ಸೈಂಟ್ ಸಿಸಿಲಿ ಹೈಸ್ಕೂಲ್ ಉಡುಪಿ ಇಲ್ಲಿಯ ಸ್ಕೌಟ್ ಮತ್ತು ಗೈಡ್ಸ್‌ಗಳು. ಸ್ಕೌಟ್ ಮಾಸ್ಟರ್ ಶ್ರೀ ಅಡ್ವಿನ್ ಇವರ ನೇತೃತ್ವದಲ್ಲಿ, 110 ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ. ಅತ್ಯುನ್ನತ ರೀತಿಯಲ್ಲಿ ತಮ್ಮ ಕೈಲಾದಷ್ಟು ಮಟ್ಟಿಗೆ ಸೇವೆಯನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.

* ಅಕ್ಟೋಬರ್ 25 ರಂದು ಸರಕಾರಿ ಡಾ. ಜಿ. ಶಂಕರ ಮಹಿಳಾ ಕಾಲೇಜು ಅಜ್ಜರಕಾಡು, ವಿಭಾಗದ ಸುಮಾರು 40 ರೇಂಜರ್ಸ್‌ಗಳು ಮಣಿಪಾಲದಲ್ಲಿ ಇರುವ ವಿಶ್ರಾಂತಿ ಧಾಮ ಎಂಬ ವೃದ್ಧಾಶ್ರಮಕ್ಕೆ ಭೇಟಿ ನೀಡಿ. ಇಡೀ ವೃದ್ಧಾಶ್ರಮದ ಸ್ವಚ್ಛತೆಯನ್ನು ಮಾಡಿ, ನಂತರ ಅವರ ಜೊತೆ ಕಾಲ ಕಳೆದು ಅವರ ಮನೋರಂಜನೆಗಾಗಿ ಹಾಡನ್ನು ಹಾಡಿ, ನೃತ್ಯವನ್ನು ಮಾಡಿದರು ನಂತರ ಅವರ ಬಳಿ ಹಾಡನ್ನು ಹಾಡಿಸಿ ಅವರಿಗೆ ಆಟವನ್ನು ಆಡಿಸಿ ಸ್ಕೌಟ್ ಮತ್ತು ಗೈಡ್‌ನ ಚಪ್ಪಾಳೆಯನ್ನು ಕಲಿಸಿ, ಮಧ್ಯಾಹ್ನ ಅವರಿಗೆ ಊಟವನ್ನು ಮಾಡಿಸಿ. ನಂತರ ಅವರ ಆರೈಕೆಯನ್ನು ಮಾಡಿ ಅವರ ಕ್ಷೇಮ ಕುಶಲ ವಿಚಾರಿಸಿದರು.

* ನವೆಂಬರ್ 07 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಜ್ರ ಮಹೋತ್ಸವದ ಪ್ರಾರಂಭದ ಅಂಗವಾಗಿ ಸಂಸ್ಥಾಪನ ದಿನಾಚರಣೆಯನ್ನು ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿಯಲ್ಲಿ ಆಚರಿಸಲಾಯಿತು. ಮೊದಲಿಗೆ ಮಾನ್ಯ ಜಿಲ್ಲಾಧಿಕಾರಿಯವರಾದ ಡಾ॥ ವಿದ್ಯಾ ಕುಮಾರಿ ಸಮ್ಮುಖದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜನಾರ್ದನ್ ಕೊಡವೂರು, ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಆನಂದ್ ಅಡಿಗ, ಜಿಲ್ಲಾ ಖಜಾಂಚಿ ಶ್ರೀ ಹರಿ ಪ್ರಸಾದ್ ರೈ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಶೇಖರ್ ಪೂಜಾರಿ, ದಳ ನಾಯಕಿಯರು, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್, ಬನ್ನಿ ಕಬ್ಸ್–ಬುಲ್‌ಬುಲ್ ಸ್ಕೌಟ್ಸ್–ಗೈಡ್ಸ್, ರೋವರ್–ರೇಂಜರ್ಸ್, ಇವರೆಲ್ಲರ ಸಮ್ಮುಖದಲ್ಲಿ ಧ್ವಜ ಚೀಟಿಯನ್ನು ಬಿಡುಗಡೆ ಮಾಡಿಸ್ಕೌಟ್ಸ್ ಗೈಡ್ಸ್ ದೇಣಿಗೆಯನ್ನು ನಿಧಿಗೆ ನೀಡಿದರು. ಇತರ ಸರಕಾರಿ ಕಚೇರಿಗಳಿಗೆ ಭೇಟಿ ನೀಡಿ ದೇಣಿಗೆಯನ್ನು ಸಂಗ್ರಹಿಸಲಾಯಿತು.

* ನವೆಂಬರ್ 08 ರಂದು ಕಾಪು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಮರಿಯ ಅನಿತ ಮೆಂಡೋನ್ಸಾ ಹಾಗೂ ಜೊತೆ ಕಾರ್ಯದರ್ಶಿ ಶ್ರೀಮತಿ ನಿಮಿತ ಶೆಟ್ಟಿ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತ ಶ್ರೀಮತಿ ಸುಮನ್ ಶೇಖರ್ ಇವರುಗಳು ಕಾಪು ವಲಯದ 11 ಗ್ರಾಮ ಪಂಚಾಯಿತಿಗಳಿಗೆ ಭೇಟಿಕೊಟ್ಟು ರಾಜ್ಯ ಸಂಸ್ಥೆಯಿಂದ ಕೊಟ್ಟಿರುವ ಧ್ವಜ ಚೀಟಿ ಹಾಗೂ ಸುತ್ತೋಲೆಯನ್ನು ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೀಡುವ ದೇಣಿಗೆ ಬಗ್ಗೆ ಹಾಗೂ 75ನೇ ಅಮೃತ ಮಹೋತ್ಸವ (ಫ್ಲಾಗ್ ಡೇಯ) ಮಹತ್ವವನ್ನು ತಿಳಿಸಲಾಯಿತು.

* ನವೆಂಬರ್ 11 ರಂದು ಉಡುಪಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಶೇಖರ್ ಪೂಜಾರಿ, ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ ಹಾಗೂ ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಸುಮನ್ ಶೇಖರ್ ಇವರುಗಳು ಉಡುಪಿ ವಲಯದ 12 ಗ್ರಾಮ ಪಂಚಾಯಿತಿಗಳಿಗೆ ಭೇಟಿಕೊಟ್ಟು ರಾಜ್ಯ ಸಂಸ್ಥೆಯಿಂದ ಕೊಟ್ಟಿರುವ ಧ್ವಜ ಚೀಟಿ ಹಾಗೂ ಸುತ್ತೋಲೆಯನ್ನು ನೀಡಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೀಡುವ ದೇಣಿಗೆ ಬಗ್ಗೆ ಹಾಗೂ 75ನೇ ಅಮೃತ ಮಹೋತ್ಸವ (ಫ್ಲಾಗ್ ಡೇಯ) ಮಹತ್ವವನ್ನು ತಿಳಿಸುವುದರ ಜೊತೆಗೆ ಇತರ ಸದಸ್ಯರುಗಳಿಂದ ಹಾಗೂ ಸಾರ್ವಜನಿಕರಿಂದ ಸ್ಕೌಟ್ಸ್ ಗೈಡ್ಸ್ ನಿಧಿಗೆ ದೇಣಿಗೆ ಸಂಗ್ರಹಿಸಲಾಯಿತು.

## ಚಿಕ್ಕಮಗಳೂರು

* ಜಿಲ್ಲಾ ಸಂಸ್ಥೆ ವತಿಯಿಂದ ನವೆಂಬರ್ 07 ರಂದು 'ಸಂಸ್ಥಾಪನಾ ದಿನಾಚರಣೆ' ಅಂಗವಾಗಿ ಜಿಲ್ಲಾ ಸ್ಕೌಟ್ ಭವನದಲ್ಲಿ ಧ್ವಜ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ವಿಜಯಪುರ

* ಜಿಲ್ಲಾ ಕಾರ್ಯಾಲಯದಲ್ಲಿ 50ನೇ ಕರ್ನಾಟಕ ರಾಜ್ಯೋತ್ಸವವನ್ನು ರಾಷ್ಟ್ರಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀಯವರು ಧ್ವಜಾರೋಹಣವನ್ನು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸೋಮಲಿಂಗ್ ಕುಂಬಾರ್ ನಿವೃತ್ತ ಡಿವೈಎಸ್‌ಪಿ ಅಧಿಕಾರಿಗಳು ಹಾಗೂ ಅಧ್ಯಕ್ಷರು ಶ್ರೀ ಚೌಡೇಶ್ವರಿ ಬ್ಯಾಂಕ್ ವಿಜಯಪುರರವರು ಕನ್ನಡಾಂಬೆಯ ಭಾವಚಿತ್ರಕ್ಕೆ ಹಾಗೂ ಮಹಾತ್ಮ ಗಾಂಧೀಜಿ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಮಾತನಾಡಿ ಕನ್ನಡನಾಡು, ನುಡಿ, ಸಂಸ್ಕೃತಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳುತ್ತಾ ನಾಡು ಮತ್ತು ಭಾಷೆಯ ಮಹತ್ವವನ್ನು ಸಾರಿದರು. ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಪೂಜಪ್ಪ ಪೂಜಾರಿ, ಚೌಡೇಶ್ವರಿ ಬ್ಯಾಂಕ್ ವಿಜಯಪುರದ ನಿರ್ದೇಶಕ ಮಂಡಳಿ, ಸೆಂಟ್ ಜೋಸೆಫ್ ಶಾಲೆಯ ಸ್ಕೌಟ್ಸ್ – ಗೈಡ್ಸ್‌ಗಳು ಮುಂತಾದವರು ಉಪಸ್ಥಿತರಿದ್ದರು. ಎಸ್.ಜಿ.ವಿ. ಶ್ರೀ ರಾಜಶೇಖರ ಖೇಡಗಿ ಸರ್ವರನ್ನು ಸ್ವಾಗತಿಸಿ ವಂದಿಸಿದರು.



### ಶತಮಾನದ ನೆನಪು

# ಹಾಸನದ ಬಾಯ್ ಸ್ಕೌಟ್‌ಗಳು ಯಗಚಿ ನದಿಗೆ ಹೋಗಿ ಬಂದದ್ದು

ಸಂಗ್ರಹ : ಸಿ.ವಿ ತಿರುಮಲ ರಾವ್
ಸಹಾಯಕ ರಾಜ್ಯ ಆಯುಕ್ತರು

ಹಾಸನ– 14 ಡಿಸೆಂಬರ್ 1922 : ಈ ಟೌನಿನ ಗೌರ್ನಮೆಂಟ್ ಹೈಸ್ಕೂಲು ಬಾಯ್ ಸ್ಕೌಟ್‌ಗಳು ಬಹಳ ದಿನಗಳಿಂದಲೂ ಯಾವ ಸ್ಥಳಕ್ಕಾದರೂ ಟ್ರಿಪ್ ಹೊರಡಬೇಕೆಂದು ಬಹಳ ಕುತೂಹಲರಾಗಿದ್ದ ಕಾರಣ ಈಗಿನ ಹೈಸ್ಕೂಲು ಸ್ಕೌಟ್ ಮಾಸ್ಟರು ಈ ಊರಿಗೆ 5 ಮೈಲಿ ದೂರವಿರುವ ಹಾಲ್ ಬಾಗಿಲು (ಈ ಹಳ್ಳಿಯ ಸಮೀಪದಲ್ಲಿ ಹೇಮಾವತಿಯ ಉಪನದಿಯಾದ ಯಗಚಿಗೆ ಒಂದು ಸಣ್ಣ ಅಣೆಕಟ್ಟನ್ನು ಕಟ್ಟಿರುವರು) ಹೊಳೆಗೆ ಟ್ರಿಪ್ ಹೊರಡಬಹುದೆಂದು ಅಪ್ಪಣೆ ಕೊಡಿಸಿದರು.

ಸ್ಕೌಟ್ ಮಾಸ್ಟರ್ ಅಪ್ಪಣೆಯ ಮೇರೆಗೆ ಎಲ್ಲಾ ಸ್ಕೌಟ್‌ಗಳೂ ತಾ.29ನೇ ಭಾನುವಾರ ಪ್ರಾತಃಕಾಲ 6 ಘಂಟೆಗೆ ಹೈಸ್ಕೂಲು ಮೈದಾನದಲ್ಲು ತಮ್ಮ ತಮ್ಮ ಪಾತ್ರೆ ಪದಾರ್ಥಗಳೊಡನೆ ಒಟ್ಟಿಗೆ ಸೇರಿ ಸ್ಕೌಟ್ ಮಾಸ್ಟರೊಡನೆ ಅಲ್ಲಿಂದ ಹೊರಟು ಬೆಳಿಗ್ಗೆ ಏಳುವರೆ ಘಂಟೆಗೆ ಹೊಳೆಯ ಸಮೀಪವನ್ನು ಸೇರಿ ಕ್ಯಾಂಪ್ ಮಾಡಿಕೊಂಡರು. ಕೂಡಲೇ ಸರ್ವರಿಗೂ ಫಲಾಹಾರವಾದ ನಂತರ ಒಟ್ಟು ಗೂಡಿ ಮೈಸೂರು ಸಂಸ್ಥಾನದ ಬಾವುಟವನ್ನು ಎತ್ತರವಾದ ಪ್ರದೇಶದಲ್ಲಿ ಎತ್ತಿ ನಿಲ್ಲಿಸಿ ರ‍್ಯಾಲಿಯಾದ ನಂತರ ಮೈಸೂರು ರಾಜ್ಯ ಗೀತೆ ಹಾಡಿ ತಮ್ಮ ತಮ್ಮ ಇತರ ಕೆಲಸಗಳಲ್ಲಿ ನಿರತರಾದರು. ಈ ಸಮಯದಲ್ಲಿ ಗೌರವಾರ್ಥವಾಗಿ ಗುಂಡುಗಳಿಗೆ ಬದಲಾಗಿ 21 ಬಾರಿ ಪಟಾಸುಗಳು ಹೊಡೆಯಲ್ಪಟ್ಟವು. ಸ್ನಾನ, ಊಟಗಳಾದ ನಂತರ ಎರಡುವರೆ ಘಂಟೆಯಿಂದ ಐದರವರೆಗೆ ಅನೇಕ ವಿಧವಾದ ಸ್ಕೌಟ್ ಆಟಗಳನ್ನು ಆಡಿ ಅನೇಕ ಸ್ಕೌಟ್ ಹಾಡುಗಳನ್ನೂ ಹಾಡಿದ ಮೇಲೆ ಸರ್ವರೂ ಸಂತೋಷ ಚಿತ್ತರಾಗಿ ಊರನ್ನು ಸೇರಿದರು.

ಹಾಸನದ ಹೈಸ್ಕೂಲು ಬಾಯ್ ಸ್ಕೌಟುಗಳಾದ ನಾವುಗಳು ನಮ್ಮಲ್ಲಿ ಬಹಳ ವಿಶ್ವಾಸವುಳ್ಳ ಹೈಸ್ಕೂಲು ಹೆಡ್ – ಮಾಸ್ಟರ್ ಕೆ. ನಾರಾಯಣರಾಯರಿಗೂ, ಹಾಸನದಲ್ಲಿ ಸ್ಕೌಟ್ ಮೂಮೆಂಟನ್ನು ಉನ್ನತ – ಸ್ಥಿತಿಗೆ ತಂದು ನಮ್ಮ ಈಗಿನ ಸಂತೋಷಕ್ಕೆ ಮುಖ್ಯಕಾರಣರಾದ ಸ್ಕೌಟ್ ಮಾಸ್ಟರ್ ಶ್ರೀ ಎಂ.ವಿ. ಕೃಷ್ಣಯ್ಯಂಗಾರ್‌ಗೂ, ನಮಗೆ ಕ್ಯಾಂಪಿನಲ್ಲಿ ಅನೇಕ ಸಹಾಯಗಳನ್ನು ಒದಗಿಸಿ ಕೊಟ್ಟ ಹಾಲ್‌ಬಾಗಿಲು ಶಾನುಭೋಗರು ಮಿ॥ ನಾರಣಪ್ಪನವರಿಗೂ ಬಹಳ ಕೃತಜ್ಞರಾಗಿರುವೆವು.

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಕಿ ಜೈ

ಎಂ. ಶ್ರೀಪತಿರಾವ್, ಶ್ರೀ ಹಾಸನಾಂಬ ಟ್ರೂಪ್
ಕೃಪೆ: ವೃತ್ತಾಂತ ಪತ್ರಿಕೆ 14.12.1922
ಮೂಲ: ಗೋಖಲೆ ಸಾರ್ವಜನಿಕ ಸಂಸ್ಥೆ, ಬೆಂಗಳೂರು

## ಪ್ರಕೃತಿ ಒಡ್ಡುವ ಸವಾಲುಗಳು–3

# ಶಿಬಿರಾರ್ಥಿಗಳ ಆಪ್ತಮಿತ್ರ, ಮಲಗುವ ಚೀಲ

## (ಸ್ಲೀಪಿಂಗ್ ಬ್ಯಾಗ್)



ಎಂ.ಎನ್ ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು, ಚಿಕ್ಕಮಗಳೂರು




"ಮನೆಯಲ್ಲಿದ್ದರೂ ಕೂಡಾ ನಾನು ನೀಲಿ ಆಕಾಶವನ್ನು ನೋಡುತ್ತಾ ಬಯಲಿನಲ್ಲಿ ಮಲಗುವುದನ್ನು ಹೆಚ್ಚು ಇಷ್ಟ ಪಡುತ್ತೇನೆ," ಎಂದು ಬೇಡನ್ ಪೊವೆಲ್ ಹೇಳುತ್ತಾರೆ.

ಸಣ್ಣವರಿದ್ದಾಗ ಬಯಲು ಸೀಮೆಯ ಅಕ್ಕನ ಮನೆಗೆ ಹೋದಾಗ ಸೆಕೆ ತಡೆಯಲಾರದೆ ತಾರಸಿಯ ಮೇಲೆ ಮಕ್ಕಳೆಲ್ಲ ಮಲಗುತ್ತಿದ್ದುದು ನೆನಪಿದೆ. ಬೆಳಗಿನ ಜಾವ ಛಳಿಗೆ ಒಬ್ಬೊಬ್ಬರೇ ಕೆಳಗೆ ಬಂದು ಮುಗುತ್ತಿದ್ದೆವು. ಛಳಿ ಪ್ರದೇಶದಲ್ಲಿ ಮತ್ತೊಂದು ರೀತಿ. ಕಾಫಿ ತೋಟದಲ್ಲಿ ಎಷ್ಟು ಹೊತ್ತಾದರೂ ಹಾಸಿಗೆ ಮತ್ತು ಪಾದಗಳು ಬೆಚ್ಚಗಾಗುತ್ತಿರಲಿಲ್ಲ. ಕಣದಲ್ಲಿ ಹಾಕಿದ್ದ ಬೆಂಕಿಯಲ್ಲಿ ಚೆನ್ನಾಗಿ ಕಾಲು ಬೆಚ್ಚಗೆ ಮಾಡಿಕೊಂಡು ಕೂಡಲೇ ಬಂದು ಮಲಗಿ ಬಿಡುತ್ತಿದ್ದೆವು.

1972, ರಲ್ಲಿ ಹೊಸದಾಗಿ ಟ್ರೂಪ್ ಪ್ರಾರಂಭಿಸಿದ ಕೆಟ್ಟ ಹುರುಪು, ಡಿಸೆಂಬರ್‌ನಲ್ಲಿ ಸ್ಕೌಟ್ ಮಕ್ಕಳನ್ನು ಕ್ಯಾಂಪ್ ಮಾಡಲು ಬಾಬಾಬುಡನ್ ಗಿರಿಗೆ ಕರೆದೊಯ್ದೆ. ಸರಿಯಾದ ಕೊತಡಿಗಳು ಇಲ್ಲದ ಆ ಸಮಯದಲ್ಲಿ ರಾತ್ರಿಯಾಗುತ್ತಿದ್ದ ಹಾಗೆ ತಿಳಿಯಿತು ಛಳಿಯ ತೀವ್ರತೆ. ಜಮಖಾನದ ಮೇಲೆ ಮಲಗಿದರೆ ಹಿಮದ ಮೇಲೆ ಮಲಗಿದ ಅನುಭವ. ಅದೂ ಒಂದು ಒಳ್ಳೆಯ ಅನುಭವವೇ ಸರಿ!

ಪಶ್ಚಿಮದ ದೇಶಗಳಲ್ಲಂತೂ ಮಲಗುವ ಚೀಲವಿಲ್ಲದೆ ಕ್ಯಾಂಪಿಂಗ್ ಊಹಿಸಿಕೊಳ್ಳುವುದೂ ಅಸಾಧ್ಯ. ಸ್ಲೀಪಿಂಗ್ ಬ್ಯಾಗ್ ಎಂತಹ ಛಳಿಯಲ್ಲಿಯೂ ಕೂಡಾ ಬೆಚ್ಚಗೆ ಮಲಗಲು ಸಾಧ್ಯವಾಗುವಷ್ಟು ಆರಾಮಾಗಿರುತ್ತದೆ. ಮತ್ತೊಂದು ವಿಶೇಷವೆಂದರೆ ಹಗುರವಾಗಿ ಮತ್ತು ಚಿಕ್ಕದಾಗಿ ಮಡಿಸಿ ಇಡಬಹುದಾದದ್ದರಿಂದ, ಬ್ಯಾಕ್‌ಪ್ಯಾಕ್ ಮೇಲೆ ಸುಲಭವಾಗಿ ಕಟ್ಟಿಕೊಳ್ಳಬಹುದು, ಆದರೆ ಬ್ಯಾಕ್‌ಪ್ಯಾಕ್‌ನಲ್ಲಿ ಕೆಳಗಡೆ ಇಡುವುದು ಸೂಕ್ತ, ಏಕೆಂದರೆ ಇದು ಬೇಕಾಗುವುದು ದಿನದ ಕೊನೆಯಲ್ಲಿ. ಸ್ಲೀಪಿಂಗ್ ಬ್ಯಾಗ್ ಬೆಚ್ಚಗೆ ಮಾಡುವುದಿಲ್ಲ ಆದರೆ ನಮ್ಮ ದೇಹದಿಂದ ಹೊರಸೂಸುವ ಶಾಖವನ್ನು ಹಿಡಿದಿಡುತ್ತದೆ. ಆರಿಸಬೇಕಾದರೆ ಸ್ವಲ್ಪ ದೊಡ್ಡದನ್ನೇ ಆರಿಸುವುದು ಒಳ್ಳೆಯದು, ಕಾರಣ ಸ್ವಲ್ಪ ಕೈಕಾಲು ಆಡಲು ಅವಕಾಶವಿರುತ್ತದೆ. ಹೊರಗೆ ಮಲಗಲು ನೀರು ಹೀರಿಕೊಳ್ಳದ ರೀತಿಯದು ಉತ್ತಮ. ಆದರೆ ಟೆಂಟಿನ ಒಳಗಡೆ ಮಲಗುವುದಾದರೆ ಇದರ ಅವಶ್ಯಕತೆ ಇರುವುದಿಲ್ಲ.

ವಿವಿಧ ರೀತಿಯ ಮಲಗುವ ಚೀಲಗಳಿವೆ. ಮಮ್ಮಿಬ್ಯಾಗ್ ಎನ್ನುವುದು ದೇಹಕ್ಕೆ ಅಂಟಿಕೊಂಡಿರುತ್ತದೆ. ಚೌಕ ಅಥವಾ ಚತುಷ್ಕೋನ (ರೆಟ್ಯಾಂಗಲ್) ಪದರಗಳದ್ದು, ಕಿವಿಟೋಪಿ ಇರುವುದು. ಟೇಪರ್ಡ್ (ಮೇಲೆ ಅಗಲ, ಕಾಲಿನ ಕಡೆ ಕಿರುದು) ಹೀಗೆ ವಿವಿಧ ಮಾದರಿಯಲ್ಲಿ ದೊರೆಯುತ್ತದೆ. ಖರೀದಿಸುವಾಗ ಕಡಿಮೆ ತೂಕವಿರುವುದು ಹಾಗೂ ಬೆಚ್ಚಗಿರುವ ಪದರಗಳಿರುವುದನ್ನು ಆರಿಸುವುದು ಒಳಿತು.

ಮಲಗುವಾಗ ಒಳಗೆ ನುಸುಳಿ ತಲೆ ಮಾತ್ರ ಹೊರಗಿರುವ ಹಾಗೆ ಜಿಪ್ ಎಳೆದುಕೊಂಡು ಮಲಗುವುದು.

ಕೊನೆಯಲ್ಲಿ :– ಒಂದು ಸ್ವಾರಸ್ಯಕರ ಪ್ರಸಂಗ. 1974 ಹಿಮಾಲಯ ಚಾರಣ. ಹಿಮಾಚಲದ ಬೈರಾಗಡ್‌ನಿಂದ ಸತ್ರುಂದಿಗೆ ಚಾರಣ. ದಿನವಿಡೀ ನಡೆದು ಪರ್ವತ ಏರಿ ದಣಿದಿದ್ದೆವು, ಛಳಿ ಬೇರೆ, ಹಿಮದಲ್ಲಿ ನಡೆದು ಪಾದಗಳೆಲ್ಲಾ ಮರಗಟ್ಟಿಗಿದ್ದವು. ದಾರಿಯಲ್ಲಿ ಒಂದು ಟೆಂಟ್‌ನಲ್ಲಿ ಒಬ್ಬ ಬೋಂಡಾ ಮಾಡುತ್ತಿದ್ದ. ಹಸಿವಾಗಿದ್ದರಿಂದ ಲೆಕ್ಕವಿಲ್ಲಷ್ಟು ಬೋಂಡಾ ತಿನ್ನುತ್ತಾ ಕಾಲನ್ನು ಬಿಸಿಮಾಡಿಕೊಳ್ಳಲು ಒಲೆಯಲ್ಲಿ ಬೆಂಕಿಯ ಕಡೆ ಕಾಲು ಮಾಡಿ ಕುಳಿತಿದ್ದೆವು. ಯಾರೋ ಅಂದರು ರಬ್ಬರ್ ವಾಸನೆ ಎಂದು. ನೋಡಿದರೆ ನನ್ನ ಹಂಟರ್ ಬೂಟಿನ ತಳಕ್ಕೆ ಬೆಂಕಿ ಹತ್ತಿತ್ತು! ಮರಗಟ್ಟಿದ್ದ ಪಾದಕ್ಕೆ ಅದರ ಅರಿವೇ ಆಗಿಲ್ಲ!

# ಶ್ರದ್ಧಾಂಜಲಿ





**ಶ್ರೀ ಕೆ.ವಿ. ಕೃಷ್ಣಸ್ವಾಮಿರಾವ್ ಅವರು** ವೈಶ್ಯ ಬ್ಯಾಂಕ್‌ನಲ್ಲಿ ಹಿರಿಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ರಾಜ್ಯ ಸಂಸ್ಥೆಯಲ್ಲಿ ಆಜೀವ ಸದಸ್ಯರಾಗಿದ್ದು, ಸಂಸ್ಥೆಯ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ಇತರ ಸಭೆಗಳಲ್ಲಿ ಸಾಮಾನ್ಯ ಸದಸ್ಯರು ಮತ್ತು ಆಜೀವ ಸದಸ್ಯರುಗಳ ಪ್ರತಿನಿಧಿಯಾಗಿ ಸುಮಾರು 03 ದಶಕಗಳಿಂದಲೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಸರಳ, ಸಜ್ಜನಿಕೆ ಹಾಗು ಉತ್ತಮ ರೀತಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ಮತ್ತು ರಾಜ್ಯ ಸಂಸ್ಥೆಯಿಂದ ನಡೆಯುತ್ತಿದ್ದ ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದರು. ಶ್ರೀಯುತರು ರಾಜ್ಯ ಸಂಸ್ಥೆಯ ಆವರಣದಲ್ಲಿ (ಕೋಟೆ ಪ್ರದೇಶ) ನಡೆಯುತ್ತಿದ್ದ ರಾಷ್ಟ್ರೀಯ ದಿನಾಚರಣೆಗಳಲ್ಲಿ ತಪ್ಪದೇ ಆಗಮಿಸಿ ಭಾಗವಹಿಸುತ್ತಿದ್ದರು. ಮಕ್ಕಳಿಗೆ ಸಿಹಿ ಹಂಚಲು ರೂ. 1000/- ಗಳನ್ನು ನೀಡುತ್ತಿದ್ದರು. ಇವರು ವಾಣಿಜ್ಯ ಪದವೀಧರರ ಸಂಘದ ಕಾರ್ಯಕಾರಿ ಸಮಿತಿ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಸೆಂಟ್ರಲ್ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಅಕ್ಟೋಬರ್ 15 ರಂದು ಬೆಂಗಳೂರಿನಲ್ಲಿ ನಿಧನರಾಗಿರುತ್ತಾರೆ. ಇವರಿಗೆ 96 ವರ್ಷ ವಯಸ್ಸಾಗಿತ್ತು.

ಇವರ ಧರ್ಮಪತ್ನಿಯವರಾದ **ಶ್ರೀಮತಿ ವಿಜಯಲಕ್ಷ್ಮೀ ಕೆ. ರಾವ್** ಇವರು ಸಹ ಇತ್ತೀಚೆಗೆ 2024ರ ನವೆಂಬರ್ 18 ರಂದು ಬೆಂಗಳೂರಿನಲ್ಲಿ ನಿಧನರಾಗಿರುತ್ತಾರೆ. ಇವರಿಗೆ 92 ವರ್ಷ ವಯಸ್ಸಾಗಿತ್ತು. ಇವರುಗಳು ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು ಮತ್ತು ಅಪಾರ ಬಂಧು ಮಿತ್ರರನ್ನು ಆಗಲಿರುತ್ತಾರೆ.

**ಶ್ರೀ ಶೇಕ್ ಮುಸ್ತಾಕ್ ಅಲಿ** ಅವರು ಬೀದರ್ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾಗಿ 3 ದಶಕಗಳು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸಿದ್ದರು. ಎರಡು ವರ್ಷಗಳ ಕಾಲ ಜಿಲ್ಲಾ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ. 1985ರಲ್ಲಿ ಆಯುಕ್ತರ ಮೂಲ ತರಬೇತಿ ಪಡೆದಿದ್ದರು. 1997ರಲ್ಲಿ ಬೀದರ್‌ನಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿದ ರಾಜ್ಯ ಮಟ್ಟದ 22ನೇ ಜಾಂಬೋರಿಯಲ್ಲಿ ಡಾ॥ ಎಸ್.ಎಸ್. ಸಿದಾರಡ್ಡಿ ಅವರ ನೇತೃತ್ವ ಹಾಗೂ ರಾಜ್ಯ ಸರ್ಕಾರದ ಮಾನ್ಯ ಸಾರಿಗೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ಸಹಕಾರ ಹಾಗೂ ಜಿಲ್ಲೆಯ ಅಧಿಕಾರಿಗಳ ಹಾಗೂ ಸಾರ್ವಜನಿಕರ ಸಂಪೂರ್ಣ ನೆರವಿನೊಂದಿಗೆ ರಾಜ್ಯ ಮಟ್ಟದ ಜಾಂಬೋರಿ ಯಶಸ್ಸಿಗೆ ಸಹಕರಿಸಿದರು.



ಶ್ರೀಯುತರು ಬೀದರ್ ಜಿಲ್ಲೆಯ Family Planning Association ನಲ್ಲಿ ಹಿರಿಯ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ 2015ರಲ್ಲಿ ಸೇವೆಯಿಂದ ನಿವೃತ್ತರಾದರು. ಶ್ರೀಯುತರು ನವೆಂಬರ್ 03, 2024ರಂದು ನಗರದ ಟೀಚರ್ಸ್ ಕಾಲೋನಿಯ ಅವರ ನಿವಾಸದಲ್ಲಿ ನಿಧನಹೊಂದಿದರು. ಇವರ ನಿಧನದಿಂದ ಬೀದರ್ ಜಿಲ್ಲೆಗೆ ತುಂಬಲಾರದ ನಷ್ಟವಾಗಿದೆ.

ಇವರು ತಮ್ಮ ಧರ್ಮಪತ್ನಿ, ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು ಮತ್ತು ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ. ಇವರು ಬೀದರ್ ಜಿಲ್ಲಾ ಸಂಸ್ಥೆಯ ಬೆಳವಣಿಗೆಗೆ ಸಲ್ಲಿಸಿದ ಸೇವೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದಾರಡ್ಡಿ ಅವರುಗಳು ತಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿರುತ್ತಾರೆ.



ರಾಜ್ಯ ಸಂಸ್ಥೆಯಲ್ಲಿ ಗೈಡ್ ವಿಭಾಗದ ರಾಜ್ಯ ಸಂಘಟನಾ ಆಯುಕ್ತರಾಗಿರುವ ಶ್ರೀಮತಿ ಮಂಜುಳ ಸಿ. ಅವರ ಪತಿ **ಶ್ರೀ ರಾಜಶೇಖರ್ ಎಂ.ಕೆ. ಅವರು** 2024ನೇ ಡಿಸೆಂಬರ್ 05 ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. ಇವರಿಗೆ 59 ವರ್ಷವಾಗಿತ್ತು ಇವರು ಧರ್ಮಪತ್ನಿ ಶ್ರೀಮತಿ ಮಂಜುಳ ಹಾಗೂ ಇಬ್ಬರು ಹೆಣ್ಣುಮಕ್ಕಳಾದ ಕುಮಾರಿ ಐಶ್ವರ್ಯ ಮತ್ತು ಸೌಂದರ್ಯ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿರುತ್ತಾರೆ.



ರಾಯಚೂರು ಜಿಲ್ಲೆ ಸ್ಥಳೀಯ ಸಂಸ್ಥೆ ಮಾನ್ವಿಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ನರಸಿಂಹಮೂರ್ತಿ ದೇಸಾಯಿ ಅವರ ತಂದೆಯವರಾದ **ಶ್ರೀ ಎಂ.ಕೆ. ದೇಸಾಯಿ** ಹಿರಿಯ ವಕೀಲರು ಮಾನ್ವಿ ಅವರು ನವೆಂಬರ್ 09 ರಂದು ನಿಧನರಾದರು. ತಮ್ಮ ಇಬ್ಬರು ಮಕ್ಕಳನ್ನು ಅವರ ವಿದ್ಯಾರ್ಥಿ ದೆಸೆಯಿಂದಲೇ ಸ್ಕೌಟಿಂಗ್ ಚಳವಳಿಯಲ್ಲಿ ಭಾಗವಹಿಸಿ ಸೇವೆ ಸಲ್ಲಿಸಲು ಸ್ಫೂರ್ತಿ ತುಂಬಿದ ಅವರು ತಮ್ಮ ಮೂವರು ಮೊಮ್ಮಕ್ಕಳಾದ ಕುಮಾರಿ ಐಶ್ವರ್ಯ ದೇಸಾಯಿ, ರಾಜ್ಯ ಪುರಸ್ಕಾರ್ ಗೈಡ್ಸ್ ಕುಮಾರಿ ಮೇಧಾ ದೇಸಾಯಿ, ಕುಮಾರಿ ವೈಷ್ಣವಿ ದೇಸಾಯಿ, ಹೀರಖ್ ಪಂಕ್ ಬುಲ್‌ಬುಲ್‌ಇವರನ್ನು ಚಳುವಳಿಯಲ್ಲಿ ಭಾಗವಹಿಸಿ ಚಟುವಟಿಕೆಗಳನ್ನು ನಡೆಸಲು ಪ್ರೇರಣೆ ನೀಡಿದ್ದಲ್ಲದೆ ಸ್ಥಳೀಯ ಸಂಸ್ಥೆಯ ಕಾರ್ಯಕ್ರಮಗಳಿಗೆ ಸಹಕಾರ ನೀಡುತ್ತಿದ್ದರು.



ಚಿಕ್ಕಬಳ್ಳಾಪುರ ಜಿಲ್ಲಾ ಗೌರಿಬಿದನೂರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಗಿರಿಧರ್ ವೈ.ಜಿ. ಇವರ ಸುಪುತ್ರ ಕಬ್ ವಿದ್ಯಾರ್ಥಿ **ಕುಮಾರ ಮೌನೇಶ್** 4ನೇ ತರಗತಿ ಕೇಂದ್ರೀಯ ವಿದ್ಯಾಲಯ ಇವರು ನವೆಂಬರ್ 27 ರಂದು ಅಪಘಾತದಲ್ಲಿ ನಿಧನಹೊಂದಿರುತ್ತಾನೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

-ರಾಜ್ಯ ಕಾರ್ಯದರ್ಶಿ





ನವೆಂಬರ್ 14 ರಂದು ದಾವಣಗೆರೆ ಜಿಲ್ಲೆ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಕೇಂದ್ರದಲ್ಲಿ ನಡೆದ ಪದಕ ತರಬೇತಿ ಶಿಬಿರ ಮತ್ತು ಮಕ್ಕಳ ದಿನಾಚರಣೆ ಹಾಗೂ ದಿ. ಕೊಂಡಜ್ಜಿ ಬಸಪ್ಪನವರ 42ನೇ ಸ್ಮರಣೆ, ಶಾಮನೂರು ಕಲ್ಲಪ್ಪ ಸಾವಿತ್ರಮ್ಮ ಆಡಳಿತ ಭವನ ಮತ್ತು ಎಂ.ಕೆ. ಪಾಣಿ ಅತಿಥಿಗೃಹ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಜಿ.ಎಂ. ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಸುರೇಶ್ ಬಿ. ಇಟ್ನಾಳ್, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಡಾ॥ ಕೆ.ಬಿ. ಗುರುಮೂರ್ತಿ, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಕರಿಯಮ್ಮ ಹಾಗೂ ಇತರ ರಾಜ್ಯ, ಜಿಲ್ಲಾ ಪದಾಧಿಕಾರಿಗಳು, ಕೊಂಡಜ್ಜಿ ಗ್ರಾಮಸ್ಥರು ಉಪಸ್ಥಿತರಿದ್ದರು.



ನವೆಂಬರ್ 04 ರಿಂದ 08ರ ವರೆಗೆ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಶ್ರೀ ಮಠ ಸಾಣೆಹಳ್ಳಿಯಲ್ಲಿ ನಡೆದ ರಾಜ್ಯ ಮಟ್ಟದ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಸಿರಿಧಾನ್ಯ ಮಾಹಿತಿ ಶಿಬಿರದ ಉದ್ಘಾಟನೆಯನ್ನು ಶ್ರೀ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ನೆರವೇರಿಸಿದರು. ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಸಿ.ಎಸ್. ಈಶ, ಹೊಸದುರ್ಗ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮೋಹಿಸಿನ್, ರಾಜ್ಯ ಸಂಘಟನಾ ಆಯುಕ್ತೆ ಶ್ರೀಮತಿ ಸಿ. ಮಂಜುಳ, ಚಿತ್ರದುರ್ಗ ಜಿಲ್ಲಾ ಸಂಸ್ಥೆ ಸ್ಥಾನಿಕ ಆಯುಕ್ತರಾದ ಶ್ರೀ ಜಿ.ಎಸ್. ಉಜ್ಜನಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಯೋಗರಾಜ್, ರಾಜ್ಯ ಪರಿಷತ್ ಸದಸ್ಯರಾದ ಶ್ರೀ ಕೆ. ಬಸವರಾಜ್, ಡಾ. ಸುಮಂಗಲಾಮೇಟಿ, ಶ್ರೀ ರೇಖಾ ಮತ್ತು ಇತರ ಜಿಲ್ಲಾ, ಸ್ಥಳೀಯ ಪದಾಧಿಕಾರಿಗಳು ಭಾಗವಹಿಸಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26